ಸಂಪುಟ — ೧೦

ಸಂಚಿಕೆ — ೪

ಸಿದ್ಧಗಂಗಾ



ಹೆಡೆಯೆತ್ತಿ ಜಗಿದ ಘಟಸರ್ಪವಿದು

ಡಿಸೆಂಬರ್ ೧೯೭೪

ಆನಂದದ ಸುದ್ದಿ!

'ಮಾಸಿಕವಾಗಿ ಮಾರ್ಪಾಡು'

—ನೀವು ತಿಳಿಯಿರಿ

—ನಿಮ್ಮ ಮಿತ್ರರಿಗೆ ತಿಳಿಸಿರಿ

"ಸಿದ್ಧಗಂಗಾ"

—ಸುಕ್ಷೇತ್ರ ಸಿದ್ಧಗಂಗೆಯ ಹೆಮ್ಮೆಯ ಪ್ರಕಟಣೆ.

—ತ್ರೈಮಾಸಿಕವಾಗಿ ಒಂದು ದಶಕದ ಯಶಸ್ವೀ ಸೇವೆ.

—ಬರುವ ಪುಣ್ಯಸಂಕ್ರಮಣದಂದು ತನ್ನ ಹನ್ನೊಂದನೇ ವಾರ್ಷಿಕೋತ್ಸವ.

—ಅಂದು ಸಂಭ್ರಮ-ಸಡಗರಗಳೊಂದಿಗೆ **ತ್ರೈಮಾಸಿಕವು ಮಾಸಿಕವಾಗಿ ಮಾರ್ಪಾಡು.**

—ಆತ್ಯಾಕರ್ಷಣೀಯ ಮುಖಪುಟದೊಂದಿಗೆ ಓದುಗರ ಕೈಸೇರಲಿದೆ.

—ಪ್ರಥಮ ಮಾಸಿಕ ನಿಮ್ಮೆಲ್ಲರ ಸ್ವತ್ತಾಗಬೇಕು.

—ಅಂತೆಯೇ ಅದರಲ್ಲಿ ಅನುಭವಿಗಳ, ಹಿರಿಯ ಸಾಹಿತಿಗಳ ಲೇಖನಗಳು.

—ವಿವಿಧ ಕ್ಷೇತ್ರಗಳಿಂದ ಬಂದ ಆಯ್ದ ಮುತ್ತುಗಳು.

—ವೈಚಾರಿಕ, ವೈಜ್ಞಾನಿಕ, ಧಾರ್ಮಿಕ ಹಾಗೂ ಸಾಹಿತ್ಯಕ ಲೇಖನಗಳಿಗಾಗಿ ಮೀಸಲು.

—ವಾರ್ಷಿಕ ಚಂದಾ ಹತ್ತು ರೂ. ಗಳು. ನೀವು ಇಂದೇ ಕಳುಹಿಸಿರಿ. ಪ್ರತಿ ತಿಂಗಳು ಒಂದನೇ ತಾರೀಖು 'ಸಿದ್ಧಗಂಗಾ' ನಿಮ್ಮ ಮನೆ ಸೇರುವಂತೆ ಮಾಡಿರಿ.

—ನಿಮ್ಮ ಬಂಧು-ಮಿತ್ರರಿಗೂ ತಿಳಿಸಿರಿ. ಅವರೊಡನೆ '**ಸಿದ್ಧಗಂಗಾ**'ದ ಸಾಹಿತ್ಯಸುಧೆಯನ್ನು ಹಂಚಿಕೊಳ್ಳಿರಿ.

—101/-ರೂ. ಕೊಟ್ಟು ಆಜೀವ ಸದಸ್ಯರಾಗಿರಿ. ಆಜೀವ ಪರ್ಯಂತ '**ಸಿದ್ಧಗಂಗಾ**' ನಿಮ್ಮದಾಗುತ್ತದೆ. ಅದರ ಎಲ್ಲ ವಿಶೇಷ ಸಮಾರಂಭಗಳಿಗೆ ನೀವು ವಿಶೇಷ ಆಹ್ವಾನಿತರಾಗುವಿರಿ.

—ಸಿದ್ಧಗಂಗಾ ಕ್ಷೇತ್ರ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಎಲ್ಲಾ ಕ್ಷೇತ್ರಗಳಲ್ಲೂ ಅಪ್ರತಿಮ, ಸುಪ್ರಸಿದ್ಧ. ಅಂತೆಯೇ 'ಸಿದ್ಧಗಂಗಾ' ಪತ್ರಿಕೆಯೂ ಸಹ.

ಪ್ರಕಾಶಕರು,
'ಸಿದ್ಧಗಂಗಾ' (ಮಾಸಿಕ)
ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲಾ.

"ಸಿದ್ಧಗಂಗಾ"

ಡಿಸೆಂಬರ್ ೧೯೭೪

ಸಂಪುಟ-೧೦

ಸಂಚಿಕೆ-೪

ಪ್ರಕಾಶಕರು :
ಹೆಚ್. ಬಿ. ಗಂಗಾಧರಯ್ಯ, ಬಿ.ಎಸ್‌ಸಿ., ಬಿ.ಇಡಿ.,
ಹಳೆಯ ವಿದ್ಯಾರ್ಥಿಸಂಘದ ಪರವಾಗಿ.

ಪ್ರಧಾನ ಸಂಪಾದಕರು :
ಕೆ. ಎಪ್. ಶಿವರಾಜ, ಎಂ.ಎ.

ಸಲಹಾ ಸಂಪಾದಕರು :
ಪಂಡಿತ ಚನ್ನಪ್ಪ ಎರೇಸೀಮೆ.

ಸಹ ಸಂಪಾದಕರು :
ಎಂ. ರೇಣುಕಾರಾಧ್ಯ.

ಮುದ್ರಕರು :
ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ,
ಶ್ರೀ ಸಿದ್ಧಗಂಗಾ ಮಠ.

ಸ್ಥಳ :
ಶ್ರೀ ಸಿದ್ಧಗಂಗಾ ಮಠ,
ತುಮಕೂರು ಜಿಲ್ಲಾ-572131.

ಮುಖಪುಟ :

ಸ್ವಾತಂತ್ರ್ಯ ಕ್ರಾಂತಿಯ ಮಹಾಯಜ್ಞಕ್ಕೆ ಅಧ್ವರ್ಯುವಾಗಿ ನಿಂತ ಕಿತ್ತೂರ ವೀರರಾಣಿ ಚೆನ್ನಮ್ಮಾಜಿಯು ಕೂಸನ್ನಾಡಿಸಬೇಕಾದ ಕೋಮಲ ಕೈಯಲ್ಲಿ ಖಡ್ಗ ಹಿಡಿದು ಕುದುರೆಯೇರಿ ಹೊರಟಿಹಳು! ಎಲ್ಲಿಗೆ ?

—ನವೆಂಬರ್ 26 ರಂದು ಈಕೆಯ ಹುಟ್ಟಿದ ದಿನವನ್ನು "ಮಹಿಳೆಯರ ದಿನಾಚರಣೆ" ಯನ್ನಾಗಿ ದೇಶಾದ್ಯಂತ ಆಚರಿಸಲಾಗುತ್ತಿದೆ.

ಶ್ರೀವಾಣಿ

ಭಾರತೀಯ ಸಂಸ್ಕೃತಿಯು ಅತ್ಯಂತ ಮಹತ್ವವಾದುದು, ಎಲ್ಲ ದೃಷ್ಟಿಯಿಂದಲೂ ಸಂಪೂರ್ಣವಾಗಿದೆ, ಎಂಬ ಅಂಶವನ್ನು ಸರ್ವರೂ ಪ್ರತಿ ಇಲ್ಲದೆ ಒಪ್ಪಿಕೊಳ್ಳುತ್ತಿದ್ದಾರೆ. ಆದರೂ ವಿದೇಶೀ ಸಂಸ್ಕೃತಿಗಳನ್ನು ಶ್ಲಾಘಿಸುವ ಹಲವುಮಂದಿ ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ಪ್ರಾಧಾನ್ಯತೆ ಇಲ್ಲವೆಂಬುದಾಗಿ ಆರೋಪಿಸುತ್ತಿದ್ದಾರೆ. ಅನಾದಿಕಾಲದಿಂದಲೂ ಸ್ತ್ರೀಯರನ್ನು ಅಬಲೆಯರೆಂದು ಸುಳ್ಳು ಘೋಷಣೆಮಾಡಿ, ಅವರ ಸ್ವಾತಂತ್ರ್ಯವನ್ನು ಕಸಿದುಕೊಂಡು ಅವರು ಸೇವೆಗೆ ಮಾತ್ರ ಅರ್ಹರೆಂದು ಪರಿಗಣಿಸಲಾಗಿದೆ, ಇತ್ಯಾದಿಯಾಗಿ ಅವರು ಆಕ್ಷೇಪಿಸುತ್ತಿದ್ದಾರೆ. ಆದರೆ, ಈ ಕೂಗು ಸತ್ಯಕ್ಕೆ ದೂರವಾದುದು. ನಮ್ಮ ಸಂಸ್ಕೃತಿಯ ಪೂರ್ಣ ಪರಿಚಯವಿಲ್ಲದವರು ಇತರೆ ಸಂಸ್ಕೃತಿಗಳ ಮೇಲಣ ಅಂಧ ಅಭಿಮಾನದಿಂದ ಹೊಂದಿರುವ ಭ್ರಾಂತಿ ಇದು. ವಾಸ್ತವಾಂಶ ಇದರಿಂದ ಭಿನ್ನವಾಗಿದೆ. ಮಹಿಳೆಯರಿಗೆ ನಮ್ಮ ಸಂಸ್ಕೃತಿಯಲ್ಲಿ ಅತಿ ಶ್ರೇಷ್ಠ ಸ್ಥಾನವನ್ನು ಮೀಸಲಾಗಿಡಲಾಗಿದೆ. ಜಗತ್ತಿಗೇ ಕಾನೂನನ್ನು ಪ್ರಥಮಬಾರಿಗೆ ನೀಡಿದ ಮನು ಚಕ್ರವರ್ತಿಯು ತಾನು ರಚಿಸಿರುವ ಧರ್ಮಶಾಸ್ತ್ರದಲ್ಲಿ "ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರದೇವತಾಃ" ಎಂಬುದಾಗಿ ಅಭಿಪ್ರಾಯ ಪಟ್ಟಿರುವುದು ಈ ವಿಷಯವನ್ನು ಸ್ಥಿರಪಡಿಸುತ್ತದೆ. ಮಾನವನ ಜೀವನವು ಸುಂದರವೂ ಸುಖಮಯವೂ ಆಗಿರಲು ಐಶ್ವರ್ಯ, ವಿದ್ಯೆ, ಶಕ್ತಿ ಈ ಮೂರು ಸಂಪತ್ತುಗಳು ಅತ್ಯಗತ್ಯವಾದುವು. ನಮ್ಮ ಪೂರ್ವಜರು ಐಶ್ವರ್ಯ ಸಂಪತ್ತಿಗೆ ಅಧಿದೇವತೆಯಾಗಿ 'ಲಕ್ಷ್ಮಿ' ಹೆಣ್ಣುಮಗಳನ್ನು ಆಯ್ಕೆ ಮಾಡಿದ್ದಾರೆ. ವಿದ್ಯೆಗೆ ಅಧಿದೇವತೆಯಾಗಿ ಹೆಣ್ಣುಮಗಳು 'ಸರಸ್ವತಿ'ಯನ್ನು ಸ್ವೀಕರಿಸಿದ್ದಾರೆ. 'ದುರ್ಗಾದೇವಿ' ಹೆಣ್ಣುಮಗಳು ಶಕ್ತಿಯ ಅಧಿದೇವತೆಯಾಗಿ ಆರಾಧಿಸಲ್ಪಡುತ್ತಿದ್ದಾಳೆ. ಪ್ರಾಯಃ ಪ್ರಪಂಚದ ಮತ್ತಾವ ಸಂಸ್ಕೃತಿಯಲ್ಲೂ ಸ್ತ್ರೀಯರಿಗೆ ಇಷ್ಟು ಪವಿತ್ರವಾದ ಸ್ಥಾನ ದೊರೆಕಿರಲಾರದು. ಪ್ರಾಚೀನ ಅರ್ವಾಚೀನ ಕಾಲಗಳೆರಡರಲ್ಲೂ ಭಾರತೀಯ ಮಹಿಳೆಯರು ತಮ್ಮ ಸಚ್ಚಾರಿತ್ರ್ಯ, ತ್ಯಾಗ ಭಾವನೆ, ಪಾತಿವ್ರತ್ಯಗಳಿಂದ ಕೂಡಿದ ಆದರ್ಶ ಜೀವನವನ್ನು ಸಾಗಿಸಿ ವಿಶ್ವದಲ್ಲೇ ಖ್ಯಾತರಾಗಿರುವರ ನಿದರ್ಶನಗಳು ಸಹಸ್ರಾರು ಇವೆ. ಆದರೆ ನಮ್ಮ ದೌರ್ಭಾಗ್ಯವೋ ಏನೋ ಬಹುಪಟ್ಟಿಗೆ ಈ ಒಂದು ಆದರ್ಶವು ಆಧುನಿಕತೆಯ ಸೋಗಿನಲ್ಲಿ ಕ್ರಮೇಣ ಶಿಥಿಲಗೊಳ್ಳುತ್ತಿದೆ. ಇದು ಶೋಚನೀಯ. ಸ್ತ್ರೀ ಜನಾಂಗ ಎಚ್ಚೆತ್ತು ಈ ದಿಶೆಯಲ್ಲಿ ಗಮನಹರಿಸಿ ಸೂಕ್ತ ರೀತಿ ಮಾರ್ಪಾಡಾಗಬೇಕಾದ ಅಗತ್ಯ ಎಂದಿಗಿಂತಲೂ ಇಂದು ಅತಿಯಾಗಿದೆ.

——

ಸಹೃದಯ ಓದುಗರ ತೃಪ್ತಿಯೇ ನಮ್ಮ ಮುಖ್ಯ ಗುರಿ. ಅವರ ಆಶೋತ್ತರಗಳನ್ನು ಗುರುತಿಸಿ, ಗಮನಿಸಿ ಪೂರೈಸುವ ಯತ್ನ 'ಸಿದ್ಧಗಂಗಾ' ನಡೆಸಿದೆ-ನಡೆಸುತ್ತಿದೆ. ಸುಧಾರಣೆಯ ದಿಶೆಯಲ್ಲಿ, ಜನಪ್ರಿಯಗೊಳಿಸುವ ಉದ್ದಿಶ್ಯ ಸರ್ವರ ಸಲಹೆಗಳಿಗೆ ಸದಾ ಸ್ವಾಗತವಿದೆ.

❄ ಎರಡು ಮಾತು ❄

ಬರುವ ಜನವರಿಯಲ್ಲಿ ಪುಣ್ಯ ಸಂಕ್ರಮಣದಂದು **'ಸಿದ್ಧಗಂಗಾ'** ಹನ್ನೊಂದನೇ ವರ್ಷಕ್ಕೆ ಅಡಿಯಿಡುತ್ತಿದೆ. ಹೆಚ್ಚಿನ ಸೇವೆ ಸಲ್ಲಿಸಲು ಸಂಕಲ್ಪಿಸಿದೆ. ಇದೇ ಸಂದರ್ಭದಲ್ಲಿ **ಮಾಸಿಕವಾಗಿ** ಮಾರ್ಪಾಡಾಗುತ್ತಿದೆ. ನಮ್ಮ ಲೇಖಕ ಬಳಗ, ಓದುಗ ಬಂಧುಗಳು, ಅಭಿಮಾನಿ ಸಜ್ಜನರು ಆದರಿಸಿ ಪ್ರೋತ್ಸಾಹಿಸುವಿರಾಗಿ ನಂಬಿದ್ದೇವೆ.

ನಿರೀಕ್ಷಿಸಿರಿ !
ಮುಂಬರುವ ಸಂಚಿಕೆಯಲ್ಲಿ

ಪ್ರಾರ್ಥನೆಯು ಒಂದು ಆಹಾರ
—ಅದಿಲ್ಲದೆ ಬದುಕುವುದು ಸಾಧ್ಯವಿಲ್ಲ. ಅದು ಹೇಗೆ ? ತದ್ದಲತೆ ವಿಶ್ವೇಶ್ವರ ಶರ್ಮರ ವಿವರಣೆ.

ಗಾಂಧಿ-ಠಾಕೂರ್
—ಇವು ಸಂಸ್ಕೃತಿಯ ಎರಡು ಶಿಖರಗಳು. ನೀಲತ್ತಹಳ್ಳಿ ಕಸ್ತೂರಿಯವರ ನಿರೂಪಣೆ.

ಒಂದು ಧರ್ಮದ ಎರಡು ಮುಖಗಳು
—ಒಂದು ಸ್ವಾರಸ್ಯ ಪ್ರಸಂಗ. ಹಿಂದಿ ಬಾಷೆಯಿಂದ ಬಿ. ಸುಬ್ಬಾಯ ಅಡಿಗರ ಅನುವಾದ

ಬಾಳಿಗೊಂದು ಹವ್ಯಾಸ
—ಅದು ವೃತ್ತಿಯೂ ಅಲ್ಲ, ಉದ್ಯೋಗವೂ ಅಲ್ಲ. ಆದರೂ ಪ್ರತಿಯೊಬ್ಬರಿಗೂ ಅದು ಇರಬೇಕು ಎನ್ನುತ್ತಾರೆ ನಾ. ಡಿಸೋಜ

ಪುಟ ತಿರುವಿದಾಗ

ಇಂದಿನ ತರುಣರು-ಸಂಸ್ಕೃತಿ ಹೀನರೇ ?

ಸಂಸ್ಕೃತಿ — ಎಲ್ಲರೂ ಇದರ ಬಗ್ಗೆ ವ್ಯಾಖ್ಯಾನ ಮಾಡುವವರೇ ಆಗಿದ್ದಾರೆ. ಈ ವಿಷಯದ ಬಗ್ಗೆ ಇಂದು ಮಾತನಾಡುವ ಬಹುತೇಕ ಮಂದಿ ಹಿರಿಯರು ಆದರ ಇಂದಿನ ಪರಿಸ್ಥಿತಿಯತ್ತ ನಮ್ಮ ಗಮನ ಸೆಳೆಯುತ್ತಿದ್ದಾರೆ. ಅದನ್ನು ಉಳಿಸಿ ಬೆಳೆಸಿರೆಂದು ಕಳಕಳಿಯಿಂದ ಹೇಳುತ್ತಿದ್ದಾರೆ. ಜೊತೆಜೊತೆಯಲ್ಲೇ, ಈ ಸಂಸ್ಕೃತಿಯನ್ನು ಇಂದಿನ ತರುಣ ಪೀಳಿಗೆ ಉಳಿಸಬಲ್ಲದೇ ಎಂಬ ಶಂಕೆ ಅವರಿಗಿದೆ. ಅವರಲ್ಲಿನ ಈ ಕಳವಳ ಪದೇ ಪದೇ ವಿವಿಧ ಹಂತಗಳಲ್ಲಿ ವ್ಯಕ್ತವಾಗುತ್ತಿದೆ.

ಒಂದು ಪೀಳಿಗೆಯು ಅಭ್ಯಾಸಮಾಡಿ, ಅನುಸರಿಸಿಕೊಂಡು ಬಂದ ಪದ್ಧತಿಗಳನ್ನು ಕಾಲಾನುಕ್ರಮೇಣ ಸಮಯ ಸನ್ನಿವೇಶಗಳಿಗೆ ಹೊಂದಿಕೊಳ್ಳುವ ಯತ್ನ ಎಲ್ಲಕಾಲದಲ್ಲೂ ನಡೆದಿದೆ, ನಡೆಯುತ್ತಿದೆ. ಇದು ನಡೆಯಬೇಕಾದ್ದು ಅನಿವಾರ್ಯವೆಂಬುದು ಒಪ್ಪಬೇಕಾದ ಅಂಶ. ಆದರೆ ಪ್ರಸಿದ್ಧ ರೀತಿ ನೀತಿಗಳಿಂದ ದೂರ ಸರಿಯುವುದು ಅಣಃಬಾಂಬುಗಳ ಸಿಡಿತಗಳನ್ನೆದುರಿಸುವಷ್ಟೇ ಕಷ್ಟ. ಕಾರಣ ಸರ್ವವಿದಿತ. ತಮ್ಮ ಕಾಲದಲ್ಲಿ ರೂಪುಗೊಂಡ ಅಥವಾ ತಮ್ಮ ಪೂರ್ವಜರಿಂದ ಹರಿದು ಬಂದ ಸಾಂಸ್ಕೃತಿಕ ನಡೆನುಡಿಗಳನ್ನು ತಮ್ಮ ಜೀವಿತದ ಅವಧಿಯಲ್ಲಿ ತಮ್ಮ ಹಿರಿಯರು ದೂರ ಸರಿಸಲೆತ್ನಿಸುವುದನ್ನು ಕಂಡು ತಾಳುವುದು ಹಿರಿಯರಿಗೆ ಸಾಧ್ಯವಾಗದ ಮಾತು. ಇದು ಆಕ್ಷೇಪಣೆ ಅಲ್ಲ. ನಿಜಕ್ಕೂ ನೈಜತೆಯ ಸ್ಪಷ್ಟನೆ ಮಾತ್ರ. ಪ್ರಾಯಃ ಇಂಥಹ ಮನೋಭಾವದ ವ್ಯಕ್ತಿಗಳು

ಆಲೋಚನಾಪರ

ಸ್ವೀಕರಿಸಿ, ಆಚರಿಸಿದ ಅನೇಕ ಪದ್ಧತಿಗಳು ಅವರ ಕಾಲದ ಹಿರಿಯರಿಂದ ಟೀಕಿಸಲ್ಪಟ್ಟಿರಲೇಬೇಕಲ್ಲವೆ ?

ಅನುಭವವಿಲ್ಲದ ಮಾನವ ಕಾನನದ ಕಹಳಾರವ. ಅಂತೆಯೇ ಅನುಭವಿ ಹಿರಿಯರು ಸಮಾಜದಲ್ಲಿ ತರುಣರ ಮೇಲೆ ಹಾಕುವ ಕಡಿವಾಣ ಅಗತ್ಯ. ಅದಿಲ್ಲದಿರೆ ಅನನುಭವಿ ಕಿರಿಯರು ಹಾದಿತಪ್ಪಿಯಾರೆಂಬ ಶಂಕೆ ಅಸತ್ಯವೇನಲ್ಲ. ಆದರೆ, ಯುವಕರೆ ಸ್ವಂತ ಜವಾಬ್ದಾರಿಯನ್ನರಿತು ಆಗು-ಹೋಗುಗಳ ಅನುಭವವನ್ನು ಹೊಂದಿದ್ದ ಪ್ರೌಢ ವಯಸ್ಕರಾದ ತರುಣರು ತಮ್ಮ ಸುಖ-ಸಂತೋಷಗಳ ಇತಿ-ಮಿತಿಗಳನ್ನು ನಿರ್ಧರಿಸಿಕೊಳ್ಳಲು ಸಮರ್ಥರಾಗಿರುತ್ತಾರೆ. ಅವುಗಳನ್ನಾಧರಿಸಿ ತಮ್ಮ ರೀತಿ-ನೀತಿಗಳನ್ನು ನಡೆನುಡಿಗಳನ್ನು ರೂಪಿಸಿಕೊಳ್ಳುವ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಬಯಸುವುದು ಸ್ವಾಭಾವಿಕ. ಇದು ಸಾಮಾನ್ಯವಾಗಿ ಚಿಗುರುವ ಸಸಿಗಳ ಸರಳ ಅಪೇಕ್ಷೆ. ಇದನ್ನು ಸ್ವೇಚ್ಛಂದ ಪ್ರವೃತ್ತಿಯೆಂದು ಬಣ್ಣಿಸುವುದಾಗಲೀ, ಆ ಚಿಗುರನ್ನು ಚಿವುಟುವುದಾಗಲೀ ಮನುಷ್ಯ ಧರ್ಮಕ್ಕೆ ವಿರುದ್ಧವಾದುದು. ಬದಲಾಗಿ ಅಂಕುರಿಸಿ ಚಿಗುರಲಿಚ್ಛಿಸುತ್ತಿರುವ ಈ ಗಿಡ-ಬಳ್ಳಿಗಳಿಗೆ ನೀರೆರೆದು ನೇರ ಹಾದಿಯನ್ನು ತಲುಪಿಸುವ ಹೊಣೆಗಾರಿಕೆಯನ್ನು ಹೊರಬೇಕಾದುದು ಅಗತ್ಯವಾಗಿದೆ.

ಸಮಾಜವು ಹರಿಯುತ್ತಿರಬೇಕು. ಇದ್ದುದು ಬದಲಾಗದೆ, ಇರುವುದು ಇದ್ದಂತೆಯೇ ಇರುವುದು ಸಾಧ್ಯವಿಲ್ಲ. ಬದಲಾವಣೆ ಅನಿವಾರ್ಯ. ಅಗತ್ಯವೂ ಹೌದಲ್ಲವೇ ? ವ್ಯತ್ಯಾಸ-ವೈಪರೀತ್ಯಗಳನ್ನು ಗಹನವಾಗಿ ಪರಿಗಣಿಸುವುದು ಸೂಕ್ತವಲ್ಲ. ಅದೂ ಒಂದು ದೈನಂದಿನ ಘಟನೆಯೆಂದಷ್ಟೇ ಪರಿಗಣಿಸಿದರಾಯ್ತು. ಈ ಮನೋಭಾವವುಳ್ಳವರು ಗಮನಿಸಿ ಖಂಡಿಸುತ್ತಿರುವ

ಯುವಜನಾಂಗದ ಹೊಸ ರೀತಿ-ನೀತಿಗಳು ನಿಜಕ್ಕೂ ಮಹಾ ಅದ್ಭುತಗಳೇನಲ್ಲ. ಯುವಕರ ಬಗೆಗೆ ಒಲವು ಔದಾರ್ಯಗಳನ್ನುಳ್ಳ ಹಲವರು ಈ ಬದಲಾವಣೆಗಳನ್ನು—Old wine in new bottles ಎಂದಿದ್ದಾರೆ. ಲಘುವಾದ ಪರಿಗಣನೆ ಅಷ್ಟೆ. ಇವುಗಳ ಬಗ್ಗೆ ಔದಾಶೀನ್ಯ ಅವರಲ್ಲಿಲ್ಲ.

ಸಂಸ್ಕೃತಿಹೀನವಾದುದು ಯುವಜನಾಂಗ, ಧರ್ಮಶ್ರದ್ಧೆ ಇವರಲ್ಲಿಲ್ಲ ಎಂಬುವರ ವಾದವು ಕೇವಲ ಯುವಕರಲ್ಲಿನ ಬಾಹ್ಯಾಡಂಬರಗಳ ಬಗೆಗೆ ಮಾತ್ರ ಸಾಕ್ಷ್ಯಾಧಾರಗಳನ್ನೊದಗಿಸಬಲ್ಲುದೇ ವಿನಾ, ಅವರಲ್ಲಿನ ಬುದ್ಧಿವಿಕಾಸ ಎತ್ತ ವಿಸ್ತರಿಸುತ್ತಿದೆ ಎಂಬುದನ್ನರಿಯುವ ಸಾಹಸ ಮಾಡಿಲ್ಲ. ಅಂದಮಾತ್ರಕ್ಕೆ ಇವರೆಲ್ಲರೂ ತರುಣ ಪೀಳಿಗೆಯ ದ್ವೇಷಿಗಳೇ? ಅಲ್ಲವೇ ಅಲ್ಲ! ಇದು ಸೋಜಿಗದ ಸಂಗತಿ. ಅಂತೂ ಆಕ್ಷೇಪಿಸುವವರೆಲ್ಲರೂ ಯುವಕರ ಬಾಳಿ ಧೀವಿಗೆ ಸದಾ ಬೆಳಗಲೆಂದು ಆಶಿಸುವರೇ ಆಗಿದ್ದಾರೆ. ಅವರ ಹಿತವನ್ನೇ ಬಯಸುತ್ತಾರೆ. ಆದರೆ ಅವರ ಮನಃಪಟಲದಲ್ಲಿನ ವಿಚಾರ ತರಂಗಗಳನ್ನರಿತು ಅರ್ಥ ಮಾಡಿಕೊಳ್ಳುವ, ಆ ವಿಚಾರ ಸರಣಿಗಳಿಗೆ ಉತ್ತೇಜನ ನೀಡುವ ಉದಾತ್ತ ಭಾವನೆ ಅವರಲ್ಲಿ ಬರುವುದಾದರೆ ಈ ವಿವಾದ ಉದ್ಭವಿಸದು.

ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ಎಲ್ಲ ಬಗೆಯ ಲೇಖಕರಿಂದ ಸಣ್ಣಕಥೆ, ಕವನ, ವಿಮರ್ಶೆ, ವ್ಯಕ್ತಿ ಚಿತ್ರಣ ಇತ್ಯಾದಿಗಳನ್ನು ಸ್ವಾಗತಿಸುತ್ತದೆ. ಪ್ರಚಲಿತ ವಿಷಯಗಳನ್ನಾಧರಿಸಿದ ವೈಚಾರಿಕ, ಜಾಗೃತಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಹಿತ್ಯಕ ಲೇಖನಗಳಿಗೆ ಹೆಚ್ಚಿಗೆ ಪುರಸ್ಕಾರ ನೀಡಲಾಗುತ್ತಿದೆ. ಲೇಖನಗಳು ಹಾಳೆಯ ಒಂದೇ ಪಕ್ಕದಲ್ಲಿ ಬರೆದಿರಬೇಕು. ಬರವಣಿಗೆ ನಾಲ್ಕು ಐದು ಪುಟಗಳಿಗೆ ಮೀರದಂತಿದ್ದರೆ ಒಳಿತು. ಲೇಖನಗಳು ಸ್ವೀಕೃತವಾದಲ್ಲಿ ಯಥಾವಕಾಶ ಪ್ರಕಟಿಸುವುದಾಗುತ್ತೆ. ಪ್ರಕಟಿತ ಲೇಖನಗಳಿಗೆ "ಸಿದ್ಧಗಂಗಾ" ತಾನು ನಿಗದಿ ಮಾಡಿಕೊಂಡಿರುವಂತೆ ಸಂಭಾವನೆ ನೀಡಲಾಗುವುದು

ಚಂದಾ ವಿವರ.

ವಾರ್ಷಿಕ ಚಂದಾ ರೂ: 10–00
[ಒಂದು ವಿಶೇಷ ಸಂಚಿಕೆ ಮತ್ತು ಅಂಚೆ ವೆಚ್ಚ ಸೇರಿ]

ಬಿಡಿ ಪ್ರತಿ : 1–00
[ಅಂಚೆ ವೆಚ್ಚ ಪ್ರತ್ಯೇಕ]

ಹಸಿವು

—ಕು॥ ಬಿ. ಎಸ್. ನೇತ್ರಾವತಿ

ಖಾಲಿ ಕೋಣೆಯಲ್ಲಿ ಒಂದು ಮರದ ಪೆಟ್ಟಿಗೆ–ಕಂ–ಸ್ಟೂಲಿನ ಮೇಲೆ ಕುಳಿತು, ಎಷ್ಟೋದಿನಗಳಿಂದ ಅಡೆತಡೆಯಿಲ್ಲದೆ ಹುಲುಸಾಗಿ ಬೆಳೆದಿದ್ದ ಕ್ರಾಪಿನ ಮೇಲೆ ಕೈಯಾಡಿಸುತ್ತ, 'ಇಷ್ಟು ಬೆಳೆ ನನ್ನ ತಲೆಯ ಮೇಲಿದೆಯೇ? ಅಥವಾ ಎಂದಾದರೂ ಇತ್ತೆ?' ಎಂದು ಅಚ್ಚರಿಪಡುತ್ತ, ಕೊಳಕು ಪರದೆ ಮುಚ್ಚಿದ್ದ ಕಿಟಕಿಯತ್ತ ಅವನು ನೋಡಿದಾಗ, ಅಲ್ಲಿ ಕುಳಿತಿದ್ದ ಗುಬ್ಬಚ್ಚಿಯೊಂದು ಹೊರಕ್ಕೆ ಹಾರಿತು–ಅಯ್ಯೋ ಇವನ ದೃಷ್ಟಿ ನನ್ನ ಮೇಲೆ ಬಿತ್ತೆ–ಎಂದು ಗಾಬರಿಯಾದಂತೆ. ಆ ತೆರೆಯ ಮೇಲೆ ಎಷ್ಟೋ ಇರುವೆಗಳು ಹರಿದಾಡುತ್ತಿದ್ದವು. ಸೂಜಿ ಕಳೆದುಕೊಂಡ ಮುದುಕಿಯಂತೆ ಕಣ್ಣಲ್ಲಿ ಕಣ್ಣಿಟ್ಟು ನೋಡಿದಾಗ ಕಂಡದ್ದು–ಆ ಇರುವೆಗಳು ಹೊತ್ತು ಸಾಗುತ್ತಿದ್ದ ಅಕ್ಕಿಯ ಕಾಳುಗಳು.

ಪಾಪ, ಹಸಿವು!

ನನ್ನಂತೆಯೇ ಹಿಂಗದ ಹಸಿವೇನೋ?

ಇರುವೆಗಳು ಕಷ್ಟಪಟ್ಟು ಕಿಟಕಿಯ ಮೂಲೆಗೆ–ತಮ್ಮ ಗೂಡಿದ್ದಕಡೆಗೆ ಬರುತ್ತಿದ್ದಂತೆಯೇ, ಅವುಗಳ ಹಿಂಗದ ಹಸಿವಿನ ಆಧಾರ–ಆ ಹಕ್ಕಿ ಕಾಳುಗಳು ಜಾರಿ ಕೆಳಗೆ ಬಿದ್ದು ಅಲ್ಲಿ ಚೆಲ್ಲಿದ್ದ ನೀರಿನ ಪಾಲಾಗಿ, ಇರುವೆಗಳು ಕಕ್ಕಾಬಿಕ್ಕಿಯಾಗಿ ಚೆದುರಿದವು– ಕೈಗೆ ಬಂದಿದ್ದು ಬಾಯಿಗೆ ಬರಲಿಲ್ಲವಲ್ಲ–ಎಂದುಕೊಳ್ಳುತ್ತ. ಅವನು ಪಂಚೆಯ ಮೇಲೆ ಹತ್ತಿದ್ದ ಇರುವೆಯನ್ನು ಕೊಡುವುವಂತೆ ಎದ್ದು, ಕಿಟಕಿಯ ಬಳಿಗೆ ಮಹಾ ಉದ್ಧಾರಕನಂತೆ ಹೋಗಿ, ಉಫ್–ಫ್–ಫ್–ಎಂದು ಊದಿದಾಗ ಶೇ. ತೊಂಬತ್ತರಷ್ಟು ಇರುವೆಗಳು ನೀರಿಗೆ ಬಿದ್ದು ಈಜಾಡಿ, ತೊಳಲಾಡಿ ಕೆಲವು ಮಾತ್ರ ಕಷ್ಟಪಟ್ಟು ನೀರಿನಿಂದ ಹೊರಬಂದವು–ಹುಲ್ಲುಕಡ್ಡಿಯೆಂದು ತಿಳಿದು ಸತ್ತ ಇರುವೆಗಳ ಹೆಣಗಳನ್ನೇ ಆಧಾರ ಮಾಡಿಕೊಂಡು.

ಕುರುಚಲು ಪೊದೆಯಂತಿದ್ದ ಗಡ್ಡದ ಮಧ್ಯೆ ಇಣಿಕಿ ನೋಡುತ್ತಿದ್ದ ತುಟಿಗಳಲ್ಲಿ ವಿಕಟನಗು ಕಂಡೂಕಾಣದಂತೆ ಮಿಂಚುತ್ತಿದ್ದಾಗ ಗುಬ್ಬಚ್ಚಿ ಒಳಗೆ ಬರಲು ಹವಣಿಸಿ, ಇವನ ದೃಷ್ಟಿಗೆ ಬೀಳಬಾರದೆಂಬಂತೆ ಹಿಂದಕ್ಕೆ ಹೋಗಿ, ಕೊನೆಗೆ ಒಳಗೆ ಬರುವ ಯೋಜನೆಯನ್ನೇ ಸದ್ಯಕ್ಕೆ ಕೈಬಿಟ್ಟು ಅಂಗಳದಲ್ಲಿದ್ದ ಒಂದು ಮೋಟು ಮರದ ಮೇಲೆ ಕುಳಿತಿತು. ಅಷ್ಟಾದರೂ ಅವನ ಕಾಕದೃಷ್ಟಿ ಅದರ ಮೇಲೆ ಬಿದ್ದೇ ಇರಬೇಕು; ಕಿಟಕಿಯಲ್ಲಿ ಚೆಲ್ಲಿದ ನೀರನ್ನು ಕೈಯಲ್ಲಿ ಬಾಚಿ ಅವನು ಗುಬ್ಬಚ್ಚಿಯತ್ತ ಎರಚಿದ. ಸತ್ತೆನೋ, ಬದುಕಿದೆನೋ ಎಂಬಷ್ಟು ಹೆದರಿದಂತೆ ಗುಬ್ಬಚ್ಚಿ ಅಲ್ಲಿಂದ ಹಾರಿ ಪಕ್ಕದ ಮನೆಯ ಕಿಟಕಿಯನ್ನು ಆಶ್ರಯಿಸಿದಾಗ ಅಲ್ಲಿದ್ದ ಒಂಟಿಗುಲಾಬಿ, ಆ ಒಂಟಿ ಗುಲಾಬಿಯೊಂದಿಗಿದ್ದ ಜಡೆ ಅವನ ಕಣ್ಣುಗಳನ್ನು ಸೆಳೆಯಿತು.

ಒಂದೇ ಜಡೆಯೆಂದಮೇಲೆ ಕೂದಲು ನೀಳವಾಗಿಯೇ ಇರುವಂತೆ ತೋರುತ್ತದೆ. ಆದರೆ ಸಹರಾ ಮರುಭೂಮಿಯನ್ನು ಮೀರಿಸುವಂತಹ ಬಂಜರು ಅಂಗಳದಲ್ಲಿ ಅಂತಹ ಸುಂದರ ಗುಲಾಬಿಯೆಲ್ಲಿಂದ?

ನಿಜನಿಜ ಈಗ ಜ್ಞಾಪಕಕ್ಕೆ ಬಂದಿತು– ಅದೇ ಗುಲಾಬಿಯನ್ನೇ ಅಲ್ಲವೇ, ನಿನ್ನೆ ತಾನು ಮಾರ್ಕೆಟ್ ಬಳಿ ಹುಡುಗಿಯೊಬ್ಬಳ ಬಳಿ ಕೊಳ್ಳಲು ಹೋಗಿ ಅವಳು ತೋರಿದ ಗೊಂಚಲನ್ನು ಪೂರ್ತಿಯಾಗಿ ಕೊಳ್ಳಲು ಹಣವಿಲ್ಲದೆ ಪೆಚ್ಚು ಮುಖ ಮಾಡಿಕೊಂಡು ಅವಳ ಬಳಿಯೇ ಬಿಟ್ಟು ಬಂದಿದ್ದು? ಆದರೆ, ಅದು ಇಲ್ಲಿಗೆ ಬಂದ ದಾರಿ?

ಪಕ್ಕದ ಮನೆಯವರು ಹೊಸದಾಗಿ ಬಂದವರು, ನಿನ್ನೆಯಷ್ಟೇ ಬಂದಿರಬೇಕು. ಅಪರಿಚಿತರು– ಇನ್ನೂ ಪರಿಚಯವಾಗಿಲ್ಲದವರು. ಇಲ್ಲದಿದ್ದರೆ ನನ್ನ ಪ್ರಶ್ನೆಗೆ ಉತ್ತರ ಸಿಗುತ್ತಿತ್ತು.

ಆದರೆ ಪರಿಚಯ ಹೇಗಾಗಬೇಕು? ನನ್ನ ಸುಶೀ ಇದ್ದಿದ್ದರೆ, ಅವಳಿಂದ ಆದರ ಪರಿಚಯವಾಗುತ್ತಿತ್ತು.

ಸುಶೀ...........

ಯಾವುದೋ ಕನಸಿನಲ್ಲಿ ಮದುವೆ ಮಾಡಿಕೊಂಡಂತಿದೆ. ಅವಳ ಕೈಹಿಡಿದರೂ ಸಹ, ಎದುರಿಗೇ ಕಂಡರೂ ದೂರದೂರ ಓಡಿಹೋಗುವ ಮರೀಚಿಕೆಯಂತೆ ನನ್ನ ಕೈಗೇ ಸಿಗಲಿಲ್ಲ, ಅವಳು ವೈಜಯಂತಿಮಾಲಳ ಪಿಕ್ಚರ್‌ಗೆ ಬಾಕ್ಸಗೆ ಹೋಗೋಣವೆಂದರೆ ನಿರಾಕರಿಸಿ ಬಿಟ್ಟಳು. ನನಗೆಂತಹ ನಿರಾಶೆ !

ಅವರ ತಾಯಿಯ ಮನೆ ಹಿಂದಿನ ಬೀದಿಯಲ್ಲೆ. ಆಕೆಗೇನೋ ಖಾಯಿಲೆಯೆಂದೂ, ಸೊಸೆ ತವರಿಗೆ ಹೋಗಿರುವಳೆಂದೂ ತಾಯಿಯ ಶುಶ್ರೂಷೆಗಾಗಿ ಇವಳು ಹೊರಟುಬಿಟ್ಟಳು. ಮುಂದಿನ ಸಮಾಚಾರಗಳೊಂದೂ ತಿಳಿಯಲಿಲ್ಲ, ನನಗೆ. ಆಗಿನಿಂದಲೇ ನನ್ನ ಹಸಿವು ಬಿಟ್ಟದಷ್ಟಾಗತೊಡಗಿತು.

ಆ ಗುಬ್ಬಚ್ಚಿ ಪುನಃ ಪುನಃ ಕಣ್ಣುಮುಚ್ಚಾಲೆಯಾಡುತ್ತಿದೆ. ಒಳಗೂ ಬಾರದು, ಹೊರಗೂ ಹೋಗದು ಅವರ ಯೋಚನೆ ಅದಕ್ಕೆ. ಅರ್ಧವಾಗಿರುವ ಗೂಡನ್ನು ಪೂರ್ತಿ ಕಟ್ಟಿದೆ... ....

ಈಗ ನಾನು ಬಾಡಿಗೆ ಮನೆಯಲ್ಲಿದ್ದಂತೇ, ಸಾಮಾನುಗಳು ಬಾಡಿಗೆಯದೇ ಆಗುತ್ತಿವೆ. ಸಾಮಾನುಗಳು ಮನೆಗೆ ಬರುವುದಿರಲಿ ಬಂದದ್ದೂ ಹೋಗುತ್ತಿವೆ............ ಯಾವುದೋ ಕಾಲದ ಕನಸಾಗಿ ಕಾಣುವ ಕೈಹಿಡಿದ ಪತ್ನಿ ಸುಶೀ ಇದ್ದಿದ್ದರೆ .... ಹೋಗುವ ಸಾಮಾನುಗಳ ಪಟ್ಟಿಗೆ ಸೇರಿದ್ದೆಂದರೆ ಈ ಮರದ ಪೆಟ್ಟಿಗೆ. ಆದರೆ ನನ್ನ ಹಿಂಗದ ಹಸಿವು ತೀರಲು ಈ ಪೆಟ್ಟಿಗೆಯೂ ಹೋದೀತು, ಅದರೊಳಗಿನದೂ ಹೋದೀತು- ನಾನೂ ಹೋದೇನು, ಆಮೇಲೆ ಹಸಿವೆಲ್ಲಿಯದು ?

ಓಹ್ ! ಜಡೆ ತಿರುಗಿತು. ಗುಲಾಬಿ ಮರೆಯಾಯಿತು. ಆದರೆ ಅದು ತಾನೇ ಆದದ್ದಲ್ಲ. ತರಗತಿಯಲ್ಲಿ ಪುಟ್ಟಗೋಳವೊಂದನ್ನು ತಂದು ಅಧ್ಯಾಪಕರು ಕೈಯಿಂದ ಅದನ್ನು ತಿರುಗಿಸಿ ಇದು ಭಾರತ, ಇದರ ನೇರ ಹಿಂಭಾಗಕ್ಕಿರುವುದು ಅಮೇರಿಕಾ.- ಎಂದರಂತೆ. ಜಡೆ ತಿರುಗಿಸಿದ ಕೈ ಕಾಣದು. ಆದರೆ ಹೂಮುಡಿದ ತಲೆಯ ನೇರ ಹಿಂಬಾಗ ಕಾಣಿಸಿದರೆ ಎಷ್ಟೋ ಧನ್ಯ ನಾನು ! ಆದರೂ ಲಭ್ಯವಿಲ್ಲ. ಈ ಹಾಳು ಗುಬ್ಬಚ್ಚಿಯ ಕಾಟದಿಂದಲೋ ಎಂಬಂತೆ ಕಿಟಕಿ ರಪ್ಪೆಂದು ಬಡಿದು ಮುಚ್ಚಿತು. ಗ್ರೌಂಡ್ ಒಳಗಿನದನ್ನು ಪ್ರತಿಬಿಂಬಿಸುವ ಬದಲು ಹೊರಗಿನದನ್ನೇ ಪ್ರತಿಬಿಂಬಿಸುತ್ತಿದೆ.

ಪರಿಚಯವಿಲ್ಲದ ಅಪರಿಚಿತರು ! ಪರಿಚಯವಾಗುವುದೆಂತು ?

ಟರ್‌ರ್‌ರ್‌ರ್........ಕಿರ್ರ್ಕ್

ಆಟೋ ನಿಂತ ಸದ್ದು. ಅವನ ಯೋಚನೆಗಳಿಗೆ ತಾತ್ಕಾಲಿಕ Stop Signal ಕೆಂಪುದೀಪ ತೋರಿಸಿತು. ಬಾಗಿಲು ತೆಗೆದ ಸದ್ದು. ಗೆಜ್ಜೆಯ ಕಾಲು ನಡೆದ ಸದ್ದು. ಬಾಗಿಲಿಗೆ ಬೀಗ ಹಾಕಿದ ಸದ್ದು.

ಆಟೋ ಭಾರದಿಂದ ಅಲುಗಾಡಿದಾಗ ಅದರಲ್ಲಿ ಕುಳಿತುಕೊಳ್ಳಲು ಹೋಗುತ್ತಿದ್ದವರ ಜಡೆ ಕಾಣಿಸಿತು.

ಯಾವ ಊಟ ನನ್ನ ಹಸಿವನ್ನು ಹಿಂಗಿಸಲಾಗದೋ ಅದನ್ನು ನೋಡುವುದೇ ಇಲ್ಲ- ಎಂದುಕೊಂಡು ಪುನಃ ಅದೇ ಪೆಟ್ಟಿಗೆಯ ಮೇಲೆ ಕುಳಿತ. ಆಟೋ ಹೊರಟ ಸದ್ದು ಕಿವಿಗಳನ್ನು ಕೊರೆಯಿತು. ತುಂಬಾ ಹಸಿವಾದಾಗ ರಸದೌತಣವನ್ನು ಬಡಿಸಿ ತಾನು ಎಲೆಗೆ ಕೈಹಾಕುವ ಮುನ್ನವೆ ಎಲೆಯನ್ನೇ ಎತ್ತಿಕೊಂಡು ಹೋದಂತಾಗಿತ್ತು, ಅವನ ಪರಿಸ್ಥಿತಿ.

ಸುಶೀ ನನ್ನ ಹಸಿವನ್ನು ಹಿಂಗಿಸಿದ್ದಿದ್ದರೆ, ಕೈಹಿಡಿದ ತಿಂಗಳೊಳಗಾಗಿಯೇ ನನ್ನನ್ನು ಬಿಟ್ಟು ಹೊರಡದೇ ಇದ್ದಿದ್ದರೇ........ಈ ಕ್ರಾಪು, ಈ ಕೊಳಕು ಬಟ್ಟೆ, ಈ ಕೆಂಪು ಬಣ್ಣ. ಈ ಅಮಲು ನನ್ನದಾಗಿರುತ್ತಿತ್ತೇ ? ಕ್ಲಬ್ಬಿಗೆ ಬರುವವರೆಲ್ಲರ ಪತ್ನಿಯರೆಲ್ಲರೂ ಹೀಗೆ ಮಾಡಿದ್ದಾರೆಯೆ ? ಛೆ, ಛೆ, ಇದು ಕನ್ನಡಿಯನ್ನು ಒಡೆದು ಚೂರುಚೂರು ಮಾಡಿದಂತೆ, ಸಿಹಿಯಾದ ಹಾಲಿನಲ್ಲಿ ಹುಳಿ ಹಿಂಡಿದಂತೆ, ಹಾಳಾಗು ಎಂದ ಶಪಿಸಿದಂತೆ, ಆ ಶಾಪ ನಿಜವೇ ಆದಂತೆ.

ಆದರೆ ಗಂಡನೆನಿಸಿಕೊಂಡವನಿಗೆ ಅವಳನ್ನು ಕಟ್ಟಿಹಾಕುವ ಶಕ್ತಿಯಿರಲಿಲ್ಲವೇ ? ಅದಿಲ್ಲದೆಯೇ ಅವಳನ್ನು ಹೇಗೆ ಮದುವೆಯಾದ ?

ಆದರೂ ಮದುವೆಯಾದ. ಆಗಲೂ ಆಟೋ ಸದ್ದು ಮಾಡುತ್ತಿತ್ತು. ಗುಬ್ಬಚ್ಚಿ ಕಿಟಕಿಯಿಂದ ಕಿಟಕಿಗೆ ಹಾರುತ್ತಿತ್ತು. ಇರುವೆಗಳು ಸಾಲುಸಾಲಾಗಿ ಹೊರಟಿದ್ದವು ಆದರೆ ಅಪ್ಪ, ಅಮ್ಮನ ಬುದ್ಧಿವಾದಗಳನ್ನು ಮಾತ್ರ ತನ್ನ ಕಿವಿಗಳು ಸ್ವಾಗತಿಸಿರಲಿಲ್ಲ. ಗೋರ್ಕಲ್ಲ ಮೇಲೆ ಮಳೆ ಸುರಿದಂತೆ— ಎಷ್ಟೋ ಆಸೆ ಆಮಿಷಗಳನ್ನು ಅಪ್ಪ ಅಮ್ಮ ತೋರಿಸಿದ್ದರು.

ಈಗ ಅಪ್ಪ ಅಮ್ಮ ನನ್ನ ಗುರುತಿಸಿಯಾರೆ ?

ನನ್ನ ಮಗ ಮನ್ಮಥನಂತಿದ್ದಾನೆ— ಎಂದು ಅಮ್ಮ ಹೇಳಿಕೊಳ್ಳುತ್ತಿದ್ದಳು. ನನ್ನ ಮಗ ವಿದ್ಯಾವಂತನಾಗಿ ನಾಗರೀಕನಂತೆ ಬಾಳುತ್ತಾನೆ— ಎಂದುಕೊಂಡಿದ್ದರು, ಅಪ್ಪ. ಈಗ ನನ್ನ ಮುಖ ನೋಡಿದರೆ ಹಾಗಿದೆಯೇ ? ನಾನು ಅವರ ಮಾತುಗಳನ್ನು ಕೇಳಿದ್ದರೆ ಚೆನ್ನಾಗಿರುತ್ತಿತ್ತು ಈ ಕಾಣದ, ಕೇಳದ ಸುಶೀ ಮಾತುಗಳನ್ನು ಕೇಳುವುದಕ್ಕಿಂತ !

ಎಲ್ಲ ಅವಳಿಂದಲೇ ! ಕಾರಣ, ನಾನು ಹೂವಾದೆ, ಅವಳು ದುಂಬಿಯಾದಳು. ನನ್ನ ಹಸಿವು ಹಿಂಗದಾಯಿತು. ಬೆಂಕಿಗೆ ತುಪ್ಪ ಸುರಿದಂತಾಯಿತು- ಇಂತಹುದೇ ಒಂದು ಚಿಕ್ಕ ಮನೆಯಲ್ಲಿ ನನ್ನೊಂದಿಗೆ ಚೊಕ್ಕ ಸಂಸಾರಮಾಡುವ ಹೆಣ್ಣು ಅವಳಾಗಿದ್ದಿದ್ದರೆ............ ಈ ಮನೆಯಲ್ಲಿದ್ದ ಸಾಮಾನುಗಳು ಇಮ್ಮಡಿಸುತ್ತಿದ್ದವು, ಜೀವಂತ ಸಾಮಾನುಗಳನ್ನೂ ಒಳಗೊಂಡು.

ನಡು ನೀರಿನಲ್ಲಿ ಕೈಬಿಟ್ಟರೇ ಎನ್ನ ......

ಕಿಟಕಿಯಲ್ಲಿ ನೀರಿನ್ನೂ ಹಾಗೇಯೇ ಇತ್ತು. ಕೆಳಗೆ ಬಿದ್ದ ಅಕ್ಕಿಗಳನ್ನು ಉಳಿದ ಎಲ್ಲ ಇರುವೆಗಳು ಎತ್ತಿಕೊಂಡು ಹೋಗಲು ಉದ್ಯುಕ್ತವಾಗಿದ್ದವು. ಗುಬ್ಬಚ್ಚಿ ಒಳಗೆ ಬಂದು, ಕಟ್ಟುತ್ತಿದ್ದ ಗೂಡಿನೊಳಗೆ ಇನ್ನಿಷ್ಟು ಹುಲ್ಲುಕಡ್ಡಿಗಳನ್ನು ಸೇರಿಸುತ್ತಿದೆ. ಇರುವೆಗಳು ಗುರಿ ಮುಟ್ಟಿದವು, ಅಕ್ಕಿ ಕಾಳುಗಳನ್ನು ಗೂಡಿನೊಳಕ್ಕೆ ಒಯ್ದೇ ಬಿಟ್ಟವು. ಅವುಗಳ ಹಸಿವು ಹಿಂಗಿದಂತಾಯಿತು.

ಗುಬ್ಬಚ್ಚಿ ಇನ್ನೂ ಕಡ್ಡಿಗಳನ್ನು ಸೇರಿಸಿ ಗೂಡನ್ನು ಪೂರ್ತಿಮಾಡಿಯೇ ಬಿಟ್ಟಿದೆ. ಇನ್ನೊಂದು ಗುಬ್ಬಚ್ಚಿ ಬಂದು ಆ ಗೂಡನ್ನಲಂಕರಿಸಿ ಅದರೊಂದಿಗೆ ಕುಶಲ ಸಂಭಾಷಣೆ ಮಾಡುತ್ತಿದೆ. ಅದರ ಹಸಿವೂ ಹಿಂಗಿದಂತಾಯಿತು. ನನ್ನನ್ನು ಕೇಳುವರಾರು ? ಇಲ್ಲ, ಇಲ್ಲ ಇದೇ ಕೊನೆಯ ನಿರ್ಧಾರ.

ಕ್ಷಮೆಯ ಮೂರ್ತಿಯೇ ಆದ ಅಮ್ಮ ನನ್ನನ್ನು ಕ್ಷಮಿಸಲಾರಳೇ ? ಅದೂ ತನ್ನ ಮುದ್ದು ಮಗನನ್ನು ? ಬೇಡ— ಒಂದು ಒಳ್ಳೆಯ ಮಾತನ್ನಾದರೂ ಆಡದೇ ಇರುವಳೇ ?

ಭೂಮಿ ಗುಂಡಾಗಿದೆಯಂತೆ. ಒಂದುಕಡೆಯಿಂದ ಹೊರಟವನು ಪುನಃ ಅಲ್ಲಿಗೆ ಬಂದು ಸೇರುವನಂತೆ.

ರಿಕ್ಷಾ ಬಂದರೆ.......... ....

ಇನ್ನೇನು ಉಳಿದಿದೆ ಎಂಬಂತೆ ಅವನು ಖಾಲಿ ಕೋಣೆಯ ಸುತ್ತಲೂ ಒಮ್ಮೆ ಕಣ್ಣು ಹಾಯಿಸಿದ. ಏನೂ ಇಲ್ಲ— ಖಾಲೀ ಮೊಳೆಗಳ ಗೋಡೆಯ ಮೇಲೆ, ಬರೀ ಕಸ ನೆಲದಮೇಲೆ! ನಿನ್ನೆಯಷ್ಟೇ ಮನೆಮಾಲೀಕನ ಋಣ ತೀರಿಸಿದ ಮೇಲೆ ಇಷ್ಟಲ್ಲದೇ ಇನ್ನೇನು ಉಳಿದೀತು.

ಇದ್ದೊಂದು ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದು ಹೊರಗೆ ಬಂದು ಅವನ್ನು ಜೋಪಾನವಾಗಿ ಒಂದೆಡೆ ಇಟ್ಟು ಬಾಗಿಲಿಗೆ ಬೀಗ ಹಾಕಿ- ಪುನಃ ಪೆಟ್ಟಿಗೆಯನ್ನು ಹಿಡಿದುಕೊಂಡು ಬೀದಿಗೆ ಬಂದ.

ರಿಕ್ಷಾ ಬಂದರೆ........

ಬಂದರೇನು ? ಹರಿದ ಷರ್ಟಿನ ಜೇಬೂ ಹರಿದಿದೆ.

ಒಂದು ಹೆಜ್ಜೆ ಮುಂದಕ್ಕಿಟ್ಟಕೂಡಲೇ ಅವನೇ ಹೇಳಿ ಕರೆಸಿದಂತೆ, ಹೋಗಿದ್ದ ರಿಕ್ಷಾ ಅವನ ಮುಂದೆ ಬಂದು ನಿಂತಿತು. ಆಗ ಓಲಾಡಿದ ಜಡೆಯೊಂದೇ ಹೊರಗೆ ಬಂದಿತು ಗೆಜ್ಜೆಯ ಕಿಣಿಕಿಣಿ. ನಲುಗಿದ ಗುಲಾಬಿಯನ್ನು ಅವಳು ಬಿಸುಟಳು. ಅದು ಅವನ ಕಾಲ ಬಳಿ ಬಂದು ಬಿದ್ದು, ಅದರ ಮೇಲೆ ಹೆಜ್ಜೆಯಿಡಲು ಹೋಗುತ್ತಿದ್ದವನು ಗಾಬರಿಯಿಂದ ತಲೆಯೆತ್ತಿದ, ಅಪಾರ ಪಶ್ಚಾತ್ತಾಪ, ವ್ಯಥೆ ತುಂಬಿದ ಕಂಗಳಿಂದ ನೋಡಿದ.

ಆಟೋದವನಿಗೆ ದುಡ್ಡುಕೊಟ್ಟವಳು ಹಿಂತಿರುಗಿ ನೋಡಿದಳು.

ಅವನ ಬಾಯಿಂದ ಮಾತು ಹೊರಡದಂತಾಯಿತು. ಗೂಡು ಕಟ್ಟಿದ ಆನಂದದಲ್ಲಿ ಗುಬ್ಬಚ್ಚಿ ಭರ್ರೆಂದು ಅವನ ಪಕ್ಕದಲ್ಲಿಯೇ ಹಾರಿಹೋಯಿತು.

ಅವಳೂ ನಿಂತಿದ್ದಳು, ಶಿಲಾ ಮೂರ್ತಿಯಂತೆ.

ನಿರ್ಧಾರ ಬದಲಾಯಿತು. 'ಸುಶಿ'— ಎಂದು ಪಿಸುಗುಟ್ಟಿದ. ಅಪರಿಚಿತರು, ಪಕ್ಕದ ಮನೆಯವರು ಎಂದುಕೊಂಡಿದ್ದ ಅವನು ಕೆಲ ಚಣಗಳಿಗೆ ಮುನ್ನ. ಆದರೆ ಹಿಂದಿನ ಪರಿಚಯದ ಎಳೆ ಈಗಲೂ ಮುಂದುವರಿದು ತಮ್ಮಿಬ್ಬರನ್ನು ಕಟ್ಟಿಹಾಕಬಹುದೆಂಬ ಕಲ್ಪನೆಯೂ ಅವರಿಗಿರಲಿಲ್ಲ.

"ಈ ಸ್ಥಿತಿಯಲ್ಲಿ ನೀವು!" ಎಂದು ತೊದಲಿದಳವಳು. ಬಹಳವಾಗಿ ಸಿಂಗರಿಸಿಕೊಂಡಿದ್ದ ಅವಳೆದುರು, ಅವನು ಅವಳ ಮನೆಯ ಆಳಿನಂತೆ ಕಾಣುತ್ತಿದ್ದ.

ಅವನು ಒಂದು ಹೆಜ್ಜೆ ಮುಂದೆಯಿಡಲು ಹೋದಾಗ ಅವಳ ಎರಡೂ ಕೈಗಳೂ ಅವನ ಬಲಗೈಯನ್ನು ಬಿಗಿಯಾಗಿ ಹಿಡಿದವು. ಕಾಲುಗಳು ನೆಲಕ್ಕೆ ಕೀಲಿಸಿವೆಯೇನೋ ಎನ್ನಿಸಿದರೂ, ಯಾವುದೋ ಶಕ್ತಿಗೆ ತಲೆಬಾಗಿದಂತೆ ಇಬ್ಬರೂ ಮನೆಯಬಾಗಿಲಿಗೆ ಬಂದಿದ್ದರು.

ಪಕ್ಕದ ಮನೆಯಿಂದ ಹೊರಟವಳು ಅವನ ಮನೆಗೇ ಬಂದಿದ್ದಳು!

ಬೀಗ ಕಳಚಿತು. ಅವರೀರ್ವರನ್ನು ಒಳಗೆ ಕರೆದುಕೊಂಡು ಪುನಃ ಬಾಗಿಲು ಮುಚ್ಚಿತು.

ಅವಳು ಕ್ಷಮಾಭಿಕ್ಷೆ ಕೇಳಲು ಕಾಲಿಗೆರಗಿದಾಗ, ಅವನು ಮೌನವಾಗಿಯೇ ಅವಳನ್ನು ಮೇಲಕ್ಕೆಬ್ಬಿಸಿ ಅವಳನ್ನು ಆಲಂಗಿಸಿಕೊಂಡ. ಅವನ ಹಸಿವು ಇನ್ನು ಹಿಂಗಿದಂತೆಯೇ?

ಕಿಟಕಿಯಲ್ಲಿ ಇರುವೆಗಳು ಸಾಲುಸಾಲಾಗಿ ಅಕ್ಕಿಕಾಳುಗಳನ್ನು ತರುತ್ತಿದ್ದವು. ಗುಬ್ಬಚ್ಚಿಗಳು ಗೂಡಿನಲ್ಲಿ

ಕುಳಿತುಕೊಂಡು ಸರಸಸಲ್ಲಾಪ ನಡೆಸುತ್ತಿದ್ದವು,

ಇನ್ನು ಹಸಿವೆಯೆಲ್ಲಿಯದು? ಊಟದ ಯೋಚನೆಯೊಂದೇ.

ತಿಂಗಳ ಮುಡಿದವನ ವಚನಗಳು

ಅಧ್ಯಾಪಕನ ಜೀವನ ಹೇಗಿರುತ್ತದಯ್ಯಾ?
'ನನ್ನನ್ನು ಉಪಯೋಗಿಸಿರಿ' ಎಂಬ ಕಾಲೊರಸಿನ ಹಾಗೆ!
'ಉಪಾಧ್ಯಾಯಶ್ಚ ವೈದ್ಯಾಶ್ಚ ಕಾರ್ಯಾಂತೇ ಅಪ್ರಯೋಜಕಂ'
ಎಂದರು ಹಿರಿಯರು ಸರಿಯಾಗಿ
ಆ ಕಾಲದಲ್ಲೂ ಹಾಗೆಯೇ
ಈ ಕಾಲದಲ್ಲೂ ಹಾಗೆಯೇ
ಗುರುವಾಗಬಾರದಯ್ಯಾ ಲಫಂಗಳಿಗೆ ತಿಂಗಳಮುಡಿದವನೇ!

ಎಲ್ಲವನೂ ನುಂಗಿನೊಣೆಯುವವನಿದ್ದಾನೆಂದು ತಿಳಿಯಿರೋ
ಎಲ್ಲದಕೂ ಮೇಲೆ ಒಬ್ಬಾನಿದ್ದಾನೆಂದು ಬಗೆಯಿರೋ
ಏನುಗೈದರೂ ಕೇಳುವವರಿಲ್ಲವೆಂದು ಕೊಬ್ಬದಿರೋ
ಕೊಬ್ಬಿದ ಕುರಿಕಟುಕನಿಗೆ ಹಬ್ಬ
ಕಟುಕನಿಗೂ ಕಟುಕನಾದವನೆನುಗೆಟುಕ ತಿಂಗಳಮುಡಿದವನೆ!

—ಚಂದ್ರಶೇಖರ ಐತಾಳ.

ಭೂಮಿಯ ಭಾರವನ್ನು ಹೆಚ್ಚಿಸುತ್ತಿರುವ

ಲೋಭಿ ಮಹಾಶಯನೇ!

ನಿನ್ನ ಸಾಧನೆ ಅದ್ಭುತ; ಯೋಗಿಯ ಸಾಧನೆಯನ್ನೂ ಮೀರಿಸಿದ ಸಾಧನೆ ನಿನ್ನದು. ನಿನ್ನ ತ್ಯಾಗ ಅನ್ಯಾದೃಶ; ಹಣಕ್ಕಾಗಿ ನೀನು ಎಲ್ಲ ಸುಖಗಳನ್ನೂ ತ್ಯಾಗಮಾಡುತ್ತೀ ಮಾನಮರ್ಯಾದೆಗಳನ್ನೂ ಬಿಟ್ಟು ಅತಿನೀಚನ ಹಣಕ್ಕೂ ಕೈ ಚಾಚುವಂತಹ ಸಹಿಷ್ಣುತೆ ನಿನ್ನದು.

ಅಯ್ಯಾ, ನೀನೊಂದು ತಿಗಣೆ; ಬಡವ-ಬಲ್ಲಿದರೆಂಬ ಭೇದವಿಲ್ಲದೆ ಎಲ್ಲರ ರಕ್ತವನ್ನೂ ಹೀರುತ್ತೀ. ನೀನೊಂದು ನೊಣ; ಸ್ವಾರ್ಥಸಾಧನೆಗಾಗಿ ಅತಿ ಹೇಯವಾದ ಕೆಲಸ ಮಾಡುವಾಗಲೂ ನೀನು ಅಸಹ್ಯಪಡುವುದಿಲ್ಲ.

ಕೋಪವನ್ನು ಗೆದ್ದ ಕಾಪುರುಷನಯ್ಯ ನೀನು; ಹಲವರು ನಿನ್ನನ್ನು ಮುಖಭಂಗವಾಗಲೆಂದು ನಿಂದಿಸಿದರೂ ಲಾಭಾಪೇಕ್ಷೆಯಿಂದ ನಗುನಗುತ್ತಾ ಸಹಿಸುವೆಯೇ ಹೊರತು ನಿನ್ನ ನಾಯಿತನವನ್ನು ಬಿಡುವುದಿಲ್ಲ; ಬಾಲವನ್ನು ನೆಟ್ಟಗೆ ಮಾಡಿಕೊಳ್ಳುವುದಿಲ್ಲ.

ನೀನೊಬ್ಬ ಪರೋಪಕಾರಿಯಾದ ಪಾಪಿ; ಏಕೆಂದರೆ ನೀನಾಗಿಯೇ ಉಣ್ಣದೆ, ಉಡದೆ, ಕೊಡದೆ ಐಶ್ವರ್ಯವನ್ನು ಕೂಡಿಸಿಟ್ಟು ಪರರಿಗೆ ಬಿಟ್ಟು ಹೋಗುತ್ತೀ. ನಿನ್ನ ಈ ಸಾಧನೆ ಅನನುಕರಣೀಯ, ನಿನ್ನ ಬಾಳುವೆಗೆ ಧಿಕ್ಕಾರ!

— ಇವೆಲ್ಲಾ ಸಮಾಜಸುಧಾರಕರೂ, ಸಂತರೂ ಹೊರಡಿಸಿದ ಉದ್ಗಾರಗಳು. ಲೋಭಿಯ ಸಮಾಜಘಾತುಕತನ, ದಯಾವಿಹೀನತೆ ಮತ್ತು ಹಿಂಸಾಪ್ರವೃತ್ತಿಗಳಿಗಾಗಿ ಜಿಗುಪ್ಸೆಯಿಂದಲೂ ನೋವಿನಿಂದಲೂ ಹೊರಟ ಉದ್ಗಾರಗಳಿವು.

ಸಾಂಕ್ರಾಮಿಕ ರೋಗ

'ಲೋಭವನ್ನು ಬಿಡು' ಎಂದಿತು ನಮ್ಮ ಸಂಸ್ಕೃತಿ ಏಕೆಂದರೆ ಲೋಭವು ಸಾಂಕ್ರಾಮಿಕ ರೋಗವಿದ್ದಹಾಗೆ. ಅದು ಬೆಳೆಯುತ್ತದೆ, ವ್ಯಾಪಕವಾಗುತ್ತದೆ. ಆಗ ಅದರ ಪ್ರಭಾವವಲವೂ ವಿಸ್ತಾರವಾಗುತ್ತದೆ.

ಭ್ರಷ್ಟಾಚಾರ, ಅನ್ಯಾಯ, ದುರಾಚಾರ, ಲಂಚಕೋರತನ—ಎಲ್ಲಕ್ಕೂ ಮೂಲ ಲೋಭ. ಲೋಭಿಯು ಧರ್ಮ ದ್ರೋಹ, ಸಮಾಜ ದ್ರೋಹ, ದೇಶ ದ್ರೋಹ— ಈ ಯಾವುದಕ್ಕೂ ಹಿಂಜರಿಯುವುದಿಲ್ಲ.

'ಬೇಕು' ಎನ್ನುವ ಬಯಕೆ ಮಾನವೀಯತೆಯ ಮಟ್ಟವನ್ನು ಮೀರಿದಾಗ ಲೋಭವಾಗುತ್ತದೆ. ಅಸುರೀ ಶಕ್ತಿಯಾಗಿ ರಾಷ್ಟ್ರದ ಸುಖಶಾಂತಿಗಳನ್ನು ಕಬಳಿಸುತ್ತದೆ. ಎಲ್ಲೆಲ್ಲೂ ಹಾಹಾಕಾರ ದಾರಿದ್ರ್ಯಗಳನ್ನು ಮೂಡಿಸುತ್ತದೆ. ಇಂತಹ ಕಡುಲೋಭಿಗಳನ್ನು ಸಮಾಜ ಕಲ್ಯಾಣ ದೃಷ್ಟಿಯಿಂದ ಹಿಡಿದು ಬಡಿಯಬೇಕಾಗುತ್ತದೆ; ನಿಗ್ರಹಿಸಬೇಕಾಗುತ್ತದೆ. ಅಂತಹ ನಿದರ್ಶನಗಳು ಇತಿಹಾಸದಲ್ಲಿ ಹೇರಳವಾಗಿವೆ; ಉದಾಹರಣೆಗಳು ಪ್ರಾಚೀನ ಸಾಹಿತ್ಯದಲ್ಲೂ ಇವೆ.

ಅಗಸ್ತ್ಯ

"ರಾಜನ್, ನಾನು ಗೃಹಸ್ಥನಾಗಿದ್ದೇನೆ. ಐಶ್ವರ್ಯವನ್ನು ನಿನ್ನಲ್ಲಿ ಬೇಡಲು ಬಂದಿದ್ದೇನೆ. ನಾನು ನಿನ್ನ ಪ್ರಜೆ. ನನಗೆ ಹೊಟ್ಟೆ-ಬಟ್ಟೆಗೆ ನೀನು ಕೊಡಬೇಕು. ಆದರೆ ಒಂದು ಕರಾರು. ನನಗೆ ನೀನು ಐಶ್ವರ್ಯವನ್ನು ದಾನಮಾಡಿ ಪ್ರಜೆಗಳಿಗೆ ಕೊರತೆಯನ್ನುಂಟುಮಾಡಲಾಗದು. ಪ್ರಜಾಪಾಲನೆಗೆ ಬೇಕಾದುದಕ್ಕಿಂತ ಹೆಚ್ಚಿನ ಹಣವು ನಿನ್ನಲ್ಲಿ ಇರುವುದಾದರೆ ಒಂದಿಷ್ಟನ್ನು ನನಗೆ ಕೊಡು".

— ಕೈ. ಪು. ಲಕ್ಷ್ಮೀನರಸಿಂಹ ಶಾಸ್ತ್ರಿ

—ಅಗಸ್ತ್ಯನು ಶ್ರುತರ್ವನೆಂಬ ರಾಜನನ್ನು ಹೀಗೆಂದು ಬೇಡಿದನು. ಆತನಿಗೆ ಅದೇತಾನೆ ವಿವಾಹವಾಗಿತ್ತು. ವಿದರ್ಭರಾಜನ ಪುತ್ರಿಯಾದ ಲೋಪಾಮುದ್ರೆ ಆತನ ಪತ್ನಿ. ಸಂತಾನಪೇಕ್ಷಿಯಾದ ಗೃಹಸ್ಥನು ಕಾಲಕಾಲಕ್ಕೆ ಬೇಕಾದ ವಸ್ತ್ರಭೂಷಣಗಳನ್ನು ಧರ್ಮ

ಪತ್ನಿಗೆ ಕೊಟ್ಟು, ಕೊರತೆಯಿಲ್ಲದಂತೆ ಬಾಳಿಸಿಕೊಂಡು ಹೋಗಬೇಕೆಂಬುದು ಭಾರತೀಯ ಸಂಸ್ಕೃತಿಯಲ್ಲಿ ಅನೂಚಾನವಾಗಿ ನಡೆದು ಬಂದಿರುವ ಧರ್ಮ. ಆದ್ದರಿಂದಲೇ ಅಗಸ್ತ್ಯನು ಶ್ರುತರ್ವನಲ್ಲಿ ಬೇಡಲು ಬಂದಿದ್ದು. ಶ್ರುತರ್ವನು ಶ್ರೀಮಂತರೆನಿಸಿಕೊಂಡ ಅಂದಿನ ರಾಜರುಗಳಲ್ಲಿ ಹೆಸರು ಪಡೆದಿದ್ದನು. ಆದರೆ ಅಗಸ್ತ್ಯನು ಅಸಾಮಾನ್ಯ ತಪಸ್ವಿ; ಅಧರ್ಮವನ್ನು ಸಹಿಸದ ಕೆಂಡದಂತಹ ಸ್ವಭಾವ ಆತನದು. ಪ್ರಜೆಗಳಿಗೆ ವಿನಿಯೋಗವಾಗ ಬೇಕಾದ ಐಶ್ವರ್ಯವನ್ನು ಆತನು ತನಗಾಗಿ ಬೇಡುವವನಲ್ಲ.

ಶ್ರುತರ್ವ ರಾಜನಿಗೂ ಯೋಚನೆಗಿಟ್ಟುಕೊಂಡಿತು. ಅಗಸ್ತ್ಯನು ಕೇಳುತ್ತಿರುವ 'ಹೆಚ್ಚು ಹಣ' ಎಂದರೇನು? ಅದು ಎಲ್ಲಿಂದ ಬರಬೇಕು? ಪ್ರಜೆಗಳಿಂದಲೇ ತಾನೆ? ಶ್ರುತರ್ವನು ಆದಾಯ-ವೆಚ್ಚಗಳ ಲೆಕ್ಕ ಪತ್ರಗಳನ್ನು ಮಂತ್ರಿಗಳಿಂದ ತರಿಸಿ ಮುನಿಯ ಎದುರಿನಲ್ಲಿಟ್ಟ ಅವನು ಪರಿಶೀಲಿಸಿ ಅಗಸ್ತ್ಯನು ಬೆರಗಾದ. ಮುಚ್ಚು ಮರೆಯೇನೂ ಇಲ್ಲ. ಆದಾಯ ವೆಚ್ಚಗಳು ಸಮ ಸಮವಾಗಿದೆ! ಪ್ರಜಾಪಾಲನೆ ಮತ್ತು ಆಡಳಿತ ಕಾರ್ಯಗಳಿಗೆ ಅಗತ್ಯವಾದಷ್ಟೇ ತೆರಿಗೆ!

ಮತ್ತೊಬ್ಬ ಶ್ರೀಮಂತನಾದ ದೊರೆ ಬ್ರಧ್ನಶ್ವ ಅಗಸ್ತ್ಯನು ಅವನಲ್ಲಿಗೆ ಬಂದ. ಅಲ್ಲೂ ಅಷ್ಟೆ, ವೆಚ್ಚಕ್ಕೆ ಬೇಕಾದಷ್ಟೇ ತೆರಿಗೆಯ ರೂಪದ ಆದಾಯ. ಇನ್ನೂ ಒಬ್ಬ ಶ್ರೀಮಂತರಾಜ ಪುರುಕುತ್ಸನ ಮಗನಾದ ತ್ರಸದ್ದಸ್ಯು ಎಂತಹ ಧರ್ಮ ಪ್ರಭುಗಳಿವರು! ಎಷ್ಟು ನಿರ್ಲೋಭಿಗಳಿವರು! ಅನ್ಯಾಯದ ಹಣ ಒಂದು ಬಿಡಿ ಕಾಸು ಇಲ್ಲ ತೆರಿಗೆಯ ಹೆಸರಿನಲ್ಲಿ ಪ್ರಜೆಗಳನ್ನು ದೋಚುವವರಲ್ಲ ಇವರು ತಮ್ಮ ಭೋಗವಿಲಾಸಗಳಿಗಾಗಿ ಪ್ರಜೆಗಳ ರಕ್ತವನ್ನು ಹಿಂಡಿಕೊಳ್ಳುವ ಸ್ವಾರ್ಥಜೀವಿಗಳಲ್ಲ, ಲೋಭಿಗಳಲ್ಲ ಇವರು.

ಅಗಸ್ತ್ಯನಿಗೆ ಅವರನ್ನು ಕಂಡು ಸಂತೋಷವೇನೋ ಆಯಿತು. ಅಂತಹ ಧರ್ಮಾತ್ಮರಿಂದಲೇ ಪ್ರಪಂಚ ಇನ್ನೂ ಉಸಿರಾಡುತ್ತಿದೆ. ಆದರೆ ಸಮಾಜದಲ್ಲಿ ಇನ್ನೂ ಬಡತನ ಎದ್ದು ಕಾಣುತ್ತಿದೆ. ಹಾಗಾದರೆ ಐಶ್ವರ್ಯವೆಲ್ಲಾ ಎಲ್ಲಿ ಸೇರಿತು?

“ಭಗವನ್, ದಾನವನಾದ ಇಲ್ವಲನಲ್ಲಿ ಅಪಾರವಾದ ಐಶ್ವರ್ಯ ಸಂಗ್ರಹವಾಗಿದೆ. ಅವನು ಮಣಿಮತೀ ನಗರದ ರಾಜ”

ರಾಜರೆಲ್ಲರೂ ಏಕಕಂಠದಿಂದ ಹೇಳಿದರು. ಅಗಸ್ತ್ಯನು ಇಲ್ವಲನ ಬಳಿಗೆ ನಡೆದನು.

ಇಲ್ವಲನು ಬಲಶಾಲಿ ಅಷ್ಟೇ ಲೋಭಿ. ಇಂದ್ರನಿಗಿಂತಲೂ ಹೆಚ್ಚು ಶ್ರೀಮಂತನಾಗುವ ಆಸೆ ಅವನಿಗೆ. ಅದಕ್ಕಾಗಿ ಅವನು ಮಾಡದ ಹೇಯ ಕೃತ್ಯವೇ ಇರಲಿಲ್ಲ ಎಲ್ಲರನ್ನೂ ಅವನು ದೋಚಿದ್ದನು, ಅಡ್ಡ ಬಂದವರನ್ನು ತುಳಿದಿದ್ದನು, ನುಚ್ಚು ನೂರು ಮಾಡಿದ್ದನು. ಬಲದರ್ಪಗಳಿದ್ದುವು, ಎಲ್ಲರೂ ಹೆದರುತ್ತಿದ್ದರು, ಏನು ಮಾಡಿದರೂ ಎದುರಿಸುವವರಿಲ್ಲ ಬಲದರ್ಪಗಳು ಸಾಗದಿದ್ದಾಗ ಮೋಸ ಮಾಡುವುದಕ್ಕೂ ಅವನಿಗೆ ಸಾಧ್ಯವಿತ್ತು. ಅವನಿಗೊಂದು ಬ್ರಹ್ಮನು ಕೊಟ್ಟ ವರವಿತ್ತು. ಸತ್ತವರನ್ನು ಕೂಡಲೇ ಹೆಸರು ಹಿಡಿದು ಕೂಗಿದರೆ ಬದುಕಿ ಬರುವುದೇ ಆ ವರ.

ಇಲ್ವಲನ ತಮ್ಮ ವಾತಾಪಿ. ಇಲ್ವಲನು ತನ್ನ ವರ ಬಲದಿಂದ ಅವನನ್ನು ಆಡನ್ನಾಗಿ ಪರಿವರ್ತಿಸುವುದು ಬಂದವರಿಗೆ ಆಡನ್ನು ಕಡಿದು ಮಾಂಸ ಭೋಜನವನ್ನಿಡುವುದು; 'ವಾತಾಪಿ' ಹೊರಕ್ಕೆ ಬಾ' ಎಂದು ಕರೆಯುವುದು ಆ ಕೂಡಲೇ ಜೀವವನ್ನು ಪಡೆದ ವಾತಾಪಿ ಅತಿಥಿಗಳ ಹೊಟ್ಟೆ ಬಗಿದು ಹೊರಕ್ಕೆ ಬರುವನು. ತಮ್ಮನ್ನು ಪ್ರತಿಭಟಿಸುವ ಶಕ್ತಿವಂತರನ್ನು ಕೊಂದು ದೋಚಲು ಮಾಡುತ್ತಿದ್ದ ಕಪಟೋಪಾಯವಿದು. ತಪೋಧನನಾದ ಅಗಸ್ತ್ಯನನ್ನು ಹೀಗೆಯೇ ಜಯಿಸಲು ನಿರ್ಣಯಿಸಿದನು ಇಲ್ವಲ.

ವಿನಯ ಪ್ರದರ್ಶನ ಮಾಡಿ ಊಟಕ್ಕೆಬ್ಬಿಸ ಹೊರಟ ಇಲ್ವಲನ ಅಂತರಂಗವೇನೆಂದು ಅಗಸ್ತ್ಯನು ಮೊದಲೇ ಊಹಿಸಿ ಕೊಂಡನು. ಆಡಿನ ರೂಪದ ವಾತಾಪಿಯು ಹೊಟ್ಟೆಯನ್ನು ಸೇರಿದ್ದೇ ತಡ “ವಾತಾಪಿ ಜೀರ್ಣೋಭವ” ಎಂದು ಬಿಟ್ಟರು ಅಗಸ್ತ್ಯಮುನಿ ಲೋಭಿಗಳನ್ನು ಕಪಟಿಗಳನ್ನು ಜೀರ್ಣಿಸಿಕೊಳ್ಳುವುದು ಆತನಿಗೇನೂ ಕಷ್ಟವಾಗಿರಲಿಲ್ಲ. ಅಗಸ್ತ್ಯನ ಜಠರಾಗ್ನಿಯಲ್ಲಿ ವಾತಾಪಿ ಜೀರ್ಣವಾಗಿ ಕರಗಿ ಹೋದ.

“ವಾತಾಪಿ ಹೊರಕ್ಕೆ ಬಾ” ಎಂದು ಇಲ್ವಲನು ಮತ್ತೆ ಮತ್ತೆ ಕಿರಿಚಿಕೊಂಡಾಗ ಅಗಸ್ತ್ಯನು ನಕ್ಕು ಬಿಟ್ಟ. ಇಲ್ವಲ ಇದ್ದ ಜಾಗದಲ್ಲೇ ಬೆವರಿದ. ಸಹಜವಾಗಿಯೇ ಸ್ವಲ್ಪ ಅಂಜಿಕೆಯೂ ಮೂಡಿತು. ಆದ್ದರಿಂದಲೇ ವಿಧೇಯತೆಯನ್ನು ನಟಿಸಿದನು. ಲೋಭಿಗಳ ನಟನೆ ಅನೂಹ್ಯವಾದುದು. ಆದರೂ ಲೋಭವನ್ನು ಮಾತ್ರ ಅವರು ಬಿಡುವವರಲ್ಲ. ತನ್ನಲ್ಲಿರುವ ಐಶ್ವರ್ಯದ ವಿವರಗಳನ್ನು ಕೊಡುವಾಗ ಇಲ್ವಲನು ಬಂಗಾರವನ್ನು ಬಚ್ಚಿಟ್ಟನು. ತನ್ನ ಬಳಿ ಮತ್ತೇನು ಇಲ್ಲವೆಂದು ಸುಳ್ಳನ್ನೂ ಹೇಳಿಬಿಟ್ಟನು. ಅಗಸ್ತ್ಯಮುನಿ ಬಡಪೆಟ್ಟಿಗೆ ಬಾಗಲಿಲ್ಲ. ತಾನೇ ಹುಡುಕಿಸಿ ವಸ್ತ್ರಭೂಷಣಗಳನ್ನೂ ಹೊಂದೇರುಗಳನ್ನೂ ಹೊರಕ್ಕೆಳಸಿದನು. ಅದೆಲ್ಲಾ ಬಡ ಜನತೆಗೆ ಸೇರಬೇಕಾದ ಐಶ್ವರ್ಯ. ಅಗಸ್ತ್ಯನು ಎಲ್ಲವನ್ನೂ ಸಾಗಿಸಿಕೊಂಡುಹೊರಟನು.

ಇಲ್ವಲನು ಸ್ವಲ್ಪ ಹೊತ್ತು ಸಹಿಸಿಕೊಂಡಿದ್ದನು. ಆದರೆ ಲೋಭ ವಿವೇಕವನ್ನು ನುಂಗಿತು. ತಮ್ಮನು ಹೋದನೆಂಬ ದುಗುಡವೊಂದು; ಐಶ್ವರ್ಯವಾದರು ಉಳಿಯಲಿಲ್ಲವೆಂಬ ವ್ಯಥೆ ಮತ್ತೊಂದು. ಅವನು ಸತ್ತರೂ ಲೋಭವನ್ನು ಬಿಡಲಾರ. ಗದಾದಂಡವನ್ನೆತ್ತಿಕೊಂಡು ನುಗ್ಗಿದ. ಆದರೆ ಮುನಿಯ ಒಂದು ಹುಂಕಾರ ಮಾತ್ರದಿಂದಲೇ ಬೆಂದು ಬೂದಿಯಾದ.

ಮಹಾಭಾರತದ ವನಪರ್ವದಲ್ಲಿ ಬರುವ ಕಥೆಯಿದು. ಇಲ್ಲಿ ವ್ಯವಹಾರಿಕ ತಥ್ಯವನ್ನು ಗಮನಿಸಬೇಕು. ಲೋಭದ ವಿರುದ್ಧ ಎಂದಿಗಾದರೂ ವಿದ್ರೋಹ ನಡೆದೇ ತೀರುವುದೆಂಬುದು ಅಸತ್ಯ. ಸಮಾಜದ ಸುಖ ಶಾಂತಿಗಳನ್ನು ಸಮತೂಕದಲ್ಲಿಡಲು ಸಾಕಾಗುವಷ್ಟು ಐಶ್ವರ್ಯವನ್ನು ಒಬ್ಬನೇ ಶೇಖರಿಸಿಟ್ಟುಕೊಳ್ಳುವುದೆಂದರೆ ಅದು ದೋಚುವಿಕೆಯೇ.

ನೊಂದ ಪ್ರಜೆ

ಪುರೂರವನೆಂಬರಾಜನು ಅರ್ಥ ದೇವತೆಯ ಅಗ್ರಹಕ್ಕೆಪಾತ್ರನಾಗಿ ಲೋಭಿಯಾದನಂತೆ. ಪ್ರಜೆಗಳನ್ನು ಹಿಂಸಿಸಿ ಆತನು ಅಪಾರ ಹಣವನ್ನು ತೆರಿಗೆಯ ರೂಪದಲ್ಲಿ ಶೇಖರಿಸತೊಡಗಿದ. ಆಗ ಪ್ರಜೆ ದಂಗೆಯೆದ್ದು ಅವನನ್ನು ಅಧಿಕಾರ ಭ್ರಷ್ಟನನ್ನಾಗಿ ಮಾಡಿತೆಂದು ಪುರಾಣ ಕಥೆಯುಂಟು.

ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ-ಇವು ಅರಿಷಡ್ವರ್ಗ. ಏಕೆಂದರೆ ಇವು ಮಾನವನನ್ನು ದಾನವನನ್ನಾಗಿ ಮಾಡುತ್ತವೆ. ಈ ಅಭಿಪ್ರಾಯದಲ್ಲೇ ಇಲ್ವಲನು ದಾನವ. ಈ ಅರಿಷಡ್ವರ್ಗದಲ್ಲೂ ಪ್ರಬಲತಮವಾದುದು ಲೋಭ,

ಸಮಾಜಸುಧಾರಕರಾದ ಋಷಿಪುಂಗವರು ಲೋಭದ ಅನಾಹುತಗಳನ್ನು ಚೆನ್ನಾಗಿ ಮನಗಂಡಿದ್ದರು. ಕಾಮ-ಕ್ರೋಧಗಳಿಂದ ಹುಟ್ಟುವ ಹದಿನೆಂಟು ಬಗೆಯ ವೃತ್ತಿಗಳ ಪೈಕಿ ಕುಡಿತ, ಜೂಜು, ವ್ಯಭಿಚಾರ, ಬೇಟೆ, ಇತರರ ಮೇಲೆ ಹಲ್ಲೆ, ಕಟುವಚನ, ಅನ್ಯಾಯದ ಸಂಪಾದನೆ-ಇವು ತುಂಬಾ ಹಾನಿಕರವೆಂದು ಹೇಳುತ್ತಾ ಮನು ಮಹರ್ಷಿಗಳು ಹೀಗೆ ಹೇಳಿದ್ದಾರೆ—

ದ್ವಯೋರಪ್ಯೇತೆಯೋರ್ಮೂಲಂ ಯಂ ಸರ್ವೇ-
ಕವಯೋವಿದುಃ । ತಂ ಯತ್ನೇನ ಜಯೇಲ್ಲೋಭಂ
ತಜ್ಜಾವೇತಾ ಉಭೌ ಗಣೌ ||
(ಮನಸ್ಮೃತಿ:7/49)

ಕಾಮ-ಕ್ರೋಧಗಳೆರಡರಿಂದ ಹುಟ್ಟುವ ದುರ್ವ್ಯಸನ ಸಮೂಹಕ್ಕೆ ಲೋಭವೇ ಮೂಲವಾಗಿರುವುದರಿಂದ ಲೋಭವನ್ನು ಪ್ರಯತ್ನಪೂರ್ವಕವಾಗಿ ಜಯಿಸಬೇಕೆಂದು ವಿದ್ವಾಂಸರ ಅಭಿಪ್ರಾಯ.

ರಾಜತಂತ್ರದಲ್ಲೂ ಲೋಭದ ಪಾತ್ರ ಮಹತ್ವದ್ದು ಲೋಭದಿಂದ ಪ್ರಜಾಪೀಡನವಾಗಬಾರದೆಂದೇ ಯಾಜ್ಞವಲ್ಕ್ಯಸ್ಮೃತಿಯಲ್ಲಿ ಆಳುವ ಅರಸರಿಗೆ ಹೀಗೆ ಎಚ್ಚರಿಕೆ ಕೊಡಲಾಗಿದೆ—

ಪ್ರಜಾಪೀಡಿತ ಸಂತಾಪಾತ್ ಸಮುದ್ಭೂತೋ
ಹುತಾಶನಃ ।
ರಾಜ್ಞಃ ಶ್ರಿಯಂ ಕುಲಂ ಪ್ರಾಣಾನ್ ನಾದಗ್ಧ್ವಾ
ವಿನಿವರ್ತತೇ॥ (ಯಾಜ್ಞವಲ್ಕ್ಯಸ್ಮೃತಿ:1/341)

ನೊಂದ ಪ್ರಜೆಗಳ ಸಂತಾಪದಿಂದ ಹುಟ್ಟಿದ ಬೆಂಕಿಯು ಅರಸರ ಕೀರ್ತಿಯನ್ನು ಕುಲಪ್ರಾಣಗಳನ್ನೂ ಸುಟ್ಟು ಬೂದಿಮಾಡದೇ ನಂದಿ ಹೋಗುವುದಿಲ್ಲ.

ಲೋಭಿಗಳಾದ ಅಧಿಕಾರಿಗಳಿಂದ ಪ್ರಜೆಯ ಅಂತಃಕರಣ ಹೇಗೆ ಕುದಿಯುವುದೆಂಬುದಕ್ಕೆ ಬೌದ್ಧ ಜಾತಕ ಗ್ರಂಥದಲ್ಲಿ ಒಂದು ಕಥೆ ಇದೆ.

ಲಂಚಕೋರ :

ವಾರಣಾಸಿಯಲ್ಲಿ ಬ್ರಹ್ಮದತ್ತನೆಂಬ ರಾಜನ ಬಳಿ ಕತ್ತಿಗಳನ್ನು ಪರೀಕ್ಷಿಸುವ ಬ್ರಾಹ್ಮಣ ಮಂತ್ರಿಯಿದ್ದನಂತೆ. ಆ ಮಂತ್ರಿಯ ಮೇಲೆ ರಾಜನಿಗೆ ತುಂಬಾ ಅಭಿಮಾನ. ಕಮ್ಮಾರರು ಮಾರಲೆಂದು ತರುವ ಕತ್ತಿಗಳನ್ನು ರಾಜನು ಆ ಮಂತ್ರಿಗೆ ಕೊಡುತ್ತಿದ್ದನು, ಮಂತ್ರಿ ಕೂಡಲೇ ಅವುಗಳಲ್ಲಿ ಒಂದೊಂದನ್ನು ಮೂಗಿನಿಂದ ಚೆನ್ನಾಗಿ ಮೂಸಿ ನೋಡುವನು. ಕತ್ತಿ ಚೆನ್ನಾಗಿದೆ ಅಥವಾ ಇಲ್ಲವೆಂದು ಅವನು ಕಟ್ಟಿದಷ್ಟು ಬೆಲೆ ಕೊಟ್ಟು ರಾಜನು ಇರಿಸಿಕೊಳ್ಳುತ್ತಿದ್ದನು. ಚೆನ್ನಾಗಿಲ್ಲವೆಂದು ಮಂತ್ರಿ ಹೇಳಿದರೆ ಆ ಕತ್ತಿಯನ್ನು ವಾಪಸು ಮಾಡಲಾಗುತ್ತಿತ್ತು.

ಮಂತ್ರಿ ಬರುಬರುತ್ತಾ ಧನಲೋಭಿಯಾಗಿ ಲಂಚಕೋರನಾದ. ಮೊದಲೇ ಕೈ ಬೆಚ್ಚಗೆ ಮಾಡದಿದ್ದರೆ ಅಂತಹವರ ಕತ್ತಿಯನ್ನು ಅದು ಎಷ್ಟೇ ಚೆನ್ನಾಗಿದ್ದರೂ ಮಂತ್ರಿಯು ಚೆನ್ನಾಗಿಲ್ಲವೆಂದು ತಿರಸ್ಕರಿಸತೊಡಗಿದ. ಅವನ ದ್ರೋಹ ಅನೇಕರಿಗೆ ಗೊತ್ತಿದ್ದರೂ ರಾಜನಿಗೆ ಹೆದರಿ ಸಹಿಸಿಕೊಳ್ಳಬೇಕಾಯಿತು.

ಒಂದು ಸಲ ಒಬ್ಬ ಕಮ್ಮಾರನು ಒಳ್ಳೆಯ ಕತ್ತಿಯೊಂದನ್ನು ಮಾರಾಟಕ್ಕೆ ತಂದನು. ಮಂತ್ರಿ ಮೂಸಿ ನೋಡಿ 'ಇದು ಶುದ್ಧವಾದ ಲೋಹವಲ್ಲ, ಚೆನ್ನಾಗಿಲ್ಲ ಎಂದು ಬಿಟ್ಟನು. ಕಮ್ಮಾರನು ಮತ್ತೆ ಮತ್ತೆ ಬೇರೆ ಬೇರೆ ಕತ್ತಿಗಳನ್ನು ಮಾಡಿ ತಂದರೂ ಅದೇ ಉತ್ತರ ಬಂದಿತು ಬಡ ಕಮ್ಮಾರನು ಲಂಚ ಕೊಡದಿದ್ದುದೇ ಅದಕ್ಕೆ ಕಾರಣವೆಂದು ಬೇರೆ ಹೇಳಬೇಕಾಗಿರಲಿಲ್ಲ. ಮೊದ ಮೊದಲು ನಿರಾಶನಾಗಿದ್ದ ಕಮ್ಮಾರನು ಸೇಡು ತೀರಿಸಿಕೊಳ್ಳಲು ನಿರ್ಧರಿಸಿದನು.

ಕಮ್ಮಾರನು ಮತ್ತೊಂದು ಹರಿತವಾದ ಕತ್ತಿಯನ್ನು ತಯಾರಿಸಿದನು. ಒರೆಯೊಳಕ್ಕೆ ಅರೆದ ಚೆನ್ನಾಗಿ ಅರೆದ ತೀಕ್ಷ್ಣವಾದ ಮೆಣಸಿನ ಪುಡಿಯನ್ನು ತುಂಬಿ ಕತ್ತಿಯನ್ನು ಅದರಲ್ಲಿಟ್ಟುಕೊಂಡು ರಾಜನ ಬಳಿಗೆ ತಂದನು. ಎಂದಿನಂತೆ ಮಂತ್ರಿಗೆ ರಾಜನ ಅಪ್ಪಣೆಯಾಯಿತು ಮಂತ್ರಿ ಕತ್ತಿಯನ್ನು ಹೊರತೆಗೆದು ಮೂಸಿ ನೋಡಲು ಮೂಗಿನ ಬಳಿಗೆ ತಂದನು. ಮೆಣಸಿನ ಪುಡಿ ಮೂಗಿಗೇರಿತೋ ಇಲ್ಲವೋ ಬಲವಾಗಿ ಸೀನು ಬಂದಿತು. ಅದರ ಫಲವಾಗಿ ತಲೆ ಅಲುಗಿತು, ಕತ್ತಿಯ ಅಲುಗಿಗೆ ಬಡಿದ ಮೂಗು ಕತ್ತರಿಸಿಹೋಯಿತು,

ಕಮ್ಮಾರನ ಕಥೆ ಹೇಗಾದರು ಇರಲಿ, ಸಭಾ ಮಧ್ಯದಲ್ಲಿ ಮೂಗು ಮುರಿಸಿಕೊಂಡ ಮಂತ್ರಿಯ ಮಾನ ಪೇಚಿಗಿಟ್ಟುಕೊಂಡಿತು. ಮೂಗೇ ಹೋದಮೇಲೆ ಮೂಸಿ ನೋಡುವುದೇನನ್ನು ? ಲಜ್ಜೆಯಿಂದ ಮಂತ್ರಿ ಆಸ್ಥಾನಕ್ಕೆ ಬರುವುದನ್ನೇ ಬಿಟ್ಟು ಬಿಟ್ಟ. ಆ ಲೋಭಿ ಕಮ್ಮಾರರಿಗೆ ಬಿಡುಗಡೆ ಸಿಕ್ಕಿತು. ಆದರೂ ರಾಜನಿಗೆ ಎಂತಹುದೋ ಅಭಿಮಾನ, ಏನೋ ಮರುಕ. ಯಾರಿಗೂ ತಿಳಿಯದಹಾಗೆ ಅರಗಿನಿಂದ ಕೃತಕವಾದ ಮೂಗನ್ನು ಮಾಡಿಸಿ, ಅವನ ಮುಖಕ್ಕೆ ಅಂಟಿಸಿ' ಬೇರೊಂದು ಉದ್ಯೋಗಕ್ಕೆ ಇಟ್ಟುಕೊಂಡನು.

ಒಂದು ಸಲ ಮೂಗು ಮುರಿಸಿಕೊಂಡ ಮೇಲಾದರೂ ಮಂತ್ರಿಗೆ ಬುದ್ಧಿ ಬರಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಸ್ವಲ್ಪಕಾಲ ಕಳೆಯಿತು. ನಿಜವಾದ ಮೂಗು ಹೋಗಿ ಅರಗಿನ ಮೂಗು ಬಂದ ಘಟನೆಯು ಹಳೆಯದಾಗಿ ಜನರು ಮರೆಯುವಂತಾಯಿತು. ಮಂತ್ರಿಯ ಲೋಭ ಮತ್ತೆ ಅವನನ್ನು ಹೊರಕ್ಕೆಳೆಯಿತು. ಜನರಲ್ಲಿ ಮತ್ತೆ ಅವನು ತನ್ನ ಪ್ರಭಾವ ಸ್ಥಾಪಿಸಲು ಪ್ರಾರಂಭಿಸಿದನು. ಇಂತಹ ಮನುಷ್ಯ ಹಿಂದೆ ಲಂಚಕೋರನಾಗಿದ್ದುದು ಸುಳ್ಳೆನಿಸುವಷ್ಟು ಸಜ್ಜನನಂತೆ ಜನಸೇವೆಗೆ ತೊಡಗಿದ. ಹತ್ತಾರು ಮಂದಿಯ ಸಭೆಯಲ್ಲಿ ಗಂಟೆಗಟ್ಟಳೇ ಭಾಷಣ ಜಾಲ ಬೀರತೊಡಗಿದ.

ಒಂದು ಸಲ ಬೇಸಿಗೆ ಬಿರುಬಿಸಿಲಿನಲ್ಲಿ ದೊಡ್ಡ ಸಭೆಯ ನಡುವೆ ಅವನ ಭಾಷಣ ರಭಸವಾಗಿ ಸಾಗಿತ್ತು. ಅವನಿಗೂ ಗೊತ್ತಿಲ್ಲದಂತೆಯೇ ಅರಗಿನ ಮೂಗು ಕರಗಿ ಟಪ್ಪನೆ ನೆಲಕ್ಕೆ ಉದುರಿಹೋಯಿತು. ನೋಡುತ್ತಿದ್ದ ಜನತೆಗೆ ಹಳೆಯ ಕಥೆ ನೆನಪಾಗಿ ಚಪ್ಪಾಳೆ ತಟ್ಟಿ ನಕ್ಕು ಬಿಟ್ಟರಂತೆ.

ಲಂಚಕೋರತನವು ಮಾಡಿರುವ ಸೇವೆಗಾಗಿ ಪಡೆಯಬೇಕೆಂಬ ಪ್ರತಿಫಲಾಪೇಕ್ಷೆಯಲ್ಲ; ಲೋಭದ ಸೆಳೆತದಿಂದ ಪ್ರತ್ಯಕ್ಷವಾಗಿಯೇ ಕದ್ದು ದೋಚುವ ದುರ್ವ್ಯಸನ ಈ ನಿತ್ಯಕಳಂಕಕ್ಕೆ ಮೂಲವಾದುದು ಲೋಭ.

ಲೋಭಿಯು ಧರ್ಮಹಂತಕ

ದೇಶರಕ್ಷಣೆಗಾಗಿ ಹೋರಾಡಿದ ವೀರರಾಣಿ ಕಿತ್ತೂರು ಚೆನ್ನಮ್ಮನನ್ನು ಇಂಗ್ಲೀಷರು ಸೆರೆಮಾಡಿದರಷ್ಟೆ. ಇದಕ್ಕೆ ಇಬ್ಬರು ದ್ರೋಹಿಗಳು ಸಹಕರಿಸಿದರೆಂದು ಇತಿಹಾಸ ತಿಳಿಸುತ್ತದೆ. ಅವರನ್ನು ದ್ರೋಹಿಗಳಾಗುವಂತೆ ಮಾಡಿದ್ದು ಧನಲೋಭವೇ.

ಕೌರವ-ಪಾಂಡವರ ಯುದ್ಧವನ್ನು ತಪ್ಪಿಸಿ ಸಂಧಿ ಮಾಡಲೆಂದು ಶ್ರೀಕೃಷ್ಣನು ಹಸ್ತಿನಾಪುರಕ್ಕೆ ರಾಯಭಾರಿಯಾಗಿ ಬಂದನು. ಧೃತರಾಷ್ಟ್ರ ದುರ್ಯೋಧನಾದಿಗಳು ಇದೇ ಸಮಯವೆಂದುಕೊಂಡರು. ಅಪಾರವಾದ ಬಂಗಾರವನ್ನೂ ಮತ್ತು ರತ್ನಗಳನ್ನೂ ಶ್ರೀಕೃಷ್ಣನಿಗೆ ಉಡುಗೊರೆ ಕೊಡಲು ನಿರ್ಧರಿಸಿಕೊಂಡರು. ಹೇಗಾದರೂ ಕೃಷ್ಣನನ್ನು ತಮ್ಮ ಪಕ್ಷಕ್ಕೆ ಸೆಳೆದುಕೊಳ್ಳಬೇಕೆಂಬುದೇ ಅವರ ಸಂಚು. ಧೃತರಾಷ್ಟ್ರನಿಗೆ ವಿದುರನು ನಕ್ಕು ಹೇಳಿದ—"ಮಹಾರಾಜ, ಇಷ್ಟೊಂದು ಔದಾರ್ಯ ಉಂಟೆ ನಿನಗೆ? ನೀನೊಬ್ಬ ಹುಚ್ಚ. ನಿನ್ನ ಮಕ್ಕಳೇ ಆದ ಪಾಂಡವರಿಗೆ ಏನನ್ನೂ ಕೊಡಬಯಸದ ನೀನು ಕೃಷ್ಣನಿಗೆ ಇಷ್ಟೊಂದು ಐಶ್ವರ್ಯ ಕೊಡುವ ಕಾರಣವನ್ನು ನಾನು ಬಲ್ಲೆ. ಕೃಷ್ಣನು ಲೋಭಿಯಲ್ಲ. ನೀನು ಬಂಗಾರದ ಬೆಟ್ಟವನ್ನೇ ಉಡುಗೊರೆ ಕೊಟ್ಟರೂ ಕೃಷ್ಣನು ಪಾಂಡವರನ್ನು ಬಿಟ್ಟು ನಿನ್ನ ಪಕ್ಷಕ್ಕೆ ಬರುವುದಿಲ್ಲ."

ಕರ್ಣನು ದಾನಶೂರನೆನಿಸಿಕೊಂಡ ಕಲಿ. ನಿರ್ಲೋಭಿಯಾಗಿದ್ದುದರಿಂದಲೇ ದಾನದಲ್ಲಿ ಆತನಿಗೆ ಆಸಕ್ತಿ ಇದ್ದದ್ದು. ಶ್ರೀಕೃಷ್ಣನು ಅವನಿಗೆ ಎಷ್ಟೋ ಆಸೆಗಳನ್ನು ತೋರಿಸಿದರೂ ಅವನು ದುರ್ಯೋಧನನ ಪಕ್ಷವನ್ನು ಬಿಟ್ಟು ಬರಲು ಮನಸ್ಸು ಮಾಡಲಿಲ್ಲ. ಲೋಭವಶನಾಗಿ ಪಕ್ಷತ್ಯಾಗ ಮಾಡಿ ಭರತಕುಲಕಳಂಕಿಯಾಗಲು ಅವನ ಮನಸ್ಸು ಒಪ್ಪಲಿಲ್ಲಾ.

ಶ್ರೀರಾಮನು ನ್ಯಾಯವಾಗಿ ತನ್ನದಾಗಿದ್ದ ರಾಜ್ಯವನ್ನು ತ್ಯಜಿಸಿ ವನಕ್ಕೆ ನಡೆದ; ಭರತನಾದರೋ ನಿರಾಯಾಸವಾಗಿ ತನಗೆ ಲಭಿಸಿದ ರಾಜಪದವಿಯನ್ನು ನಿರಾಕರಿಸಿದನು.

ಇಂತಹ ನಿರ್ಲೋಭಿಗಳನ್ನೇ ನಮ್ಮ ಸಂಸ್ಕೃತಿಯು **"ಪುರುಷೋತ್ತಮ"** ರೆಂದು ಕರೆದಿದ್ದು. ಭಗವದ್ಗೀತೆಯಲ್ಲಿ ಗೀತಾಚಾರ್ಯನಾದ ಕೃಷ್ಣನು ಹೇಳಿದ್ದಾನೆ:—

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನ ಮಾತ್ಮನಃ।
ಕಾಮಃ ಕ್ರೋಧಸ್ತಥಾ ಲೋಭ
ಸ್ತಸ್ಮಾ ದೇತತ್‌ತ್ರಯಂ ತ್ಯಜೇತ್ ॥

ಆತ್ಮನಾಶ ಹೇತುಕಗಳಾದ ಕಾಮ, ಕ್ರೋಧ ಲೋಭಗಳು ನರಕಕ್ಕೆ ದಾರಿಮಾಡುತ್ತವೆ.

ಈ ಮೂರನ್ನೂ ಬಿಟ್ಟಾಗ ಆತ್ಮಕಲ್ಯಾಣಕ್ಕೆ ದಾರಿ. ಲೋಭವಂತು ಧರ್ಮವನ್ನು ಭಕ್ಷಿಸುವ ಬ್ರಹ್ಮರಾಕ್ಷಸನ ಹಾಗೆ. ಅವರ ಬ್ರಹ್ಮರೂಪೀ ದುರ್ಗುಣಗಳನ್ನು ತಿಳಿಸುವ ನೂರಾರು ಕಥೆಗಳುಂಟು. ಮುಟ್ಟಿದ್ದೆಲ್ಲಾ ಚಿನ್ನವಾಗಬೇಕೆನ್ನುವ ಆಸೆ ಹೊಂದಿದ್ದ ಸೃಂಜಯರಾಜನ ಕಥೆ ಮಹಾಭಾರತದಲ್ಲಿ ಬರುತ್ತದೆ. ಮುನಿಗಳ ವರದಿಂದ ಸೃಂಜಯ ರಾಜನಿಗೆ ಒಬ್ಬ ಪುತ್ರನು ಹುಟ್ಟಿದನು. ಅವನ ಹೆಸರು ಸುವರ್ಣಷ್ಠೀವಿ. ಅವನು ಮುಟ್ಟಿದ್ದೆಲ್ಲಾ ಚಿನ್ನವಾಗುತ್ತಿತ್ತು. ರಾಜನ ಸಂತೋಷಕ್ಕೆ ಪಾರವೇ ಇರಲಿಲ್ಲ. ಅಂತೆಯೇ ಅವನ ಲೋಭವೂ ಹೆಚ್ಚಿತು. ಮನೆ ಮಹಲುಗಳೆನ್ನೆಲ್ಲಾ ಬಂಗಾರದಿಂದ ತುಂಬ ತೊಡಗಿದ. ಇದನ್ನು ಕಂಡ ಕ್ರೂರಿಗಳು ಚಿನ್ನದ ಆಸೆಯಿಂದ ಕೊನೆಗೆ ಸುವರ್ಣಷ್ಠೀವಿಯನ್ನು ಕೊಂದೇ ಬಿಟ್ಟರಂತೆ.

ಲೋಭವು ಒಡಹುಟ್ಟಿದವರಲ್ಲಿ ವಿಷದ ಬೀಜವನ್ನು ಬಿತ್ತುತ್ತದೆ. ಅಣ್ಣತಮ್ಮಂದಿರಿಬ್ಬರು ಕಳ್ಳರ ಪಡೆಗಳನ್ನು ಕಟ್ಟಿಕೊಂಡು ದೋಚುತ್ತಿದ್ದರಂತೆ. ಒಂದು ಸಲ ಅಪಾರ ಐಶ್ವರ್ಯವನ್ನು ದೋಚಿದರು. ಕಾಡಿನಲ್ಲಿ ಹಂಚಿಕೊಳ್ಳುವಾಗ ಕಾದಾಟವಾಗಿ ಪಡೆಯವರೆಲ್ಲರೂ ಸತ್ತರು. "ತಮ್ಮಾ, ಹತ್ತಿರದ ಹಳ್ಳಿಯಿಂದ ಒಂದಿಷ್ಟು ತಿಂಡಿಯನ್ನು ತಾ ಹಸಿವಾಗುತ್ತಿದೆ"- ಎಂದನು ಅಣ್ಣ. ತಮ್ಮನು ಅತ್ತ ಹೊರಡುತ್ತಲೇ ಅಣ್ಣನು ಒಂದು ಕಲ್ಲು ಚಪ್ಪಡಿಯನ್ನು ಸಿದ್ಧಪಡಿಸಿಟ್ಟುಕೊಂಡನು. ಹೇಗೂ ಅವನು ತಿಂಡಿಯ ತಟ್ಟೆಯನ್ನಿಡಲು- ಬಗ್ಗುತ್ತಾನೆ. ತಲೆಯ ಮೇಲೆ ಚಪ್ಪಡಿ ಹಾಕಿ ಕೊಂದರೆ ಐಶ್ವರ್ಯವೆಲ್ಲಾ ತನಗೇ ಉಳಿಯುತ್ತದೆಂಬ ದುರಾಲೋಚನೆ ಅಣ್ಣನಿಗೆ!

ಇತ್ತ ತಮ್ಮನಿಗೂ ಅಂತಹುದೇ ಆಲೋಚನೆ ಮೂಡಿತು. ಅವನು ತಿಂಡಿಗೆ ವಿಷವನ್ನು ಬೆರಸಿ ತಂದ. ತಿಂಡಿಯ ತಟ್ಟೆಯನ್ನಿಡಲು ಬಗ್ಗುತ್ತಲೇ ಅಣ್ಣನು ಚಪ್ಪಡಿ ಹಾಕಿ ತಮ್ಮನನ್ನು ಕೊಂದ. ನಂತರ ತಟ್ಟೆಯಲ್ಲಿನ ತಿಂಡಿ ತಿಂದು ತಾನೂ ಸತ್ತ.

ಲೋಭವು ಏನನ್ನು ತಾನೇ ಮಾಡಿಸುವುದಿಲ್ಲಾ ? ಆದ್ದರಿಂದಲೇ ಈಶಾವಾಸ್ಯೋಪನಿಷತ್ತು ಘೋಷಿಸಿತು—

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ
ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ
ಕಸ್ಯಸ್ವಿದ್ ಧನಂ ॥

ಲೋಕದಲ್ಲಿ ಗೋಚರಿಸುವ ಎಲ್ಲೆಡೆಯೂ ಎಲ್ಲ ವಸ್ತುಗಳಲ್ಲೂ ಚೇತನರೂಪಿ ಪರಮಾತ್ಮನಿದ್ದಾನೆ. ಅವುಗಳಲ್ಲಿ ಆಸಕ್ತನಾಗದೆ ತ್ಯಾಗಪೂರ್ವಕವಾಗಿ ಸ್ವೀಕರಿಸು. ಏಕೆಂದರೆ ಅವು ಯಾರೊಬ್ಬರವೂ ಅಲ್ಲ.

ಅಸ್ತೇಯ — ಅಪರಿಗ್ರಹ

ಲೋಭಕ್ಕೆ ಕಡಿವಾಣ ಹಾಕುವ ದೃಷ್ಟಿಯಿಂದಲೇ ನಮ್ಮ ಸಂಸ್ಕೃತಿ ಎರಡು ವ್ರತಗಳನ್ನು ಉಪದೇಶಿಸಿತು; ಒಂದು ಅಸ್ತೇಯ, ಮತ್ತೊಂದು ಅಪರಿಗ್ರಹ.

ಪಂಡರಿಪುರದಲ್ಲಿ ರಾಂಕಾ ಎಂಬ ಭಕ್ತನಿದ್ದನು. ಆತನ ಪತ್ನಿಯ ಹೆಸರು ಬಾಂಕಾ. ಬಡತನದ ಜೀವನ, ಸೌದೆ ಕಡಿದು ಮಾರಿ ಬದುಕುತ್ತಿದ್ದರು. ಆದರೆ ಅವರು ನಿತ್ಯತೃಪ್ತರು.

ಒಂದು ದಿನ ಸೌದೆಯ ಹೊರೆಗಳನ್ನು ಹೊತ್ತು ಸತಿಪತಿಗಳಿಬ್ಬರೂ ಕಾಡಿನ ದಾರಿಯಿಂದ ಊರಿನ ಕಡೆಗೆ ಹೊರಟರು. ರಾಂಕಾನ ಕಾಲಿಗೆ ದಾರಿಯಲ್ಲಿ ಒಂದು ಬಟ್ಟೆಯ ಗಂಟು ತಗುಲಿ ಬಿಚ್ಚಿಕೊಂಡಿತು. ಗಂಟಿನಲ್ಲಿದ್ದ ಚಿನ್ನದ ನಾಣ್ಯಗಳು ಚಿಮ್ಮಿ ಹರಡಿಕೊಂಡವು. ರಾಂಕಾ ಗಾಬರಿಯಿಂದ ಹಿಂದಿರುಗಿ ನೋಡಿದ. ಪತ್ನಿ ನಾಲ್ಕು ಹೆಜ್ಜೆಗಳ ದೂರದಲ್ಲಿ ಬರುತ್ತಿದ್ದಳು. ಅವನು ಕೂಡಲೇ ಹೊರೆಯನ್ನಿಳಿಸಿ, ಆ ನಾಣ್ಯಗಳ ಮೇಲೆ ಮಣ್ಣು ಹಾಕಿ ಮುಚ್ಚ ತೊಡಗಿದ. ಆದರೂ ಅಷ್ಟರೊಳಗೆ ಬಾಂಕಾ ಬಂದೇ ಬಿಟ್ಟಳು. ರಾಂಕಾ ತನ್ನ ಅಭಿಪ್ರಾಯವನ್ನು ಹೇಳಲೇ ಬೇಕಾಯಿತು–

"ನಾವು ನಿತ್ಯತೃಪ್ತರು. ಆದರೂ ಬಡವರು; ಚಿನ್ನ ನಮ್ಮಲ್ಲಿಲ್ಲ. ಚಿನ್ನದ ಆಸೆ ನಮಗೆ ಎಂದೂ ಇರಲಿಲ್ಲ, ಮುಂದೆಯೂ ಇರಬಾರದು. ನಿನ್ನ ಕಣ್ಣಿಗೆ ಚಿನ್ನ ಬೀಳದಿರಲೆಂದು ನಾನು ಮಣ್ಣಿನಿಂದ ಮುಚ್ಚುತ್ತಿದ್ದೆ...."

ಉತ್ತರವಾಗಿ ಬಾಂಕಾ ನಕ್ಕು ಹೇಳಿದಳು – "ಮಣ್ಣನ್ನು ಮಣ್ಣಿನಿಂದ ಮುಚ್ಚುವ ಹುಚ್ಚು ಯೋಚನೆ ನಿಮಗೇಕೆ ಮೂಡಿತು? ನನ್ನ ದೃಷ್ಟಿಯಲ್ಲಿ ಚಿನ್ನವೂ ಒಂದು ಬಗೆಯ ಮಣ್ಣು. ನೀವೂ ಸಹ ಹಾಗೆಯೇ ಭಾವಿಸಿರುತ್ತೀರೆಂದು ಕೊಂಡಿದ್ದೆ. ಆದರೆ ಚಿನ್ನಕ್ಕೂ ಮಣ್ಣಿಗೂ ಭೇದವನ್ನು ನೀವು ಕಲ್ಪಿಸಿಕೊಂಡೇ ಇದ್ದೀರಿ!"

ನಿರ್ಲೋಭದ ಉತ್ಕೃಷ್ಟ ಉದಾಹರಣೆಯಿದು. ಇದು ಕೇವಲ ಕಥೆಯೆಂದು ಕಡೆಗಣಿಸುವಂತಹುದಲ್ಲ. ಎರಡನೇ ಚಂದ್ರಗುಪ್ತನ ಆಳ್ವಿಕೆಯಲ್ಲಿ ಭಾರತದಲ್ಲಿ ಪ್ರವಾಸಕ್ಕಾಗಿ ಬಂದಿದ್ದ ವಿದೇಶೀ ಯಾತ್ರಿಕ ಫಾಹಿಯಾನನು ಭಾರತೀಯರ ನಿರ್ಲೋಭವನ್ನು ಪ್ರಶಂಸಿಸುತ್ತಾ— "ರಸ್ತೆಯಲ್ಲಿ ಬಿದ್ದಿರುವ ಚಿನ್ನದಂತಹ ಬೆಲೆಯುಳ್ಳ ವಸ್ತುವನ್ನು ಸಹ ಯಾರೂ ಎತ್ತಿಕೊಳ್ಳುತ್ತಿರಲಿಲ್ಲ, ಎತ್ತಿಕೊಂಡರೆ ರಾಜ ಭಂಡಾರಕ್ಕೆ ಸೇರಿಸುತ್ತಿದ್ದರು." ಎಂದಿದ್ದಾನೆ ಇಂತಹ ಪ್ರವೃತ್ತಿಗಾಗಿ ನಮ್ಮ ಸಂಸ್ಕೃತಿಯ ಬಗ್ಗೆ ನಾವು ಹೆಮ್ಮೆ ಪಡಬೇಕು. ಸಮಲೋಷ್ಟಾಶ್ಮ ಕಾಂಚನಃ, ಯದೃಚ್ಛಾ ಲಾಭ ಸಂತುಷ್ಟಿ– ಎಂಬುದು ಪುರಾಣದ ಹರಟೆಯಲ್ಲ. ಅದು ಮಾನವೀಯ ಧರ್ಮ. ಮಾನವನು ಸೋದರ ಮಾನವರ ರಕ್ಷಣೆಯನ್ನು ಬಯಸಿ ಅನುಸರಿಸಬೇಕಾದ ಸದಾಚಾರವಿದು. ಪುಮಾನ್ ಪುಮಾಂಸಂ ಪರಿಪಾತು ವಿಶ್ವತಃ– ಮಾನವನು ಮಾನವನನ್ನು ಎಲ್ಲೆಡೆಯೂ ರಕ್ಷಿಸಲಿ ಎಂದು ಋಗ್ವೇದ (6-75-14) ಹೇಳಿದ್ದು ಈ ಅರ್ಥದಲ್ಲೇ.

'ಎಷ್ಟು ದೊರಕಿದರೂ ಮತ್ತಷ್ಟು ಬೇಕೆಂಬಾಸೆ, ಎಷ್ಟು ದೊರಕಿದರೂ ಮತ್ತಷ್ಟರಾಸೆ' ಈ ಆಸೆಯನ್ನೇ ಬಿಡಬೇಕೆಂದರು ಸಂತವರೇಣ್ಯ ಪುರಂದರ ದಾಸರು ಧರ್ಮದ ಹತ್ತು ಲಕ್ಷಣಗಳನ್ನು ಮನು ಮಹರ್ಷಿ ಹೀಗೆ ಪಟ್ಟಿ ಮಾಡುತ್ತಾನೆ

ಧೃತಿ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯ
ನಿಗ್ರಹಃ ॥
ಧೀ ರ್ವಿದ್ಯಾ ಸತ್ಯ ಮಕ್ರೋಧೋ ದಶಕಂ ಧರ್ಮ
ಲಕ್ಷಣಂ ॥ (ಮನುಸ್ಮೃತಿ: 6–92)

ಅಸ್ತೇಯವೆಂದರೆ ಕದಿಯದಿರುವುದು. ಸ್ತೇಯವೆಂದರೆ ಕದಿಯುವಿಕೆ. ಕೊಡಲಿಲ್ಲದ ವಸ್ತುವನ್ನು ಕಿತ್ತುಕೊಳ್ಳುವುದು, ಕೊಡಬೇಕಾದ ವಸ್ತುವನ್ನು ಕೊಡದಿರುವುದು ಸಹ ಕಳ್ಳತನವೇ. ಲೋಭವೇ ಇದಕ್ಕೆ ಕಾರಣ ಸನತ್ಸು ಜಾತೀಯದ ಭಾಷ್ಯದಲ್ಲಿ ಭಗವಾನ್ ಶಂಕರಾಚಾರ್ಯರ ಹೇಳುತ್ತಾರೆ—

ಲೋಭಃ ಪರದ್ರವ್ಯೇಚ್ಛಾ ;
ಅರ್ಜಿತಸ್ಯ ಸ್ವಕೀಯಸ್ಯ ತೀರ್ಥವಿನಿಯೋಗಾ
ಸಾಮರ್ಥ್ಯಂವಾ॥ (ಸನತ್ಸ.ಶಂಕರಭಾಷ್ಯ: 2--16)

ಅಂದರೆ ಪರರ ಸ್ವತ್ತನ್ನು ಅಪೇಕ್ಷಿಸುವುದು ಲೋಭ. ಅಂತೆಯೇ ತನ್ನ ಸ್ವತ್ತನ್ನು ಸದ್ವಿನಿಯೋಗ ಮಾಡುವ ಬುದ್ಧಿಯಿಲ್ಲದಿರುವುದೂ ಸಹ ಲೋಭವೇ.

ಲೋಭನಿಗ್ರಹಕ್ಕಾಗಿಯೇ ಅಸ್ತೇಯ ವ್ರತವನ್ನು ಹೇಳಿದ್ದು. ಅಸ್ತೇಯ ವ್ರತಭಂಗಕ್ಕೆ ಪ್ರಾಚೀನ ಕಾಲದಲ್ಲಿ ಉಗ್ರವಾದ ದಂಡಗಳಿದ್ದವು. ಲಿಖಿತ ಮುನಿಯ ಕಥೆ ಜೈಮಿನಿಯಾಶ್ವಮೇಧದಲ್ಲಿದೆ. ಶಂಖನು ಲಿಖಿತನ ಅಣ್ಣ. ಇಬ್ಬರೂ ಸ್ಮೃತಿಗಳನ್ನು ರಚಿಸಿದ ವಿದ್ವಾಂಸರು, ತಮ್ಮ ಕಾಲದಲ್ಲಿ ಲೋಕದ ಗೌರವಕ್ಕೆ ಪಾತ್ರರಾದ ಮೇಧಾವಿಗಳು. ಒಮ್ಮೆ ಲಿಖಿತನು ಅಣ್ಣನನ್ನು ಕಾಣಲು ಹೊರಟನಂತೆ. ಆಶ್ರಮದ ಸಮೀಪಕ್ಕೆ ಬರುವ ವೇಳೆಗೆ ದಾರಿ ನಡೆದು ತುಂಬಾ ಆಯಾಸ ವಾಗಿತ್ತು, ಹಸಿವೂ ಹೆಚ್ಚಿತು. ಹತ್ತಿರದ ಮಾವಿನ ಮರದ ಕೆಳಗೆ ಒಂದು ಹಣ್ಣು ಉದುರಿತ್ತು. ಲಿಖಿತನು ಹಣ್ಣನ್ನು ತಿಂದು ಮುಗಿಸುವಷ್ಟರಲ್ಲಿ ಶಂಖನು ಅಲ್ಲಿಗೆ ಬಂದ. ಯಾರ ಅನುಮತಿಯೂ ಇಲ್ಲದೆ ಹಣ್ಣನ್ನು ತಿಂದದ್ದು ತಪ್ಪೆಂದು ಆಕ್ಷೇಪಿಸಿದನು. ತಾನು ಮಾಡಿದ್ದು ಕಳ್ಳತನವೆಂದು ಲಿಖಿತನಿಗೂ ಮನವರಿಕೆಯಾಯಿತು. ಲಿಖಿತನು ಕೂಡಲೇ ರಾಜನಲ್ಲಿಗೆ ಹೋಗಿ ತನ್ನ ತಪ್ಪನ್ನು ತಾನೇ ವಿವರಿಸಿ ಶಿಕ್ಷೆ ಪಡೆದನಂತೆ. ಹಣ್ಣು ತಿಂದ ಕೈಗಳನ್ನು ಕತ್ತರಿಸುವುದೇ ಆ ಶಿಕ್ಷೆ! ಇದೆಂತಹ ಘೋರ ಶಿಕ್ಷೆ, ಎಂತಹ ಬಾಲಿಶವಾದ ವಿಷಯವಿದು ಎಂಬ ಟೀಕೆ ಇಲ್ಲಿ ಅಪ್ರಕೃತ. ಅಸ್ತೇಯ ವ್ರತದ ಬಗ್ಗೆ ಹೊಂದಿದ್ದ ಧರ್ಮನಿಷ್ಠೆ ಗಮನಾರ್ಹವಾದುದ್ದು.

ರಮಣ ಮಹರ್ಷಿಗಳು

ನನಗೆ ಬೇಕು, ಬೇಕೇ ಬೇಕು – ಎನ್ನುತ್ತದೆ ಲೋಭ. ಏಕೆ ಬೇಕು, ಎಷ್ಟು ಬೇಕು — ಎಂಬುದಕ್ಕೆ ಉತ್ತರವಿಲ್ಲ. ಸಾಕೆನ್ನುವ ಪ್ರವೃತ್ತಿಯೇ ಇಲ್ಲ ಲೋಭಕ್ಕೆ. ಬಂದುದ್ದನ್ನು ಶೇಖರಿಸುತ್ತಲೇ, ಬಾರದುದನ್ನು ಕಿತ್ತುಕೊಂಡು ಶೇಖರಿಸುತ್ತದೆ, ಶೇಖರಿಸುತ್ತಲೇ ಇರುತ್ತದೆ ಲೋಭ. ಈ ಪ್ರವೃತ್ತಿಗೆ ಅವಾಕಾಶವಿಲ್ಲದಂತಹ ಒಂದು ಸದ್ವ್ರತ ಅಪರಿಗ್ರಹವ್ರತ. ಬಾಳಲು ಬೇಕಾದಷ್ಟನ್ನು ದುಡಿದು ಪಡೆಯಬೇಕು. ದೊರೆಯದ ವಸ್ತುವಿಗಾಗಿ ವ್ಯಥೆ ಪಡಬೇಕಾಗಿಲ್ಲ. ಅದಕ್ಕಾಗಿ ಅನ್ಯರನ್ನು ಯಾಚಿಸಬಾರದು. ಇದು ಅಪರಿಗ್ರಹವ್ರತ. ಏಕೆಂದರೆ ಯಾಚಿಸಿದಾಗ ಕೊಡುವವರು ಕರುಣೆಯಿಂದಲೋ ದಾಕ್ಷಿಣ್ಯದಿಂದಲೋ ಕೀರ್ತಿಗಳಿಸುವ ಇಚ್ಛೆಯಿಂದಲೋ ಎಷ್ಟಾದರೂ ಕೊಡುತ್ತಾ ಹೋಗಬಹುದು. ಈ ಕ್ರಮದಿಂದ ಬೇಕಾದಷ್ಟಕ್ಕಿಂತ ಹೆಚ್ಚು ಶೇಖರವಾಗುತ್ತಾ ಹೋಗಬಹುದು, ಲೋಭಕ್ಕೂ ದಾರಿಯಾಗಬಹುದು.

ತಿರುವಣ್ಣಾಮಲೆಯ ಬಳಿ ರಮಣಮಹರ್ಷಿಗಳ ಆಶ್ರಮವಿದೆ. ರಮಣಮಹರ್ಷಿಗಳು ತಮ್ಮ ಬಾಳಿನ ಕೊನೆಯವರೆಗೂ ಅಪರಿಗ್ರಹ ವ್ರತವನ್ನು ಪಾಲಿಸುತ್ತಿದ್ದರು. ಲಂಗೋಟಿಯ ಹೊರತು ಮೈಮೇಲೆ ಅವರು ಬೇರೆ ಬಟ್ಟೆಯನ್ನು ಧರಿಸುತ್ತಿರಲಿಲ್ಲ. ಒಂದು ಸಲ ಅವರ ಕೌಪೀನ ಹರಿಯಿತಂತೆ. ಬೇರೊಂದು ಲಂಗೋಟಿಯಿರಲಿಲ್ಲ. ಈ ಆಕಸ್ಮಿಕವು ಬೇರೆಯವರ ಗಮನಕ್ಕೆ ಬಂದಿರಲಿಲ್ಲ.

ಮಹರ್ಷಿಗಳು ಬೇರೆಯವರನ್ನು ಆ ಬಗ್ಗೆ ಯಾಚಿಸಲು ಇಷ್ಟಪಡಲಿಲ್ಲ. ಅದರೆ ಹರಿದ ಕೌಪೀನ ಧರಿಸಿ ಲೋಕದ ಮರ್ಯಾದೆಗೆ ಚ್ಯುತಿಯನ್ನು ತರುವುದೂ ಸರಿಯೆನಿಸ ಲಿಲ್ಲ. ಸೂಜಿ-ದಾರವನ್ನಾದರೂ ಇತರರಿಂದ ಪಡೆದು ಕೊಂಡು ಹೊಲೆದುಕೊಳ್ಳಬಹುದಾಗಿತ್ತು. ಅದಕ್ಕೂ ಅವರು ಒಪ್ಪಲಿಲ್ಲ. ಏಕೆಂದರೆ ಆಗಲೂ ಎಲ್ಲರಿಗೂ ವಿಷಯ ತಿಳಿದುಹೋಗುತ್ತದೆ. ಕೊಡುವವರು ನಾನು ತಾನು ಎಂದು ಬರುತ್ತಾರೆ. ಅಪರಿಗ್ರಹವ್ರತಕ್ಕೆ ಭಂಗ ಉಂಟಾಗುತ್ತದೆ. ರಮಣಮಹರ್ಷಿಗಳು ಕಾಡಿಗೆ ಹೋಗಿ ಎರಡು ಜಾಲಿಯಮರದ ಮುಳ್ಳುಗಳನ್ನು ಆರಿಸಿಕೊಂಡರು. ದಪ್ಪವಾದ ಮುಳ್ಳಿಗೆ ಚಿಕ್ಕಮುಳ್ಳಿನ ಸಹಾಯದಿಂದ ರಂಧ್ರ ಮಾಡಿದರು. ತಮ್ಮ ಕೌಪೀನದ ಅಂಚಿನಿಂದಲೇ ಎಡಳೆ ದಾರವನ್ನು ತೆಗೆದು ಸೇರಿಸಿದರು. ಕೌಪೀನ ಹೊಲಿದು ಕೊಂಡು ಆಶ್ರಮಕ್ಕೆ ಹಿಂತಿರುಗಿದರು.

ಎಂತಹ ಕಟ್ಟುನಿಟ್ಟಾದ ಅಪರಿಗ್ರಹವ್ರತವಿದು !

ಲೋಕ ಕಲ್ಯಾಣ :

"ಲೋಭಃ ಪಾಪಸ್ಯ ಕಾರಣಂ"

–ಲೋಭವೇ ಪಾಪಾಚರಣೆಗೆ ಮೂಲ. ಇದರಿಂದ ವ್ಯಕ್ತಿತ್ವದ ಪತನ ಮತ್ತು ನೆರೆಹೊರೆಯವರಿಗೂ ಹಿಂಸೆ. ಹಾಗಾದರೆ ಏನು ಮಾಡಬೇಕು?

ಬದುಕಲು ಬೇಕಾದುದಕ್ಕಿಂತ ಹೆಚ್ಚು ಸಂಗ್ರಹಿಸಬೇಡ. ಆಗ ಇತರರಿಗೂ ಸಹ ಬದುಕಲು ಅಗತ್ಯವಾದಷ್ಟು ಸಿಕ್ಕುವಂತಾಗುತ್ತದೆ. ಆಸೆಬುರುಕನಾಗಿ ಡೊಳ್ಳು ಹೊಟ್ಟೆಯನ್ನು ಬೆಳೆಸಬೇಡ; ನಿನ್ನ ಹೊಟ್ಟೆ ಇಳಿದರೆ ನಾಲ್ಕು ಎಲಬುಗೂಡುಗಳಿಗೆ ಮಾಂಸ ತುಂಬಿಕೊಳ್ಳುತ್ತದೆ. ಅನಗತ್ಯವಾದುದನ್ನು ಅಪೇಕ್ಷಿಸಬೇಡ; ಆಗ ಅಗತ್ಯ ವಿರುವವರಿಗೆ ಅದರ ಅಭಾವವುಂಟಾಗುವುದಿಲ್ಲ—ಇದು ನಮ್ಮ ಸಂಸ್ಕೃತಿ ಕಲಿಸಿದ್ದು.

ನಿರ್ಲೋಭಿಯಾಗಬೇಕು ಮಾನವ. ಲೋಭವನ್ನು ಬಿಡಲು ನಿನಗೆ ಸಾಧ್ಯವಿಲ್ಲವೆ? ಹಾಗಾದರೆ ಚಿಂತೆ ಯಿಲ್ಲ. ಲೋಭವನ್ನು ಅದರ ಸಂಕುಚಿತವಲಯದಿಂದ ಪಾರುಮಾಡಿ ವ್ಯಾಪಕವಾಗಿ ಬೆಳಸು. ಅದು ಪರ್ವತಾಕಾರವಾಗಿ ಬೆಳೆಯಲಿ, ಅರ್ಜುನನಿಗೆ ತೋರಿದ ಪರಮಾತ್ಮನ ವಿಶ್ವರೂಪದಂತೆ ಬೆಳೆಯಲಿ. ಅದರಲ್ಲಿ ನಾನು-ನನ್ನದು ಎಂಬುದೆಲ್ಲಾ ವಿಲೀನವಾಗಿಬಿಡಲಿ, ನಿನ್ನ ಲೋಭ ನಿನಗೆ ಮೀಸಲಾಗದಿರಲಿ, ಅದು ಧನಕನಕಗಳಿಗೆ ಮಾತ್ರವೇ ಪರಿಮಿತವಾಗದಿರಲಿ. ದೇಶವೆಲ್ಲಾ ನನ್ನದಾಗಬೇಕೆಂಬ ದೇಶಲೋಭಿಯಾಗು—ಆಗ ನನ್ನ ದೇಶವೆಂಬ ಅಭಿಮಾನ ಮೂಡುತ್ತದೆ; ಮಾನವರೆಲ್ಲರೂ ನನ್ನವರಾಗಬೇಕೆಂಬ ಮಾನವಲೋಭಿಯಾಗು—ಆಗ ಸೋದರ ಮಾನವರ ಬಗ್ಗೆ ವಾತ್ಸಲ್ಯ ಮೂಡುತ್ತದೆ; ದೇವರು ನನ್ನವರಾಗಬೇಕೆಂಬ ಭಕ್ತಿ ಲೋಭಿಯಾಗು — ಆಗ ದೇವರ ಮೆಚ್ಚುಗೆಯಿಂದ ಮೋಕ್ಷ ಸಾಮ್ರಾಜ್ಯವೇ ನಿನ್ನದಾಗುತ್ತದೆ. ನನ್ನದೆಂದುಕೊಂಡಿರುವುದು ಮಾತ್ರವೇ ನನ್ನದಲ್ಲ, ಇಡೀ ವಿಶ್ವವೇ ನನ್ನದು — ಇದು ನಮ್ಮ ಸಂಸ್ಕೃತಿ ಹೇಳಿದ್ದು —

"ಆತ್ಮಾಪಿ ಚಾಯಂ ನ ಮಮ,
ಸರ್ವಾಪಿ ಪೃಥಿವೀ ಮಮ ! "

ತಿಂಗಳ ಮುಡಿದವನ ವಚನಗಳು

ಇಗೋ ಅಮೃತ ಎಂದು ನೀಡಿದೆ
ಸುಮ್ಮನೆ ಕುಡಿದು, ಇದು ವಿಷವೆಂದರಯ್ಯಾ !
ಇಗೋ ಜೇನು ಎಂದು ನೀಡಿದೆ
ಸುಮ್ಮನೆ ಮೆದ್ದು, ಇದು ಬೇವು ಎಂದರಯ್ಯಾ !
ಇಗೋ ಹಾಲು ಎಂದು ನೀಡಿದೆ
ಸುಮ್ಮನೆ ಕುಡಿದು, ಇದು ಹಾಲಾಹಲವೆಂದರಯ್ಯಾ !
ಕೊರಳಗರಳ ತಿಂಗಳ ಮುಡಿದವನೇ
ಅವರವರ ಭಾವದಂತೆ ಅದದು ಆಗಲೆಂದು ಬೇಡಿಕೊಂಬೆನಯ್ಯಾ !

ಚಿನ್ನದ ದೇಹವಾದರೇನಯ್ಯಾ
ಅದಕ್ಕೆ ಹಿತ್ತಾಳೆಯ ಕಿವಿಯಯ್ಯಾ
ಹಿಸುಣರು ಹೇಳಿದುದನೆಲ್ಲ ಕೇಳುವವರಯ್ಯಾ
ಹಿತ್ತಾಳೆಯ ಕಿವಿಯವರಯ್ಯಾ
ಕೇಳಿ ಕೇಳಿ ಕೇಳಿದವರಿಂದಲೇ
ಹಾಳಾಗಿ ಹೋಹರಯ್ಯಾ ತಿಂಗಳಮುಡಿದವನೇ !

— ಗುಂಡ್ಮಿ, ಚಂದ್ರಶೇಖರ್ ಐತಾಳ.

ವಿಷವೃತ್ತ

(ಸಣ್ಣ ಕಥೆ)

—ಇಂದಿರಾ ರಾಜಶೇಖರ್

ಮೇ ತಿಂಗಳ ಮಧ್ಯಾಹ್ನ ಹನ್ನೆರಡು ಘಂಟೆಯ ಸಮಯ. ಆ ರಣ ಬಿಸಿಲಿನಲ್ಲಿ ಕಾಲಿಡುವ ಧೈರ್ಯವಿಲ್ಲದೆ ಮನೆಯೊಂವರ ಜಗುಲಿಯಮೇಲೆ ಕುಳಿತು ಟವಲ್ಲಿನಲ್ಲಿ ಮುಖ ಮರೆಯಿಸಿಕೊಂಡು ಹುರಿದ ಬಟಾಣೆಯ ಕಾಳನ್ನು ಒಂದೊಂದಾಗಿ ಬಾಯಿಗೆಸೆದುಕೊಳ್ಳುತ್ತಿದ್ದ ಮುನಿಯ.

ಹೆಜ್ಜೆಯ ಶಬ್ದವಾದಾಗಲೆಲ್ಲ ಮುಸುಕು ಸರಿಸಿ ಹದ್ದಿನ ಕಣ್ಣುಗಳಿಂವ ಬಂದು ಹೋಗುವವರನ್ನು ನೋಡುತ್ತ ಅದೇ ಕೊಳಕು ಟವಲ್ಲಿನಿಂದ ಮುಖ ಮರೆಯಿಸುತ್ತಿದ್ದ. ಹಿಡಿಯಲ್ಲಿದ್ದ ಕಾಳೆಲ್ಲ ಬಾಯೊಳಗೆ ಹೋಗಿ ಅದೃಶ್ಯವಾಗುತ್ತಿದ್ದರೂ ಅವನಿಗೆ ಬೇಕಾದ ಯಾವ ಮನುಷ್ಯನೂ ಬಾರದಿದ್ದುದು ಅವನಿಗೇಕೋ ಅಸಹನೆಯೇ ಆಯಿತು. ಕುಳಿತಿರಲಾರದೆ ಮೇಲೇಳಬೇಕೆನ್ನುವಷ್ಟರಲ್ಲಿ ರಸ್ತೆಯ ತಿರುವಿನಲ್ಲಿ ಬರುತ್ತಿದ್ದ ವ್ಯಕ್ತಿ ಅವನ ಗಮನ ಸೆಳೆಯಿತು.

ಆ ಅಸಾಧ್ಯ ಸೆಖೆಯಲ್ಲೂ ಕ್ಲೋಸ್ ಕಾಲರ್ ಕೋಟು, ಜರೀವೇಟ, ಕಚ್ಚೆಪಂಚೆಗಳಿಂದ ಶೋಭಿಸುತ್ತಾ; ಕೊಡೆ ಚಪ್ಪಲಿಗಳಿಂದಾಗಿ ಬಿಸಿಲಿನಿಂದ ರಕ್ಷಿಸಿಕೊಳ್ಳುತ್ತಾ ಬರುತ್ತಿದ್ದ ಆ ದೊಡ್ಡ ಮನುಷ್ಯರನ್ನು ನೋಡಿ ಮುನಿಯನ ಕಣ್ಣು ಮಿನುಗಿತು.

ಕ್ಷಣದಲ್ಲಿ ಕಣ್ಣು, ಮುಖದಲ್ಲಿ ಅಪಾರ ದೈನ್ಯತೆ ಮೂಡಿಸಿಕೊಂಡು ಅವರೆದುರು ಕೈಚಾಚಿ ನಿಂತ.

"ಮೂರ್ದಿನ್ದಿಂದ ಊಟ ಇಲ್ಲ ದೇವ್ರ.............. ಸಂಕ್ಟ ತಾಳಕ್ಕಾಗಲ್ಲ...... ಏನಾದ್ರು ಕೊಡಿ ಭಗವಂತಾ...... ಧ್ವನಿಯನ್ನು ಕ್ಷೀಣಗೊಳಿಸಿ ಮೊರೆಯಿಟ್ಟ ಮುನಿಯನ ಧ್ವನಿಯಲ್ಲಿ ಅಳಲು ತುಂಬಿ ತುಳುಕುತ್ತಿತ್ತು.

ಆತ ಮುನಿಯನನ್ನು ಆಪಾದಮಸ್ತಕ ನೋಡಿದರು. ನಾಲ್ಕಾರು ಕಡೆ ಹರಿದ ಕೊಳಕು ಪಂಚೆ, ಮೈಯೆಲ್ಲಾ ತೂತಾಗಿ ಕಾಲರ್ ಕಿತ್ತುಬಂದಿದ್ದ ಶರಟು, ಹಣೆಯ ತುಂಬಾ ಕವಿದು ಬಂದಿದ್ದ ಕೆಂಚಗಿನ ಕೊಳೆಯಾದ ಪುರುಚುಲು ಕೊದಲು, ಕಣ್ಣು-ಮುಖದಲ್ಲಿ ಅತೀವ ದೀನತೆ................

ಈ ಬಗೆಯಲ್ಲಿ ತನ್ನನ್ನು ನೋಡುತ್ತಿರುವ ಆತನ ಮನದಲ್ಲೇಳುವ ಭಾವನೆಗಳನ್ನು ಊಹಿಸುತ್ತಾ ಒಮ್ಮೆ ಕೆಟ್ಟದಾಗಿ ಒರಲಿದ ಮುನಿಯ. 'ಶಾನೆ ಸಂಕ್ಟ ಆಗ್ತಿದೆ ಸ್ವಾಮಿ.......... ನಿಮ್ ಕಾಲ್ಗೆ ಬೀಳ್ತೀನಿ.......... ನಿಮ್ ಮಕ್ಳು ಮರಿಗೆ ಪುಣ್ಯ ಬರ್ತದೆ.......... '

'ಏನಯ್ಯಾ ನೋಡೋಕ್ಕೆ ಒಳ್ಳೆ ಕಲ್ಲುಗುಂಡಿದ್ದಾಗೆ ಇದ್ದೀಯಾ. ಕೂಲಿ ಕೆಲ್ಸಕ್ಹೋದ್ರೆ ಎರಡೋ ಮೂರೋ ಕೊಡ್ತಾರೆ. ಅದ್ ಬಿಟ್ಟು ಈ ತಿರುಪೆ ಬೇಡೋಕ್ಕೆ ನಾಚ್ಕೆಯಾಗೋಲ್ವ? ಆತ ತಿರಸ್ಕಾರದಿಂದ ನುಡಿದರು.

"ಅಯ್ಯೋ ದೇವ್ರೆ ನನ್ ಕಷ್ಟ ಯಾರ್ಗೂ ತಿಳಿಯಾಕಿಲ್ವಲ್ಲ ಪರಮಾತ್ಮ.........." ಮತ್ತೂ ಕೆಟ್ಟದಾಗಿ ನರಳುತ್ತಾ ಬಾರದ ಕೆಮ್ಮನ್ನು ತಂದುಕೊಂಡ. ಒಂದೆರಡು ನಿಮಿಷ ಭಯಂಕರವಾಗಿ ಕೆಮ್ಮಿದ ಮುನಿಯ

ದುಡಿಮೆಯೇ ದೇವರೆಂದು ಸಾರಿದ್ದಾರೆ ಮಹಾತ್ಮರು. ಆದರೆ ಬೆವರು ಸುರಿಸಿ ಜೀವನ ಮಾಡುವರೆಷ್ಟು ಮಂದಿ? "ಮುನಿಯ" ನಂತಹ ಸೋಮಾರಿ ಧಾಂಡಿಗರು ಜೀವನ ನಡೆಸುತ್ತಿರುವುದಾದರೂ ಹೇಗೆ? ಇಂಥಹವರ ಜೀವನ ಸಮಾಜಕ್ಕೆ "ವಿಷವೃತ್ತ" ವಲ್ಲದೆ ಮತ್ತೇನು?

"ನನ್ಗೀರೋಗ ಅತ್ಕೊಂಡು ಯಾವ ಕೆಲ್ಸಾನೂ ಮಾಡ್ಬುಡ್ದೆ ಮೂಲೆಗ್ ಕುಂಡಸ್‌ಬಿಟ್ಟದಲ್ಲ ಬುದ್ದಿ"

'ಎಲ್ಲಾ ಕಳ್ಳನನ್ಮಕ್ಳು ನೀವು. ದುಡಿಬೇಕ ಗುತ್ತೆ ಅಂತ ಆಟಗಳ್ ಕಟ್ಕೊಂಡ್ ಬೇಡೋ ನಿಂಜಾತಿ ಬುದ್ದಿ ನಂಗೊತ್ತಿಲ್ವಾ'

ಆತ ಜಿಗುಪ್ಸೆಯಿಂದ ಮುಖ ತಿರುಗಿಸಿ ಎರಡು ಹೆಜ್ಜೆ ಮುಂದಿಟ್ಟರು.

'ಅಯ್ಯೋ ದೇವ್ರೆ ನಾನಂತಪ್ನಲ್ಲ ಸೋಮಿ ನಿಮ್ಹತ್ರ ಯಾವ್ದಾದ್ರು ಚಾಕ್ರಿ ಇದ್ರೆ ಕೊಡಿ, ಮಾಡ್ಕೊಂಡು ನಿಮ್ ಕಾಲ್‌ಹತ್ರ ಬಿದ್ದಿರ್ತೀನಿ' ಗೋಗರೆದ ಮುನಿಯ.

'ಹೋಗೋಗಯ್ಯ...... ಇನ್ನು ಅದೊಂದು ಕಡಿಮೆ ನಿಶ್ ಮುಖಕ್ಕೆ. ನನ್ಹತ್ರ ನೀ ಮಾಡೋವಂತ ಕೆಲಸ ಯಾವ್ದು ಇಲ್ಲ ಹೋಗು.'

ಆತ ಬಿರುಸಾಗಿ ಹೆಜ್ಜೆಯಿಟ್ಟಾಗ ಮುನಿಯ ಅವರ ಹಿಂದೆಯೇ ಓಡಿದ.

'ಅಂಗೇ ಓಗ್ಬೇಡೀ ಧಣಿ........... ನಿಮ್ ಕಾಲಿಗೆ ಬೀಳ್ತೀನಿ...........'

'ಥೂತ್ ಏನ್ ಹಾವಳಿ ಶುರುವಾಗೋಯ್ತು ಈಗೀಗ ನಿಮ್ಗಳದ್ದು...........'

ಆತ ಕೋಟಿನ ಒಳಜೇಬು ತಡವಿ ತನ್ನತ್ತ ಎಸೆದು ಹೋದ ನಾಣ್ಯವನ್ನು ನೋಡಿದ ಮುನಿಯ.

ಒಂದು ಪೈಸ........... ಬರೀ ಒಂದು ಪೈಸ...... ....! ಒಂದೇ ಒಂದು ನಯಾ ಪೈಸ...........! 'ನಾನೇ ಲುಚ್ಛಾ ಅಂದ್ರೆ ನನ್ಗಿಂತಾ ಲುಚ್ಛಾಮಗ ನೀನು...........'

ಆತ ಹೋದ ದಿಕ್ಕಿಗೆ ಕ್ಯಾಕರಿಸಿ ಉಗಿದು ಪೈಸೆ ಜೇಬಿಗಿಳಿಬಿಟ್ಟು ಮತ್ತೆ ತಾನು ಕುಳಿತಿದ್ದ ಜಗುಲಿಯತ್ತ ನಡೆದ ಮುನಿಯ. ಅವನು ಕುಳಿತಿದ್ದ ಜಗುಲಿಯ ಮೇಲೆ ಇಬ್ಬರು ಹೆಂಗಸರು ರಸ್ತೆಗೆ ಬೆನ್ನುಹಾಕಿ ಕುಳಿತು ತಲೆ ತಗ್ಗಿಸಿ ಏನೋ ಮಾಡುತ್ತಿದ್ದರು.

ಮುನಿಯ ಜಗುಲಿ ಹತ್ತಿ ಇಣುಕಿ ನೋಡಿದಾಗ ಅವರಿಬ್ಬರೂ ದೋಸೆ ತಿನ್ನುತ್ತಿದ್ದರು. ಮುನಿಯ ತಕ್ಷಣ ಜಗುಲಿ ಮೂಲೆ ಸೇರಿ ಮಂಡಿಗೆ ತಲೆ ಸಿಕ್ಕಿಸಿ ವಿಕಾರವಾಗಿ ನರಳಲಾರಂಭಿಸಿದ. ಆ ಹೆಂಗಸರು ತಿನ್ನುವುದನ್ನು ಬಿಟ್ಟು ಇವನ ಕಡೆ ನೋಡಿದಾಗ ಅಯ್ಯೋ...... ಅಮ್ಮ...... ..... ಎನ್ನುತ್ತಾ ಮತ್ತೂ ಜೋರಾಗಿ ನರಳಲಾರಂಭಿಸಿದ.

'ಯೋವ್........... ಯಾಕಯ್ಯ........... ಏನಾಗ್ತದೆ ನಿಂಗೆ ?'

ಒಬ್ಬಾಕೆ ಎದ್ದುಬಂದು ಎರಡೆರಡುಬಾರಿ ಕೇಳಿದ ಮೇಲೆ ಮಾತನಾಡಲೂ ಚೈತನ್ಯವಿಲ್ಲದವನಂತೆ ಹೊಟ್ಟೆ ಮುಟ್ಟಿ ತೋರಿಸಿದ ನರಳುತ್ತಾ.

"ಒಟ್ಟೆ ನೋಯ್ತದಾ...........?"

ಇಲ್ಲವೆಂದು ತಲೆಯಾಡಿಸಿ ಅವರ ತಿಂಡಿ ಕಡೆ ಕೈ ತೋರಿಸಿ ಮತ್ತೆ ಹೊಟ್ಟೆ ಅದುಮಿಕೊಂಡು ಮಿಸುಕಾಡಿದ ಮುನಿಯ.

ಹೆಂಗಸರಿಬ್ಬರೂ ಸಹಾನುಭೂತಿಯಿಂದ ಲೊಚಗುಟ್ಟಿದರು. ತಮ್ಮಿಬ್ಬರ ದೋಸೆಯನ್ನು ಅವನ ಮುಂದಿಟ್ಟು 'ತಿನ್ನು' ಎಂದರು.

ಇಬ್ಬರ ಎರಡೆರಡು ದೋಸೆಯಲ್ಲೂ ಆಗತಾನೆ ಒಂದೊಂದು ಚೂರನ್ನು ಮುರಿದು ಬಾಯಿಗಿಟ್ಟಿದ್ದರಷ್ಟೇ. ಮುನಿಯ ದೋಸೆಯನ್ನು ಬಾಯಿಗೆ ತುರುಕಿಕೊಂಡು ಗಬಗಬನೆ ಅಗಿದು ನುಂಗುವುದನ್ನೇ ನೋಡುತ್ತಿದ್ದ ಹೆಂಗಸರಲ್ಲಿ ಕನಿಕರ ಉಕ್ಕಿ ಬಂತು.

'ಪಾಪ...... ಏಸ್ ದಿನ್ವಾಯ್ತೋ ಒಟ್ಟೆಗೆ ತಿಂದು...... ಅಸಿವೆಗಿಂತ ಕೆಟ್ಟದ್ದು ಈ ಪರಪಂಚದಾಗೆ ಯಾವ್ದೂ ಇಲ್ಲವ್ವಾ...........!

'ದಿಟ ಕಣವ್ವ...........'

ಮತ್ತೆರಡು ನಿಮಿಷ ಮೌನವಾಗಿ ಕಳೆಯಿತು. ಒಬ್ಬಾಕೆ ಕೇಳಿದಳು 'ಯಾಕ್ ತಮ್ಮಯ್ಯ...........ನೀನೂ

ಎಲ್ಲಾದ್ರೂ ನಮ್ಮಂಗೆ ಕೂಲಿ-ಕಂಬ್ಳ ಮಾಡಕ್ಕಾಗ್ದ...... ಒಟ್ಟೆ ತುಂಬ್ತೈತೆ...........'

"ಏ ಹ್ಯಾಮ್ಡ್ಲವ್ವಾ.......... ಈ ರೋಗ ನನ್ನ ಬಿಡಾಕಿಲ್ವಲ್ಲ...... ....."

ಮುನಿಯ ಒಮ್ಮೆ ಭಯಂಕರವಾಗಿ ಕೆಮ್ಮಿ, ಕೆಟ್ಟದಾಗಿ ನರಳಿದ.

'ಯಾವೂರು ನಿಂದು?'

'ಅಯ್ಯೋ ಸಿನ್ನೆ...........ಪರದೇಶಿಗಳ್ಗೆ ಊರ್ಯಾವ್ದು ಬಾಗ್ಲ್ಯಾವ್ದವ್ವ...........?'

ಹೆಂಗಸರು ಸುಮ್ಮನಾದರು. ಸೀರೆ ಕೊಡವಿಕೊಳ್ಳುತ್ತಾ ಮೇಲೆದ್ದರು.

'ಒಗಾನ ಏಳವ್ವಾ..... ಒತ್ತಾದ್ರೆ ಮೇಸ್ತ್ರಿ ಮಾನ ಕಳೀತವ್ನೆ...........'

'ನಡೀವಂತೆ......ನಂಗೆ ನಿನ್ನೇನೂ ಕೂಲಿ ಕೊಟ್ಟಿಲ್ಲ. ಇಂದಾದ್ರು ಈಸ್ಕಬೇಕು'

ಹೊಟ್ಟೆ ತುಂಬಿದರೂ ನರಳುವುದನ್ನು ಬಿಡದ ಮುನಿಯ ಹೆಂಗಸರ ಬೆನ್ನು ಮರೆಯಾದೊಡನೆ ಕಿಸಕ್ಕನೆ ನಕ್ಕು ಸುಮ್ಮನಾದ

*** *** ***

ಸಾಯಂಕಾಲ ಆರೂವರೆಯ ಸಮಯ, ಮಫ್ಲರ್ ತಲೆಗೆ ಸುತ್ತಿ ಕಾಕಿ ಪ್ಯಾಂಟ್ ಹಾಕಿದ್ದ ವ್ಯಕ್ತಿಯೊಬ್ಬ ಸಿಟಿ ಮಾರ್ಕೆಟ್ಟಿನ ಮುಂದು ನಿಂತಿದ್ದ. ಅವನ ದೇಹ ನಿಶ್ಚಲವಾಗಿ ನಿಂತಿದ್ದರೂ ಅವನ ಕಣ್ಣುಗಳು ಮಾರ್ಕೆಟ್ಟಿನೊಳಗೆ ಹೋಗುವವರ ಬರುವವರ ಮೇಲೆ ಬುಗುರಿಯಂತೆ ಸುತ್ತುತ್ತಿತ್ತು. ಸುಮಾರು ಹತ್ತಾರು ಬಾರಿ ಮಾರ್ಕೆಟ್ಟಿನೊಳಗೆ ಹೋಗಿ ಕಣ್ಣಾಡಿಸಿ ಕೈಯಾಡಿಸಿ ನಿರಾಶೆಯಿಂದ ಈಗ ಮುಂಭಾಗಕ್ಕೆ ಬಂದಿದ್ದ ಆತ.

ಇದ್ದಕ್ಕಿದ್ದಂತೆ ಅವನಿದ್ದ ಸ್ಥಳದಿಂದ ಕೊಂಚ ದೂರದಲ್ಲಿ ನಾಲ್ಕಾರು ಜನರ ಗಲಾಟೆ, ಕೂಗು ಕೇಳಿಸಿ,

ಕಣ್ಣು ರೆಪ್ಪೆ ಹೊಡೆಯುವಷ್ಟರಲ್ಲಿ ಅಲ್ಲೊಂದು ಗುಂಪು ಕೂಡಿಬಿಟ್ಟಿತ್ತು. ಜನ ಒಬ್ಬರ ಮೇಲೊಬ್ಬರು ಬಿದ್ದು ಒತ್ತರಿಸಿ ಏನೆಂದು ನೋಡಲು ಕಾತರಿಸುತ್ತಿತ್ತು.

ಗುಂಪಿನಲ್ಲಿ ಗೋವಿಂದನಾದ ಅವನು, ವಿಷಯವೇನೆಂದು ತಿಳಿಯಬೇಕಿರಲಿಲ್ಲ ಅವನಿಗೆ. ಅವನ ಗುರಿಯೇ ಬೇರೆ. ಜನಗಳನ್ನು ಒತ್ತರಿಸಿ ಒತ್ತರಿಸಿ ಸರಿಯುತ್ತಿದ್ದ ಅವನ ಕಣ್ಣು, ಕೈಗಳು ಚುರುಕಿನಿಂದ ಕೆಲಸ ಮಾಡುತ್ತಿದ್ದವು.

ಘಳಿಗೆಯಲ್ಲಿ ಅವನ ತೀಕ್ಷ್ಣವಾದ ಕಣ್ಣುಗಳು ಮಿಂಚಿ ಚಾಲಾಕಿನ ಕೈಗಳು ಮಿಂಚಿನಂತೆ ಕೆಲಸ ಮಾಡತೊಡಗಿದ್ದವು. ಮರುಘಳಿಗೆಯಲ್ಲಿ ಉಬ್ಬಿದ ಪ್ಯಾಂಟಿನ ಜೇಬೊಂದು ಜೋಲಾಡುವ ಡೊಳ್ಳು ಚೀಲವಾಗಿ ಅವನ ಒಳ ಜೇಬಿನ ಹೊಟ್ಟೆ ಊದಿಕೊಂಡಿತ್ತು.

ಮತ್ತೆರಡು ಘಳಿಗೆಯಲ್ಲಿ ಅವನ ಬಿರುಸಾದ ಕಾಲುಗಳು ಗುಂಪಿನಿಂದ ಅವನನ್ನು ಮಾರುದೂರ ಒಯ್ದಿದ್ದವು. ಆದರೆ ಮತ್ತೂ ಎರಡು ಘಳಿಗೆಯೊಳಗೆ ಜನಗಳು ಅವನನ್ನು ಅಟ್ಟಿಸಿ ಕೊಂಡು ಬರುತ್ತಿದ್ದರು.

'ಜೇಬುಗಳ್ಳ !' 'ಹಿಡಿಯಿರಿ !' 'ಒದೆಯಿರಿ !'

ಅವನು ಬೀಳುವುದನ್ನೂ ಲೆಕ್ಕಿಸದೆ ಗಲ್ಲಿಯೊಂದಕ್ಕೆ ನುಗ್ಗಿ ಮೋಟು ಕಾಂಪೌಂಡಿನ ಹಿಂದೆ ಕತ್ತಲೆಯ ರಕ್ಷಣೆಯಲ್ಲಿ ಬಚ್ಚಿಟ್ಟುಕೊಂಡ.

ಗಲ್ಲಿಗೂ ಅಟ್ಟಿಸಿಕೊಂಡು ಬಂದ ಜನಗಳು ಹುಡುಕಿ ಬೇಸತ್ತರು........ನಿರಾಶರಾದರು........ಸಿಟ್ಟಿಗೆದ್ದರು. 'ಮೈಗಳ್ಳನುಕ್ಳು ಮೈಮುರಿದು ದುಡಿದು ತಿನ್ನೋಕ್ಕೇನ್ ದಾಡಿನೋ ಹೊಲಸು ಮುಂಡೇವಕ್ಕೆ....' ಕೊನೆಯದಾಗಿ ಉಗಿದು ಚದುರಿಹೋದರು ಜನಗಳು.

ಗಲ್ಲಿಯಲ್ಲಿ ನಿಶ್ಯಬ್ದ ಆವರಿಸಿದ ನಂತರವೂ ಕೊಂಚ ಹೊತ್ತು ಕಾಯ್ದು ನಂತರ ಈಚೆಗೆ ಬಂದ ಅವನು. ನಿರ್ಜನವಾದೊಂದು ರಸ್ತೆಗೆ ನಡೆದು ಬೀದಿ ದೀಪದಡಿ ಪರ್ಸ್ ಬಾಯಿ ಹಿಗ್ಗಲಿಸಿ ನೋಡಿದ......! ಮತ್ತೂ ಒಳಗಿದ್ದುದನ್ನು ಹೊರಗೆಳೆದು ನುಂಗುವಂತೆ ನೋಡಿಯೇ ನೋಡಿದ........! ಏನಿದೆ ಅಲ್ಲಿ ?

ಇಸ್ಪೀಟು ಎಲೆಗಳು ! ಕೊಳಕಾದ ಇಸ್ಪೀಟು ಎಲೆಗಳು........!

ಪರ್ಸನ್ನು ಹಿಗ್ಗಮುಗ್ಗ ಎಳೆದ. ತಲೆಕೆಳಕು ಮಾಡಿ ಒದರಿದ....ಟಣ್ ಎಂದು ಬಿದ್ದ ನಾಣ್ಯವನ್ನೆತ್ತಿಕೊಂಡು ನೋಡಿದ. ಎರಡು ಪೈಸೆಯ ನಾಣ್ಯವಷ್ಟೆ...

'ಥೂತ್ ಬೇವಾರ್ಸಿ ನನ್ ಮಗಂದು........ ನಾಲಾಯಕ್ ನನ್ ಮಗಂದು........'

ಪರ್ಸನ್ನು ಬೀಸಿ ರಸ್ತೆಯ ಬದಿಯ ಬಚ್ಚಲಿಗೆ ಒಗೆದ. ಹಲ್ಲು ಕಡಿಯುತ್ತಾ ನಡೆದ ಮುನಿಯ.

*** *** ***

ರಾತ್ರಿಯ ಎಂಟೂವರೆ ಘಂಟೆಯ ಸಮಯ. ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಅಂಗಡಿಗಳನ್ನು ಒಂದೊಂದಾಗಿ ಮುಚ್ಚುತ್ತಿದ್ದರು.

ಅದೊಂದು ಸ್ಟೇಷನರಿ ಸಾಮಾನಿನ ಚಿಕ್ಕ ಅಂಗಡಿ. ಅಂಗಡಿ ಚಿಕ್ಕದಷ್ಟೇ, ಆದರೆ ಅಲ್ಲಿನ ಸಾಮಾನುಗಳಲ್ಲಿ ಬರೀ ಇಂಪೋರ್ಟೆಡ್ ಸಾಮಾನುಗಳೇ ಅರ್ಧದಷ್ಟು.

ಅಂಗಡಿಯನ್ನು ಮುಚ್ಚುವ ಹವಣಿಕೆಯಲ್ಲಿದ್ದ ಮಾಲೀಕ ಅವಸರದಲ್ಲಿ ಮೆಟ್ಟಿಲು ಹತ್ತಿ ಅಂಗಡಿಯೊಳಗೆ ಬಂದ ವ್ಯಕ್ತಿಯನ್ನು ನೋಡಿದ. ಬೆಲೆಬಾಳುವ ಸೂಟು, ಚಿನ್ನದ ಸ್ಟ್ರ್ಯಾಪ್ ಒಳಗೊಂಡ ವಾಚು, ಫ್ರೆಂಚ್ ಕಟ್ ಮೀಸೆ, ಶ್ರೀಮಂತಿಕೆಯ ದರ್ಪದಿಂದ ಬೀಗುತ್ತಿದ್ದ ಮುಖಭಾವ........!

ಅರ್ಧ ಮುಚ್ಚಿದ ಬಾಗಿಲನ್ನು ತೆರದು ಏನುಬೇಕೆಂದು ಅತಿ ನಮ್ರತೆಯಿಂದ ವಿಚಾರಿಸಿದ ಮಾಲೀಕ. ತನ್ನ ವ್ಯಕ್ತಿತ್ವವನ್ನು ಒಮ್ಮೆ ನೋಡಿಕೊಂಡು ತುಟಿಯಂಚಿನಲ್ಲಿ ನಕ್ಕ ಸೂಟುಧಾರಿ ಯುವಕ ಮುನಿಯ....... !

ಹೊಸದಾಗಿ ಇಂಪೋರ್ಟೆಡ್ ತಿಂಗ್ಸ್ ಏನೇನು ಬಂದಿದೆ .... ತೋರಿಸಿ ....ಎಂದ ಅಲಕ್ಷ್ಯವಾಗಿ. ಮಾಲೀಕ ಗಡಿಬಿಡಿಯಿಂದ ಓಡಾಡಿಕೊಂಡು ಸಾಮಾನುಗಳನ್ನು ತಂದು ಮುಂದಿರಿಸಿದ.

ಪೆನ್ನು....... ವಾಚು........ಸೋಪು ....ಸೆಂಟ್ ಬಾಟಲ್........ ಮ್ಯೂಸಿಕ್ ಕೀಚೈನು.......ಟಾರ್ಚ್ ಹೀಗೆ ಸುಮಾರು ಸಾಮಾನುಗಳು ಅವನೆದುರು ಕುಳಿತವು. ಅವುಗಳಲ್ಲೆಲ್ಲಾ ಮುನಿಯನ ಕಣ್‌ಗಳೆದುರು ಒಂದು ಪುಟ್ಟ ಟ್ರಾನ್ಸಿಸ್ಟರ್. ಪುಟ್ಟದು ಎಂದರೆ ಅಂಗೈಯಲ್ಲಿಟ್ಟುಕೊಂಡು ಮುಚ್ಚಿಟ್ಟುಕೊಳ್ಳಬಹುದು. ಕಿವಿಯ ಹತ್ತಿರ ಹಿಡಿದುಕೊಂಡರೆ ಸೊಗಸಾಗಿ ಕೇಳಬಹುದು. ಬೆಲೆ 350 ರೂಪಾಯಿಗಳು.

ಮಾಲೀಕ ಕೈಕಟ್ಟಿಕೊಂಡು ನಿಂತಿದ್ದ. ಮುನಿಯನ ಕಣ್ಣು ಟ್ರಾನ್ಸಿಸ್ಟರ್ ಮೇಲಿದ್ದರೂ ಅಲ್ಲಿನ ಸಾಮಾನುಗಳ್ಯಾವುವೂ ಒಪ್ಪಿಗೆಯಿಲ್ಲವಂತೆ ತಲೆಯಾಡಿಸಿದ.

' ಬೇರೆ ಇನ್ನೇನೂ ಇಲ್ವಾ........?' ಎಂದ. ಮಾಲೀಕ ಜ್ಞಾಪಿಸಿಕೊಂಡವನಂತೆ "ಒಂದು ಟೇಪ್ ರಿಕಾರ್ಡ್ ಇದೆ ನೋಡಿ ಬೇಕಿದ್ರೆ" ಎನ್ನುತ್ತ ಬೀರುವಿನ ಕಡೆ ನಡೆದ.

ಮುನಿಯನ ಮಿದುಳು ಮಿಂಚಿನಂತೆ ಕೆಲಸ ಮಾಡಿತು. ಆ ಪುಟ್ಟ ಟ್ರಾನ್ಸಿಸ್ಟರ್ ಅವನ ಕೈಗೆ ಬಂದು ಅವನ ಒಳ ಜೇಬಿಗೆ ನುಸುಳುತ್ತಿತ್ತು.

ಆದರೆ........ ಆಗಲಿಲ್ಲ..........

ಮಾಲೀಕ ಆಕಸ್ಮಿಕವಾಗಿ ಇತ್ತ ತಿರುಗಿದ. ಅಷ್ಟೆ ಆಕಸ್ಮಿಕವಾಗಿ ಅವನ ಕಣ್ಣುಗಳು ಮುನಿಯನ ಕೈಕಡೆ ಹೊರಳಿದವು. ಮಾಲೀಕ ಪರಿಸ್ಥಿತಿ ಏನಾಯಿತೆಂದು ಊಹಿಸುವುದರೊಳಗೆ ಮುನಿಯ ಮಾರು ದೂರದಲ್ಲಿ ಓಡುತ್ತಿದ್ದ. ಮಾಲೀಕ ಬೊಬ್ಬೆಯಿಡುತ್ತಾ ಬೆನ್ನಟ್ಟಿದಾಗ ರಸ್ತೆಯಲ್ಲಿದ್ದ ಜನಗಳು ಅವನ ಜೊತೆಗೂಡಿಕೊಂಡರು.

ಮುನಿಯನ ಚಾಣಾಕ್ಷತೆ, ಮಿಂಚಿನ ವೇಗ ಒಂದೂ ಈ ಭಾರಿ ಪ್ರಯೋಜನವಾಗಲಿಲ್ಲ. ಎದುರುಗಡೆಯಿಂದ ಬಂದವನೊಬ್ಬ ಅವನನ್ನು ಭದ್ರವಾಗಿ ಹಿಡಿದಿದ್ದ.

ಕ್ಷಣದಲ್ಲಿ ಮುನಿಯನ ಮುಖ, ಮೈಗೆ ಹೊಡೆತಗಳ, ಒದೆತಗಳ ಪೆಟ್ಟು ಬಲವಾಗಿ ಬೀಳುತ್ತಿತ್ತು. ಬಾಯಿ, ಮೂಗಿನಿಂದ ರಕ್ತ ಸುರಿಯುವವರೆಗೂ ಹೊಡೆದು ಟ್ರಾನ್ಸಿಸ್ಟರ್ ಕಿತ್ತುಕೊಂಡುದಲ್ಲದೆ ಅವನ ಜೇಬಿನ ಜಪ್ತಿಯನ್ನು ನಡೆಸಿ ನಾಲ್ಕಾರು ದಿನಗಳ ಸಂಪಾದನೆ

ಯಾದ 210 ರೂಪಾಯಿಗಳನ್ನು ಕಿತ್ತುಕೊಂಡು ಉಗಿದರು ಜನಗಳು. ಒಬ್ಬ ಅವನ ಸೂಟಿಗೆ ಉಗಿದರೆ ಮತ್ತೊಬ್ಬ ಅವನ ಟೈಗೆ ಉಗಿದ.

'ಬೆಲೆ ಬಾಳೋ ಬಟ್ಟೆ ಹಾಕ್ಕೊಂಡು ದೊಡ್ಡ ಮನುಷ್ಯನ ಹಾಗೆ ಬರೋದು.......... ಮಾಡೋದು ಈ ಹಲ್ಕಾ ಕೆಲಸ.......... ನಾಚ್ಕೆಯಾಗೋಲ್ಲಾ ನಿನ್ನ ಜನ್ಮಕ್ಕೆ ಹೋಗಿ ಎಲ್ಲಾದ್ರು ಮೈ ಬಗ್ಗಿಸಿ ದುಡಿ..........'

ಮಾಲೀಕ ಮತ್ತೊಮ್ಮೆ ಒದೆದು, ಉಗಿದು ನಡೆದ. ಅವನ ಹಿಂದೆಯೇ ಜನಗಳು ನಡೆದರು. ತೂರಾಡುತ್ತಾ, ಕುಂಟಿಕೊಂಡು ತಳ್ಳಾಡಿಕೊಂಡು ನಡೆದ.

** ** ** **

ಒಂಬತ್ತು ಗಂಟೆಗೆ ತನ್ನ ಮನೆಗೆ ಬಂದ ಮುನಿಯನನ್ನೂ ಅವನ ಅವಸ್ಥೆಯನ್ನೂ ನೋಡಿ ಲಚ್ಚಿಗೆ ಆಶ್ಚರ್ಯ, ಗಾಬರಿಗಳುತ್ಪನ್ನವಾದವು. ಆದರೆ ಒಂದು ಕ್ಷಣವಷ್ಟೇ. ಮುನಿಯನಿಗೆ ಪ್ರಾಣಾಂತಕ ಪೆಟ್ಟೇನೂ ಬಿದ್ದಿಲ್ಲವೆಂದು ಅರಿತ ಕೂಡಲೇ ಮತ್ತೆ ಉದಾಸೀನಳಾದಳು,

ಬೆಳಿಗ್ಗೆ ತಿಂದ ದೋಸೆಯಷ್ಟೆ. ಮೈಕೈ ನೋವಿನ ಜೊತೆಗೇ ಹೊಟ್ಟೆಯ ಹಸಿವೂ ಕಿತ್ತು ತಿನ್ನುತ್ತಿತ್ತು ಮುನಿಯನಿಗೆ.

'ಲಚ್ಚೀ......ಹೊಟ್ಟೆಗೇನಾದ್ರು ಹಾಕು ಮೊದ್ಲು...... ಪ್ರಾಣ ಹೋಗೋವಂಗೈತೆ......' ಎಂದ.

'ಹೂ......ಹೂ......ಇನ್ಯಾವತ್ತು ನಿಂಗೆ ಪ್ರಾಣ ಓಗ್ದೆ ಇರೋದು ? ನಿನ್ನಾಟ ಎಲ್ಲಾ ಇನ್ನೂ ನಡೀತದೆ ಅಂದ್ಕೊಂಡ್ಯಾ ? ಎಲ್ಲಿ, ಶತ್ತಾ ಮೊದ್ಲು ಎಷ್ಟು ಸಿಕ್ತು ಈವೊತ್ತು......?'

'ಸಿಕ್ತು ನಿನ್ನ ಹೆಣ ! ನಾನು ಬದುಕಿ ಬಂದದ್ದೇ ಪುಣ್ಯ, ನಿನಗೇನು ಕೊಡೋದು ?'

ಲಚ್ಚಿ ಬಿಟ್ಟುಕೊಟ್ಟಾಳೆಯೇ ? ಅವನಿಗಿಂತಲೂ ಜೋರಾಗಿ ಒದರಿದಳು.

"ಮತ್ತೇನ್ ಇಲ್ಲಿ ಬಿಟ್ಟೆ ಕೂಳ್ ಹಾಕ್ತಾಳೇಂತಾ ಬಂದ್ಯಾ ?.......... ಹೋಗ್ಲೇ.......... ಹೋಗ್ಲೇ ಆ ನಾಗಿ ಹತ್ತಾನೆ......'

'ಬೇಡಾ ನೋಡು ಒಳ್ಳೆ ಮಾತ್ನಿಂದ ಅಂದ್ರೆ ಸರಿ... ಇಲ್ಲಾಂದ್ರೆ......'

ಮುನಿಯ ಲಚ್ಚಿಯನ್ನು ಕ್ರೂರವಾಗಿ ನೋಡಿದ.

'ಏನೋ ಮಾಡ್ತಿಯಾ ನೀನು? ನಾಮರ್ದ ಮಗ್ನೆ.....ನಾಚ್ಕೆ ಇಲ್ದೆ ಒಡಿಸ್ಕೊಂಡ್ಬಂದು ನನ್ಮುಂದೆ ಜೋರ್‍ಮಾಡ್ತಿಯಾ ...? ಬಾ......ನೋಡೋವಾ ಒಂದು ಕೈ......'

ಲಚ್ಚಿ ತಾನೂ ಅಷ್ಟೇ ಕ್ರೂರವಾಗಿ ಅವನನ್ನು ನೋಡುತ್ತಾ ಸೆರಗು ಸೊಂಟಕ್ಕೆ ಬಿಗಿದು ನಿಂತಾಗ ಮುನಿಯ ಅವಳಿಗಿದ್ದ ಬಲವನ್ನರಿತೋ ಅಥವಾ ತನ್ನ ಅವಸ್ಥೆಯನ್ನರಿತೋ ಮೆತ್ತಗಾದನು.

'ನಿಂದಮ್ಮಯ್ಯ ಲಚ್ಚಿ...... ಬೇಕಾದ್ರೆ ನಿಂಕಾಲ್ಗೇ ಬೀಳ್ತೀನಿ......ನಂಗೇನಾದ್ರು ಕೊಡು ನಾಳೆಗೆ ನಿಂಗೆ ಎರಡ ರಷ್ಟು ಕೊಡ್ತೀನಿ......'

ಲಚ್ಚಿಯೇನು ಮಿಸುಕಲಿಲ್ಲ. ಅದೇ ಧ್ವನಿಯಲ್ಲಿ ಹೇಳಿದಳು.

'ನಾಚ್ಕೆಯಾಗೋಲ್ವ ಹೆಣ್ಣಿಗನಂತೆ ಗೋಗರಿಯೋಕ್ಕೆ. ಗಂಡ್ಸಾಗಿ ಹುಟ್ಟಿದ್ರೆ ಗಂಡ್ಸಾಗಿ ಬಾಳು ಹೋಗು.'

ಮುನಿಯ ಏಕೋ ಮತ್ತೆ ಬಾಯಿ ಬಿಚ್ಚಲಿಲ್ಲ. ಲಚ್ಚಿಯ ಮುಖ ನೋಡಲಿಲ್ಲ. ಮತ್ತೆ ದಾಪುಗಾಲು ಹಾಕುತ್ತಾ ನಡೆದುಬಿಟ್ಟ.

*** *** ***

ಮುನಿಯ ಹಾಸಿಗೆಯಲ್ಲಿ ಹೊರಳಾಡುತ್ತಿದ್ದ. ಅವನ ಇಡೀ ಜೀವಮಾನದಲ್ಲಿ ಎಂಟುವರ್ಷದ ಕಸುಬಿನ ಜೀವನದಲ್ಲಿ ಇಂದಿನ ಹಾಗೆ ಎಂದೂ ಆಗಿರಲಿಲ್ಲ. ಉಗಿತ

ಬೈಗಳು, ಹೊಡೆತ ಬೀಳಲಿಲ್ಲ ಎಂದಲ್ಲ! ಮೂದಲಿಕೆ-ಹಿಯಾಳಿಕೆ ಕೇಳಿಲ್ಲ ಎಂದಲ್ಲ! ಹಸಿವಿನಿಂದ ಒದ್ದಾಡಲಿಲ್ಲ ಎಂದಲ್ಲ!

ಮತ್ತೆ ಒಂದು ಮಾತು, ಒಂದೇ ಮಾತು ಅವನನ್ನು ಅಲುಗಾಡಿಸುತ್ತ.....ಚಾಲಾಡಿಸಿತ್ತು.......... ಕೊರೆದಿತ್ತು..........

ದುಡಿದು ಸಂಪಾದಿಸಿ ತಿನ್ನು!

ಹಿಂದೆಂದು ಆ ಯೋಚನೆ ಅವನ ತಲೆಯಲ್ಲಿ ಹೊಕ್ಕಿರಲೇ ಇಲ್ಲ. ಅವನಲ್ಲದಕ್ಕೆ ಎಡೆಯೂ ಇರಲಿಲ್ಲ. ಅವನಿಗೀ ಕಸುಬಿನಲ್ಲಿ ಹೊರೆಯುತ್ತಿದ್ದ ಸಂಪಾದನೆಯಲ್ಲಿ ಕಾಲು ಭಾಗ ಏಕೆ ಐದನೇ ಅಂಶದಷ್ಟೊ ಕೆಲಸಮಾಡಿ ಸಂಪಾದಿಸಲು ಸಾಧ್ಯವಿಲ್ಲ ಎಂಬುದು ಅವನಿಗೆ ಗೊತ್ತು. ಮೇಲಾಗಿ ಮೈಬಗ್ಗಿಸದೆ, ಬೆರಳ ತುದಿ ಮಣ್ಣಾಗದೆ ಸುಖವಾಗಿ ದೊರೆಯುವ ಇಂತಹ ಸಂಪಾದನೆ ಯಾರಿಗುಂಟು?

ಮಾನ-ಮರ್ಯಾದೆ; ನಾಚಿಕೆ-ಅಪಮಾನ; ಕೋಪ-ತಾಪ.....ಮುನಿಯನ ಬದುಕಿನಲ್ಲಿ ಅವಕ್ಕೆಲ್ಲ ಸ್ಥಳವೇ ಇರಲಿಲ್ಲ. ಅವನು ಬೆಳೆದ ವಾತಾವರಣ ಅವನಿಗೆ ದೊರೆತ ಶಿಕ್ಷಣ, ಪಾಲನೆ, ಪೋಷಣೆಯಲ್ಲಿ ಆ ಶಬ್ದಗಳಿಗೆ ಯಾವ ಮಹತ್ವವೂ ಇರಲಿಲ್ಲ.

ಅವನ ಜನ್ಮದಾತರ್ಯಾರು? ಬಂಧು ಬಳಗವುಂಟೆ? ಇದೊಂದೂ ಮುನಿಯನಿಗೆ ಗೊತ್ತಿಲ್ಲ. ಅವನೆಲ್ಲಿ ಹುಟ್ಟಿದ.....? ಎಲ್ಲಿ ಬೆಳೆದ.....? ಊಹೂ..... ಅದೂ ಗೊತ್ತಿಲ್ಲ.

ಅವನಿಗೆ ತಾನ್ಯಾರೆಂದು ಅರಿವು ಮೂಡುವಾಗ ಒಬ್ಬರ ಮನೆಯಲ್ಲಿ ಜೀತಕ್ಕಿದ್ದ. ಮನೆಯ ಯಜಮಾನನಿಗೆ ತಾನು ಯಾರಿಂದಲೋ 'ಹದಿನೈದು' ರೂಪಾಯಿಗಳಿಗೆ ಮಾರಲ್ಪಟ್ಟ 'ಸರಕು' ಎಂಬುದನ್ನು ಅವರಿವರ ಬಾಯಿಂದ ಅರಿತ. ಆ ಹದಿನೈದು ರೂಪಾಯಿಗಳ ನಷ್ಟ ತುಂಬಿಸಿಕೊಳ್ಳಲೋ ಏನೋ ಮನೆಯವರು ಆಡದ ಮಾತಿಲ್ಲ..... ಒದೆಯದ ದಿನವಿಲ್ಲ..... ಹೊಟ್ಟೆ ತುಂಬಾ ಅನ್ನ ಹಾಕಿದ ದಿನವಿಲ್ಲ.

ಮುನಿಯ ಎಲ್ಲವನ್ನು ಮೊದಲು ಮೊದಲು ನಿದಾನವಾಗಿ.....ಕ್ರಮೇಣ ಬಹುಬೇಗ ಅರಗಿಸಿಕೊಂಡ..........! ತನ್ನ ಬದುಕನ್ನು ಅರ್ಥಮಾಡಿಕೊಂಡ.....ಅರ್ಥ ಮಾಡಿಕೊಂಡಷ್ಟೇ ಶೀಘ್ರವಾಗಿ ತನ್ನಲ್ಲಿ ಮನೆಮಾಡಿದ್ದ ಮಾನ ಮರ್ಯಾದೆ; ನಾಚಿಕೆ-ಅವಮಾನ..... ಹೀಗೆ ಅನವಶ್ಯಕ ಗುಣಗಳನ್ನೆಲ್ಲಾ ಕಿತ್ತೊಗೆದ! ಅದರ ಸ್ಥಳದಲ್ಲಿ ಬೇರೊಂದು ಬದುಕನ್ನು ಬೇರು ಸಹಿತ ನಾಟಿದ.

ಹೊಟ್ಟೆ ತುಂಬಲಿಲ್ಲವೆಂದು ಇದ್ದ ಮನೆಯಲ್ಲೆ ಕದ್ದು ತಿಂದ.......... ಸುಳ್ಳು, ಮೋಸ, ವಂಚನೆ.......... ಏನೆಲ್ಲ ಸಾಧ್ಯವೋ ಎಲ್ಲ ಮಾಡಿಯೂ ಆ ಮನೆಯಲ್ಲೆ ಜೀವನ ನಿರ್ವಹಣೆಸಾಗದೆಂದು ಅರಿತಾಗ ಅಲ್ಲಿಂದ ಹೊರ ನಡೆದ ಮುನಿಯ.

ಬೆಂಗಳೂರಿನಂತಹ ಪಟ್ಟಣ ತನ್ನಂತಹ ಜೀವನಕ್ಕೆ ಮೀಸಲಾದ ಪಟ್ಟಣ ಎಂದರಿತ. ಭಿಕ್ಷಾಪಾತ್ರೆ ಮುನಿಯನ ಅನ್ನಪೂರ್ಣೆಯಾದಳು. ಕಳ್ಳತನ, ಸುಳ್ಳು, ವಂಚನೆ ಅವನ ಬದುಕಿನ ಹೆದ್ದಾರಿಯ ಬಾಗಿಲಾಯಿತು. ದಿನದಿನಕ್ಕೆ ಈ ಬಗೆಯ ಜೀವನದಿಂದ ಸಿಗುವ ಸೌಲಭ್ಯ ಅವನನ್ನು ಮತ್ತನನ್ನಾಗಿಸಿತು. ನಾನಾವೇಷ, ಆಟ, ಅಭಿನಯ ರಕ್ತಗತವಾಯಿತು. ನಾಲ್ಕೂ ಬಗೆಯಲ್ಲಿ ಚಮತ್ಕಾರ ಅವನ ಉಸಿರಿನಲ್ಲಿ ಬೆರೆತುಹೋಯಿತು.

ಇಷ್ಟಾದರೂ ಮುನಿಯನಿಂದ ಯಾವ ಬಗೆಯ ಹಿಂಸಾತ್ಮಕ ಚಟುವಟಿಕೆ, ಕನ್ನ-ಕೊರೆತ, ಲೂಟಿ ಮಾಡುವ ಕೆಲಸ ನಡೆಯುತ್ತಿರಲಿಲ್ಲ.

ಯಾವ ಏರು-ಪೇರೂ ಇಲ್ಲದೆ ಸಾಗುತ್ತಿದ್ದ ಮುನಿಯನ ಬಾಳು ಅಕಸ್ಮಾತ್ ಬೇರೊಂದು ಕಡೆ ವಾಲಿದರೆ.....? ಬೇರೊಂದು ದಿಕ್ಕಿಗೆ ಚಲಿಸಿದರೆ.....?

ಹೊರಳಾಡುತ್ತಲೇ ಇದ್ದ ಮುನಿಯ..... ಯೋಚಿಸುತ್ತಲೇ ಇದ್ದ.

'ದುಡಿದು ಸಂಪಾದಿಸಿ ತಿನ್ನು'

ಎಲ್ಲರ ತೀರ್ಮಾನವೂ ಅದೇ ಆಗಿತ್ತು.......... ಅವನ ತೀರ್ಮಾನವೂ ಅದೇ ಆದರೆ?

ತಕ್ಷಣ ಬೆಳಿಗ್ಗೆ ತನಗೊಂದು ಪೈಸೆ ಎಸೆದ ಸಾಹುಕಾರನ ಗರ್ವದ ಮುಖ! ದೋಸೆಯನ್ನು ತನ್ನತ್ತ ತಳ್ಳಿ ತಿನ್ನು ಎಂದು ಹೇಳಿದ ಹೆಂಗಸಿನ ಆತ್ಮಗೌರವ ತುಂಬಿ ತುಳುಕುತ್ತಿದ್ದ ಮುಖ! ಸಾಯಂಕಾಲ ಟ್ರಾನ್ಸಿಸ್ಟರ್ ಪಡೆದಾಗಿನ ಮಾಲೀಕನ ಗತ್ತಿನ ಮುಖ! ಎಲ್ಲವೂ ಮುನಿಯನನ್ನು ಅಣಕಿಸಿದಂತಾಯಿತು.

ಲಚ್ಚಿ- ಗಂಡ್ಸಾಗಿ ಹುಟ್ಟಿದ್ರೆ ಗಂಡ್ಸಾಗಿ ಬಾಳು ಎಂದಿದ್ದಳು. ಮುನಿಯ ತಂದು ಹಾಕಿದ್ದನ್ನು ತಿಂದು ಅವನಿಗೇ ಉಗಿದಿದ್ದಳು.

ಅವಳಿಗೀಗ ಇವನನ್ನು ಕಂಡರೆ ಅಷ್ಟಕಷ್ಟೆ. ನಾಗಿಯನ್ನು ಮನೆಯಲ್ಲಿ ತಂದಿಟ್ಟುಕೊಂಡು ಏಳೆಂಟು ವರ್ಷದ ತನ್ನ ಸಂಬಂಧವನ್ನು ಕಡೆಗಳಿಸಿದನಲ್ಲಾ ಎಂದು ಸಿಟ್ಟು ಬೆಂಕಿಯಾಗಿದ್ದಳು. ತನ್ನ ಸಂಪಾದನೆಯ ಮುಕ್ಕಾಲು ಭಾಗವೆಲ್ಲ ನಾಗಿಯ ಮಡಿಲಿಗೇ ಹೋಗುವುದಲ್ಲ ಎನ್ನುವ ಅಸೂಯೆ. ಆದರೂ ಬರುವ ಅಲ್ಪಸ್ವಲ್ಪ ಸಂಪಾದನೆ ಬಿಡುವ ಮೂರ್ಖಳಾಗಿರಲಿಲ್ಲವಾದರೂ ಬರಿಗೈಲಿ ಹೋದವನಿಗೆ ಉಪಚಾರಮಾಡಲು ಅವಳಿಗೇನು ಹುಚ್ಚೆ? ಆದರೆ.....?

ಮುನಿಯ ಯೋಚಿಸಿದ..... ಅಕಸ್ಮಾತ್ ತನ್ನ ಜೀವನದ ಗತಿ ಬದಲಿಸಿದರೆ.....? ತಾನು ಹೊಸ ಮನುಷ್ಯನಾದರೆ.....?

ಆದರೇನು..... ಆಗಲೇಬೇಕು.

ಮುನಿಯ ತೀರ್ಮಾನಿಸಿದ! ಮೇಲೆದ್ದು ಕುಳಿತ..... ತನ್ನನ್ನು ತಾನೇ ನೋಡಿಕೊಂಡ. ಕಟ್ಟುಮಸ್ತಾದ ತನ್ನ ಶರೀರ. ಅಪೇಕ್ಷಿಸಿದರೆ ಎರಡಾಳಿನ ಕೆಲಸವನ್ನೂ ಮಾಡಬಹುದು.

ಮತ್ತೇಕೆ ತಾನು ಹೆದರಬೇಕು.....? ನಿದಾನಿಸಬೇಕು.....?

ಮುನಿಯ ಚಟ್ಟನೆ ಮೇಲೆದ್ದು ಎದುರಿನ ಗೂಡಲ್ಲಿ ಇಟ್ಟಿದ್ದ ನಕಲಿ ಮೀಸೆ, ಟೋಪನ್, ವೇಷ ಭೂಷಣಗಳನ್ನೊಳಗೊಂಡ ಪೆಟ್ಟಿಗೆ ಎತ್ತಿ ತಂದ. ಸೀಮೇ ಎಣ್ಣೆ ಬಾಟಲ್ ತಂದು ಆ ಪೆಟ್ಟಿಗೆಯೊಳಗಿದ್ದುದನ್ನು ನೆಲದ ಮೇಲೆ ಗುಡ್ಡೆಯಾಗಿ ಸುರಿದು ಅದರ ಮೇಲೆ ಎಣ್ಣೆ ಸುರಿದು ಕಡ್ಡಿ ಗೀರಿದ.

ದೀಪವಾರಿಸಿ ಮತ್ತೆ ಹಾಸಿಗೆಯಲ್ಲಿ ಮೈಚಾಚಿದ. ನಾಗಿಯಿದ್ದಿದ್ದರೆ ಖಂಡಿತ ಈ ಕೆಲಸ ಮಾಡಗೊಡುತ್ತಿರಲಿಲ್ಲ. ಅವಳು ಮೂರು ದಿನದ ಮಟ್ಟಿಗೆ ಅಕ್ಕನ ಮನೆಗೆ ಹೋಗಿಬರುತ್ತೇನೆಂದು ಹೋದುದು ಒಳ್ಳೆಯದೇ ಆಯಿತು. ಎಂದು ಯೋಚಿಸಿದ. ಅವಳು ಬರುವುದರೊಳಗೆ ತಾನು ಹೊಸ ಮನುಷ್ಯನಾಗುವ ಬಗೆಯನ್ನು ಊಹಿಸುತ್ತಾ..... ಆ ಬಗೆಯ ಜೀವನದ ಕನಸು ಕಾಣುತ್ತಾ ನಿದ್ದೆ ಹೋದ ಮುನಿಯ. ಅವನ ಹಸಿವು ಮೈಕೈ ನೋವು ಎಲ್ಲಿ ಅಡಗಿ ಹೋಯಿತೋ.....?

* *   * *   * *

ಮರುದಿನ ಮುನಿಯನಿಗೆ ಎಚ್ಚರವಾದಾಗ ಸೂರ್ಯ ಮೇಲೇರಿದ್ದ. ಆಕಳಿಸುತ್ತಾ ಮೇಲೇಳಲು ನೋಡಿದರೆ ಮೈಯೆಲ್ಲ ಜಜ್ಜಿಹಾಕಿದ್ದ ಹಾಗೆ ನೋವು, ಅಂಗಾಂಗಗಳ ಕೀಲುಗಳೆಲ್ಲ ಹಿಡಿದಂತಾಗಿ ಬಿಟ್ಟಿತ್ತು. ಹಸಿವಿನ ಸಂಕಟ ಕರುಳನ್ನು ಕತ್ತರಿಸುತ್ತಿತ್ತು. ಏಳಲಾರದೆ ಎದ್ದು ನಡೆಯಲಾರದೆ ತೂರಾಡುತ್ತಲೇ ಬಾಗಿಲಿಗೆ ಬಂದ.

ಮುನಿಯನ ಮನೆಗೆ ಒಂದು ಫರ್ಲಾಂಗ್ ದೂರದಲ್ಲಿ ಒಂದು ದೇವಸ್ಥಾನವಿತ್ತು. ಅಲ್ಲೇನೋ ಗಡಿಬಿಡಿ ಗದ್ದಲ ನಡೆಯುತ್ತಿತ್ತು. ಹೆಂಗಸರು ಹೊಸ ಸೀರೆಯುಟ್ಟು ಬಾಗಿನದ ಮೊರ ಹಿಡಿದುಕೊಂಡು ಗುಂಪುಗುಂಪಾಗಿ ದೇವಸ್ಥಾನದೊಳಗೆ ಹೋಗಿ ಬರುತ್ತಿದ್ದರು.

ದೇವಸ್ಥಾನದ ಹತ್ತಿರ ಹೋಗಿ ನೋಡೋಣವೆಂದುಕೊಂಡ ಮುನಿಯ ಎರಡು ಹೆಜ್ಜೆ ಹಾಕಿದವನು ತಕ್ಷಣ ತನ್ನ ಮೈಮೇಲೆ ಹರಿದ ತುಂಡು ಲುಂಗಿಯೊಂದು ಇರುವುದೆಂಬ ಅರಿವಾಗಿ ಮತ್ತೆ ಮನೆಯೊಳಗೆ ಬಂದು ಪೆಟ್ಟಿಗೆಯೊಳಗೆ ಕೈಹಾಕಿದ.

ಅಲ್ಲೇನಿದೆ.....?

ತಕ್ಷಣ ಅವನಿಗೆ ರಾತ್ರಿಯ ನೆನಪು ಬಂದು ಅವನ ದೃಷ್ಟಿ ನೆಲದ ಮೇಲಿನ ಮಸಿಯ ಆವರಣದೊಳಗೆ ಕುಳಿತಿದ್ದ ಬೂದಿಯ ಮೇಲೆ ನೆಟ್ಟಿತು.

ಅವನ ಮನಸ್ಸಿಗೇಕೊ ಪಿಚ್ಚೆನಿಸಿತು ! ಆದರೂ ಈ ದಿನದಿಂದ ಹೊಸಬಾಳನ್ನು ಪ್ರಾರಂಭಿಸಬೇಕೆಂದು ರಾತ್ರಿಯ ತನ್ನ ನಿರ್ಧಾರವನ್ನು ಮನಸ್ಸಿಗೆ ತಂದುಕೊಂಡ ತನಗೆ ತಾನೇ ಹುರಿದುಂಬಿಸಿಕೊಂಡ ಮುನಿಯ. ಹಾಸಿಗೆಯಲ್ಲಿ ಬಿದ್ದಿದ್ದ ಕೊಳೆಯಾದ ಬೆಡ್‌ಷೀಟನ್ನು ಹೊದ್ದುಕೊಂಡು ದೇವಸ್ಥಾನದತ್ತ ನಡೆದ.

ದೇವಸ್ಥಾನದ ತುಂಬಾ ಹೆಂಗಸರು ತುಂಬಿದ್ದರು. ಮಕ್ಕಳು ಹೊಸ ಬಟ್ಟೆ ಹಾಕಿಕೊಂಡು ಸಂಭ್ರಮದಿಂದ ಒಳಗೂ ಹೊರಗೂ ಓಡಾಡುತ್ತಿದ್ದರು.

ಆಗವನಿಗೆ ತಕ್ಷಣ ಹೊಳೆಯಿತು......ಗೌರಿ-ಗಣೇಶರ ಹಬ್ಬ ! ದೇವಸ್ಥಾನದ ಎರಡೂ ಕಡೆಯೂ ನಾಲ್ಕಾರು ಜನ ಬಿಕ್ಷುಕರು ಸಾಲಿಗೆ ಕುಳಿತು ಬಂದು ಹೋಗುವವರಲ್ಲಿ ಕೈ ಒಡ್ಡುತ್ತಿದ್ದರು. ನೋಡಿದ ಮುನಿಯನಿಗೆ ತಾನಿನು ಅವರ ಗುಂಪಿನಲ್ಲೊಬ್ಬನಾಗಿ ಬೆರೆಯುವವನಲ್ಲವೆಂದು ಅನಿಸಿ ಮನಸ್ಸಿಗೆ ವಿಚಿತ್ರ ಅನುಭವವಾಯಿತು.

ಅದು ಸಂತೋಷವೋ-ಹೆಮ್ಮೆಯೋ-ಸಂಕಟವೋ ಒಂದೂ ಹೊಳೆಯಲಿಲ್ಲ ಮುನಿಯನಿಗೆ ! ಕಂಬಕ್ಕೊರಗಿ ಬೆಪ್ಪನಂತೆ ನಿಂತು ನೋಡುತ್ತಲೇ ಇದ್ದ ಮುನಿಯ.

ಪೂಜೆ ಮುಗಿಯಿತೇನೋ...... .... ಹೆಂಗಸರು ಒಬ್ಬೊಬ್ಬರಾಗಿ ಹೊರಬರಲು ಶುರುಮಾಡಿದರು. ಬಿಕ್ಷುಕರು ಧ್ವನಿಯೆತ್ತಿ ಕೂಗಿದಂತೆ ಪಟಪಟನೆ ಬಿದ್ದವು ಕಾಸುಗಳು.

ಮುನಿಯ ಕ್ಷಣದಲ್ಲಿ ಎಚ್ಚೆತ್ತುಕೊಂಡವನಂತೆ ತಲೆ ಕೊಡವಿಕೊಂಡ. ಅವನ ಮಿದುಳು ಚುರುಕಾಗಿ ಕೆಲಸಮಾಡಲಾರಂಬಿಸಿದಂತೇ ಅತ್ತ ಇತ್ತ ನೋಡಿ ಅಂಗೈಯನ್ನು ಮಣ್ಣಿಗೆ ಅದ್ದಿ ತಲೆಯನ್ನು ಉಜ್ಜಿ ಎಳೆದು ಕೂದಲನ್ನು ಹಣೆತುಂಬಾ ಇಳಿಬಿಟ್ಟ. ಉಟ್ಟಿದ್ದ ಪಂಚೆಯ ಕೊನೆಯಲ್ಲಿ ಉದ್ದಕ್ಕೆ ಹರಿದು ಕಣ್ಣಿನ ಮೇಲೊಂದು ಪಟ್ಟಿಕಟ್ಟಿ ರಸ್ತೆಯಲ್ಲಿ ಬೆಡ್‌ಷೀಟ್ ಹಾಸಿ ಹೊದೆನು ಉದ್ದುದ್ದ ಮಲಗಿದ. ರಾತ್ರಿ ಏಟು ಬಿದ್ದು ರಕ್ತ ಬಂದು ಊದಿಕೊಂಡಿದ್ದ ಕೈಚಾಚಿ ರಸ್ತೆಯಲ್ಲಿ ಮಲಗಿಸಿದ.

ಕಣ್ಣಿಲ್ಲದ ಕಪೋತಿ ಶಿವಾ......ತಂದೆತಾಯಿಗಳ ಕಣ್ಣಿಲ್ಲದ ಕಪೋತಿ ಶಿವಾ......ಆರ್ತನಾದ ಮಾಡಿ ಮಾಡಿದ......ನರಳಿಯೇ ನರಳಿದ.....ಹಸಿವೆ, ನೈನೊ ಅವನ ನರಳಿಕೆಗೆ ನೈಜರೂಪವನ್ನು ಇತ್ತಿತ್ತು,

ಅವನ ಮುಂದಿನ ನೆಲದ ಮೇಲೆ ಚಾಚಿದ ಮೇಲೆ ಕಾಸುಗಳ ಸುರಿಮಳೆಯಾದಂತೇ......ಮತ್ತೂ ಳಿದ! ಕೂಗಿದ ! ನರಳಿದ !! ಕೂಗಿದ !!

ಎರಡು ಪೈಸ ಹಾಕುವವರು ಐದು ಪೈಸೆ ಹಾ ತ್ತಿದ್ದರು........... ಐದು ಪೈಸೆ ಹಾಕುವವರು ಹತ್ತು ಹಾಕುತ್ತಿದ್ದರು.

ಸುಮಾರು ಒಂದು ಘಂಟೆ ಕಳೆದ ನಂತರ ಹೆಜ್ಜೆ ಸದ್ದು, ಕಾಸಿನ ಶಬ್ದ ಕರಗಿತೆನ್ನುವಾಗ ಮೇಲೆದ್ದು ವವನಂತೆ ನಟಿಸಿ ಕುಂಟುತ್ತಾ ಮನೆಸೇರಿದ. ಹಾಕಿ ವಸ್ತ್ರದಲ್ಲಿದ್ದ ಕಾಸನ್ನು ನೆಲದ ಮೇಲೆ

ಎಣಿಸಿದ...... ಎಣಿಸಿದ...... ನಂಬಿ ಮತ್ತೊಮ್ಮೆ...... ಮಗದೊಮ್ಮೆ... ಎಣಿಸಿ ಹನ್ನೆರಡು ರೂಪಾಯಿ ಹದಿನಾಲ್ಕು ಪೈಸಾ !

ಅಬ್ಬಾ......! ಬೆಳಿಗ್ಗೆ ಏಳುತ್ತಲೇ ಘಂಟೆಯ ಹನ್ನೆರಡು ರೂಪಾಯಿ ಸಂಪಾದನೆ !

ಉಲ್ಲಾಸದಿಂದ ಬೊಗಸೆಯಲ್ಲಿ ನಾಣ್ಯ ತುಂಬಿಕೊಂಡು ಮೇಲೆದ್ದ ಮುನಿಯ. ಬಿಕ್ಷೆ ಚಿಲ್ಲರೆಯನ್ನು ಹಾಕಲೆಂದೇ ಪ್ರತ್ಯೇಕವಾಗಿ ಇಟ್ಟ ಡಬ್ಬದಲ್ಲಿ ಸುರಿದ.

ಝಣ ಝಣ ಝಣ ! ಝಣ ಝಣ ಝ ಶಬ್ದ ಅವನನ್ನು ಹುಚ್ಚೆಬ್ಬಿಸಿತು ! ಮತ್ತೇರಿಸಿತ ಮತ್ತೇರಿಸಿತು ! ಕುಣಿದಾಡಿಸಿತು.

ಮೊಳೆಗೆ ತಗುಲಿಸಿದ್ದ ಶರಟನ್ನು ಹಾಕಿಕೊ ಜೇಬಿಗೆ 5-6 ರೂ. ಇಳಿಬಿಟ್ಟ ! ಬೆಳಗಿನ ಸಂಪಾ ನೆನೆಸಿಕೊಂಡಂತೆ ರಾತ್ರಿಯ ತನ್ನ 'ಮೂರ್ಖತೆಗಾ 'ಅವಿವೇಕ'ಕ್ಕಾಗಿ ಮುನಿಯನಿಗೆ ನಗುವೋ ನಗು.

ಮುಂದಿನ ಕಾರ್ಯಕ್ರಮಗಳ ಪಟ್ಟಿಯಾಗಲೇ ಅವನ ಲೆಯಲ್ಲಿ ಸಿದ್ಧವಾಗುತ್ತಿದ್ದ ಮೊದಲು ಹೊಟ್ಟೆತುಂಬಿಸಿ ತರದ ಬೇಡಿಕೆಯ ವಿವಿಧ ವಿನ್ಯಾಸ ... ಸಾಯಂಕಾಲ ಮಾರ್ಕೆಟ್. ಈ ದಿನ ಹಬ್ಬವಾದುದರಿಂದ ಮಾರ್ಕೆಟ್ಲ್ಲಿಯ ಅಸಾಧ್ಯ ನೂಕುನುಗ್ಗಲು, ಗಲಾಟೆ ನೆನೆಸಿಕೊಂಡಂತೆ ಅವನ ಮುಖ ಹಿಗ್ಗಿನಿಂದ ಅರಳಿತು.

ದಿನವೂ ಇಂತಹ ಸಂದರ್ಭ ಬಾರದೆಂದು ಅರಿತಿದ್ದ ಮುನಿಯನಿಗೆ ಒಂದೊಂದು ದಿನ ಮಾತ್ರ ಇಂತಹ ಸದವಕಾಶ. ಇಂದು ಮೊದಲನೇ ಉದ್ಯಮವೇ ಸುಗಮವಾಗಿ ನಡೆಯುವುದೆಂದು ತೃಪ್ತಿಕರವಾಗಿ ನಡೆದಿರುವುದರಿಂದ ದಿನದ ಪೂರ್ತಾ ಕೆಲಸವು ಸುಗಮವಾಗಿ ನಡೆಯುವುದೆಂದು ಅನಿಸಿ ಮುನಿಯ ಉಲ್ಲಾಸದಿಂದ ಸಿಳ್ಳೆ ಹಾಕುತ್ತ ನಡೆದಿದ್ದ.

ನೀವು ಕಂಡಿರೇ....

ಹುಡುಗ ತಪ್ಪಿಸಿಕೊಂಡಿದ್ದಾನೆ
ನೀವು ಕಂಡಿರೇ ನೀವು ಕಂಡಿರೇ......

ಜುಟ್ಟು ಬಿಟ್ಟಿದ್ದ, ಅವನಮ್ಮನೇ ತೇಪೆ ಹಾಕಿದ್ದ
ಚಡ್ಡಿ ಶರಟು ತೊಟ್ಟಿದ್ದ
ಕುಂದಿದ ಕಣ್ಣು ಸೋತ ನಡಿಗೆ
ಚಪ್ಪಲಿಯಿಲ್ಲದ ಕಾಲು– ಕುಂಟುತ್ತಿದ್ದ
ಹಣೆಯಲ್ಲಿ ಆಳಗಾಯ, ಮಾತಿನಲ್ಲೆಂದು
ಸೋಲದ ಚತುರ
ಹುಡುಗ ತಪ್ಪಿಸಿಕೊಂಡಿದ್ದಾನೆ
ನೀವು ಕಂಡಿರೇ ನೀವು ಕಂಡಿರೇ......

ಈಗ ಹುಡುಗ ಹಿಪ್ಪಿ ಕೂದಲು ಬಿಟ್ಟಿರಬಹುದು
ಲ್ ಬಾಟಮ್ಮು ಬಂದಿರಬಹುದು
ಗತ್ತನ್ನೆ ಸುಡಲು ಹೊರಟಿರುವ ಬೆಂಕಿ
ಗರೇಟು ತುದಿಯಲ್ಲಿ ಉರಿಯುತ್ತಿರಬಹುದು
ಣ್ಣಲ್ಲಿ ಕೆಂಪು, ನಡೆಯಲ್ಲಿ ಸಿಟ್ಟು
ಜ್ಜೆಯಲ್ಲಿ ಬಿಜ್ಜೆ ತೂಗುತ್ತಿರಬಹುದು
ಥ ಹುಡುಗ ತಪ್ಪಿಸಿಕೊಂಡಿದ್ದಾನೆ
ವು ಕಂಡಿರೇ ನೀವು ಕಂಡಿರೇ......

ಮುರುಕುಗೊರಬೆಯ ಅಡಿಗೆ ಸುರಿವ ಮಳೆಯಲ್ಲಿ
ಶಾಲೆ ಬಿಟ್ಟೋಡಿ ಬರುತ್ತಿದ್ದ ಚಂಡಾಪುಂಡಿಯಾಗಿ
ಮಿಣಮಿಣ ಉರಿವ. ಒಲೆಯೆದುರು
ಮುದುರಿ ಕೂರುತ್ತಿದ್ದ

ಸಿಕ್ಕಿದ, ತಣಿದ ಅರೆರೊಟ್ಟಿ ತಿಂದು ತೇಗುತ್ತಿದ್ದ
ಅಪ್ಪನ ದೊಗಳೆ ಅಂಗಿಯ ನುಗ್ಗಿ ಶಾಲೆ ಕಾಣುತ್ತಿದ್ದ
ಕಿಸೆಯಿಂದ ದುಡ್ಡು ಕದ್ದದ್ದಕ್ಕೆ ಪೆಟ್ಟು ತಿಂದ
ಕದ್ದು ಬೀಡಿ ಸೇದಿದ್ದಕ್ಕೆ ಬೈಗಳು ನುಂಗಿದ
ಫೇಲಾದ್ದಕ್ಕೆ ಛೀಮಾರಿ ಪಡೆದ
ಹುಡುಗ ತಪ್ಪಿಸಿಕೊಂಡಿದ್ದಾನೆ
ನೀವು ಕಂಡಿರೇ ನೀವು ಕಂಡಿರೇ......

ಹೊರಟದ್ದೇನೋ ಸರಿ. ನಡೆವ ತಾಖತ್ತಿದೆಯೇ ?
ಸಿನಿಮಾದಲ್ಲಿ ಕಂಡ ಸ್ವರ್ಗ ಸಿಕ್ಕುತ್ತದೆಯೇ
ಧಕ್ಕೆಂದೊಡೆದ ಚಂಡು ಗೋಲು ಆಗುತ್ತದೆಯೇ
ಸಿಕ್ಕದದನ್ನು ಫುಟ್‌ಪಾತ್‌ನಲ್ಲಿ ಮಾರ್ಕೆಟ್‌ನಲ್ಲೆ
ಪಡೆಯಹೊರಟಿದ್ದಾನೆ ಈ ದಂಗೆಕೋರ
ಹುಡುಗ ತಪ್ಪಿಸಿಕೊಂಡಿದ್ದಾನೆ–
ಕನಸು ಕಾಣುತಿರುವ ಹುಡುಗಿಯರೇ
ನೀವು ಕಂಡಿರೇ ನೀವು ಕಂಡಿರೇ......

ಸಿಗರೇಟಿನಂಗಡಿಯವರೇ ಬಾರುಗಳ ಮಾಲೀಕರೇ
ಉದ್ಯೋಗ ವಿನಿಮಯ ಕಛೇರಿಯವರೇ
ನೀವು ಕಂಡಿರೇ ನೀವು ಕಂಡಿರೇ
ವಾಹನಗಳ ಚಾಲಕರೇ ಆಸ್ಪತ್ರೆ ನೌಕರರೇ
ಸ್ಮಶಾನಗಳ ಪಾಲಕರೇ
ನೀವು ಕಂಡಿರೇ ನೀವು ಕಂಡಿರೇ.....

—ಸುಬ್ರಾಯಚೊಕ್ಕಾಡಿ.

ಪ್ರಾಮಾಣಿಕತೆಗೆ ಬಂದಿದೆ ಬರಗಾಲ

ನಮಗೆ ಸ್ವಾತಂತ್ರ್ಯ ಸಿಕ್ಕಿ ವರ್ಷಗಳು 27 ಸಂದವು, ಈ ಕಾಲಾವಧಿಯಲ್ಲಿ ಭಾರತದ ಸಾಧನೆ ಭೌತಿಕರಂಗದಲ್ಲಿ—ಬಹಳಷ್ಟು ಆಗಿದೆ ಎಂದು ನಾವು ಹೆಮ್ಮೆ ಪಟ್ಟುಕೊಳ್ಳಬಹುದು. ಇದರ ಪರಾಕಾಷ್ಠೆಯಾಗಿ ಇತ್ತೀಚೆಗೆ ನಾವು ಬಾಂಬನ್ನ ಸ್ಫೋಟ ಮಾಡಿದೆವು. ನಿಜ, ನಾವು ಅಣುಬಾಂಬು ಸ್ಫೋಟನ ಮಾಡುವಷ್ಟು ತಾಂತ್ರಿಕಜ್ಞಾನ ಪಡೆದಿದ್ದೇವೆ. ಆ ಬಗ್ಗೆ ಹೆಮ್ಮೆಪಡಬೇಕಾದದ್ದು ಸಾ ಮಾ ನ್ಯ .... ಆ ದ ರೆ ....

ಆಂದೋಳನಗಳಿಗೆ ಆಹ್ವಾನವಿದೆ

....ಸ್ವಾತಂತ್ರ್ಯ ಬಳಿಕದ ಈ ಕಾಲಾವಧಿಯಲ್ಲಿ ಒಂದು ದೃಷ್ಟಿಯಲ್ಲಿ ನಾವು ಹಿಂದಡಿ ಇಡುತ್ತಿದ್ದೇವೆ. ಹೇಳಿ ಕೇಳಿ ನಮ್ಮದು ಆಧ್ಯಾತ್ಮಿಕತೆಗೆ, ಧರ್ಮಕ್ಕೆ ಹೆಸರಾಂತ ನಾಡು. ಆದರೆ ಇಂದು ಸರ್ವತ್ರ ಮೋಸ-ಲಂಚರುಷುವತ್ತು ಕಳ್ಳಸಾಗಾಣಿಕೆ ಮತ್ತು ಆಡಂಬರದ, ಅಂಥ ದರ್ಬಾರಿನ ಜೀವನ-ಇವುಗಳ ಸರ್ವತ್ರತಾಂಡವಾಡುತ್ತಿವೆ ಹಿಂದೆಂದಿಗಿಂತಲೂ ಬೃಹತ್ ಪ್ರಮಾಣದಲ್ಲಿ ನಮ್ಮ ಸಾರ್ವಜನಿಕ ಜೀವನದಲ್ಲಿ ಹಾಸುಹೊಕ್ಕಾಗಿ ಬಿಟ್ಟಿದೆ. ಇದು ನಮ್ಮ ದೇಶದ ಆತ್ಮವನ್ನು ಹಿಂಡಿ ಹಿಪ್ಪೆಮಾಡುತ್ತಿದೆ. ಇದೀಗ ಜಯಪ್ರಕಾಶ್ ನಾರಾಯಣರಂತಹ ನಿವೃತ್ತ ರಾಜಕಾರಣಿಗಳಿಗೆ ಕುಳಿತು ಯೋಚಿಸುವ ಬದಲು ಸೊಂಟಕಟ್ಟಿ ಹೋರಾಡಲು ಪ್ರೇರಣೆ ನೀಡಿದೆ. ನಮ್ಮ ನಿವೃತ್ತ ರಾಷ್ಟ್ರಾಧ್ಯಕ್ಷರು ಸಮಾಜ ಶುದ್ಧೀಕರಣಕ್ಕೆ ಆಂದೋಲನ ಹೂಡಲು ಕರೆ ನೀಡಿದ್ದಾರೆ. ಅತ್ತ ಸರಕಾರಿ ಯಂತ್ರವು ಕಳ್ಳಸಾಗಾಣಿಕೆದಾರರ ವಿರುದ್ಧ, ತೆರಿಗೆಕಳ್ಳರ ವಿರುದ್ಧ, ಕಾಳಧನಸಂಗ್ರಹರ ವಿರುದ್ಧ ಕತ್ತಿ ಮಸೆಯುತ್ತಿದೆ. ಸಹಸ್ರ-ಸಹಸ್ರ ಕೋಟಿ ರೂಪಯಿಧನವನು ಅಕ್ರಮವಾಗಿ ಸಂಪಾದಿಸಿ-ಬಡಜನರ ಶೋಷಣೆ

— ಬಿ. ನರಸಿಂಗರಾವ್, ಕಾಸರುಗೋಡು.

ಮಾಡಿ—ಸುಖಲೋಲುಪತೆಯಲ್ಲಿ ಮೆರೆಯುವ ವರ್ಗ-ವೊಂದು ನಮ್ಮ ದೇಶದ ತುಂಬೆಲ್ಲ ವ್ಯಾಪಿಸಿ ಪರಿಸ್ಥಿತಿಯನ್ನು ಬಿಗಡಾಯಿಸಿದೆ. ಈ ಅಪ್ರಮಾಣಿಕರನ್ನು ಈಗ ವಿಳಂಬವಾಗಿಯಾದರೂ ಸರಕಾರ ದಂಡಿಸಲು ಮುಂದಾಗಿರುವುದು ಆಶಾಂಕುರವನ್ನು ಬೇರೂರಿಸಿದೆ. ಭಾರತದ ಅರ್ಥವ್ಯವಸ್ಥೆಯನ್ನು ಕೊರೆದು ತಿನ್ನುತ್ತಿರುವ ಹೆಗ್ಗಣಗಳನ್ನು ಸರಕಾರಿ ಯಂತ್ರವೇ ಹೀಗೆ ಬೆಳೆಯಲು, ಕೊಬ್ಬಲು ಬಿಟ್ಟಿತ್ತು. ಆಗ ಈ ಸರಕಾರ ತನ್ನ ಪ್ರಾಮಾಣಿಕತೆಯನ್ನು ಎಲ್ಲಿ ಒತ್ತೆ ಇಟ್ಟಿತ್ತು ? ಎಂಬ ಸಂಶಯ ಸರ್ವಸಾಮಾನ್ಯವಾಗಿ ಏಳುತ್ತದೆ. ಈಗ ಸರಕಾರಿ ಬೊಕ್ಕಸ ಬರಿದಾಗಿರುವುದರಿಂದ, ತನ್ನ ಯೋಜನೆಗಳಿಗೆ ಹಣ ಕೂಡಹಾಕಲು ಬೇರೆ ದಾರಿಗಾಣದ

> ನಮ್ಮ ದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ತಿನ್ನುವ ಆಹಾರ, ಉಡುವ ಬಟ್ಟೆ, ನಿಲ್ಲುವ ನೆಲ ಇವುಗಳಿಂದಾದಿಯಾಗಿ ಎಲ್ಲಕ್ಕೂ ಅಭಾವ ಇದೆ. ಸತ್ಯವಾದಿಗಳ ಈ ಸುಪದ್ಧರಿತ ರಾಷ್ಟ್ರದಲ್ಲಿ ಇಂದು " ಪ್ರಾಮಾಣಿಕತೆ " ಗೂ ಅಭಾವವುಂಟಾಗಿದೆ.–
> ಇದರ ಸ್ಪಷ್ಟ ಚಿತ್ರನೀಡಿದ್ದಾರೆ ಲೇಖಕರು.

ಸರಕಾರವು ಈ ಮಂದಿಯ ಅಕ್ರಮ ಸಂಪತ್ತಿಗೆ ಮುಟ್ಟುಗೋಲುಹಾಕುತ್ತಿದೆ ಎಂಬ ಸತ್ಯ ಎದುರಾಗುತ್ತದೆ. ಇದರಿಂದ ಸರಕಾರದ ಪ್ರಾಮಾಣಿಕತೆಯ ಬಗ್ಗೆ ಸಂಶಯತಾಳುವಂತಾಗುತ್ತದೆ ಕೂಡಾ.

ಕಾರಣಗಳು - ರಹಸ್ಯವೇನಲ್ಲ

ಇದಕ್ಕೆ ಕಾರಣ ಹುಡುಕಿ ದೂರ ಹೋಗಬೇಕಾಗಿಲ್ಲ. ನಮ್ಮ ಸರಕಾರಿ ಯಂತ್ರವು ನಿಜವಾಗಿಯೂ ಲಂಚ-ಭ್ರಷ್ಟಾಚಾರಗಳ ವಿಚಿತ್ರ ಜಗತ್ತಿನಲ್ಲಿ ಕುಸಿಯುತ್ತಾ ಸಾಗುತ್ತಿದೆ ಎಂದು ದಿನೇ--ದಿನೇ ಸಾರ್ವಜನಿಕರಿಗೆ ಅನುಭವದಿಂದ ವೇದ್ಯವಾಗುತ್ತಿರುವ ಅಂಶ. ಸರಕಾರೀ ನೌಕರರಿಂದ ದುಡಿಸಿಕೊಳ್ಳಬೇಕಿದ್ದರೆ ಕೈ ಬೆಚ್ಚಗಾಗಿಸಬೇಕು. ಇದೀಗ ಪ್ರಖ್ಯಾತವಾದ ಲೈಸೆನ್ಸ್ ಹಗರಣದಿಂದ ಲಕ್ಷಗಟ್ಟಲೆ ಸಂಪಾದಿಸಿದ ಜನಪ್ರತಿನಿಧಿಗಳೆನಿಸಿ ಎಷ್ಟುಮಂದಿ ಲಕ್ಷಗಟ್ಟಲೆ ಸಂಪಾದಿಸಿ, 'ತಾವೇನೂ ಅರಿಯದ ಮಂದಿ' ಎಂಬ ಸೋಗು ಹಾಕುತ್ತಿದ್ದಾರೆ. ತಮ್ಮ ಸಹವರ್ತಿಗಳ ಸಹಿಯನ್ನೇ ಫೋರ್ಜರಿ ಮಾಡಿದ ಜನಪ್ರತಿನಿಧಿಗಳ ಪ್ರಾಮಾಣಿಕತೆಗೆ ನಾವೇನೆನ್ನಬೇಕು ? ನಮ್ಮ ಜನರ ಅವಿದ್ಯೆ, ಭೋಳೆತನವನ್ನು ಬಂಡವಾಳವಾಗಿಸಿ, ಜನ ಒಮ್ಮೆ ಚುನಾಯಿತರಾದರೆ, ಕನಿಷ್ಟ ಐದು ವರ್ಷ ಅವರಿಗೂ ಅವರನ್ನಾಯ್ದ ಮತದಾರರಿಗೂ ಯಾವತ್ತೂ ಸಂಪರ್ಕವಿಲ್ಲಾ. ಐದು ವರ್ಷ ಪರ್ಯಂತ ಹಾಯಾಗಿದ್ದು, ಸಂಪಾದನೆ ಮಾಡಿ, ತನ್ನ ಹಾಗೂ ತನ್ನ ಕುಟುಂಬದ ಗರೀಬಿ ಹಟಾಯಿಸಿ, ಸಮಾಜವಾದ, ಅದು-ಇದು ಎಂಬಿತ್ಯಾದಿಯಾಗಿ ಏನೇನೋ ನಿರರ್ಥಕ-ಗೊಡ್ಡು ಮಾತುಗಳನ್ನು ಅಜೀರ್ಣವಾಗುವಷ್ಟು ಒದರುತ್ತಾರೆ. ಇದು ನಮ್ಮ 'ಪ್ರಜಾ-ಪ್ರಭೂತ' ಗಳ ಸಾಚಾ ಕಥೆ. ಈ 'ಭೂತ' ಗಳ ಆಡಳಿತದಲ್ಲಿ ಸರಕಾರಿ ಯಂತ್ರಗಳು ಹೇಗಿರಬೇಡ ? ನೀನು ಸವಾಸೇರು ಆಗುವಾಗ ನಾನೇಕೆ ಸೇರಾದರೂ ಆಗಬಾರದು ? ಎಂದು ಸರಕಾರೀ ನೌಕರರು ಪ್ರಶ್ನಿಸುತ್ತಾರೆ ಆ ಜನಪ್ರತಿನಿಧಿಗಳನ್ನು. ಹೀಗೆ ಸರಕಾರಿ ಕಾರಕೂನನಿಂದ ತೊಡಗಿ, ಮೇಲಾಧಿಕಾರಿಯವರೆಗೆ ಲಂಚಾವತಾರದ ತಾಂಡವ ನೃತ್ಯಕಾಣುವ ದೌರ್ಭಾಗ್ಯ ಬಡಬೋರೇಗೌಡನ ಪಾಲಿಗೆ !

ಕೈ-ಬಾಯಿಗಳೆರಡಕ್ಕೂ ಕೆಸರೇ ಗತಿ !

ನಮ್ಮ ಕಾರ್ಮಿಕ ರಂಗದಲ್ಲಿ ಈಗ ಪ್ರಾಮಾಣಿಕತೆ ಲವಲೇಶವೂ ಇಲ್ಲದೆ ಮಾಯವಾಗುತ್ತಿದೆ. ರಾಜಕಾರಣಿಗಳು ಇಲ್ಲಿಯೂ ಪ್ರವೇಶಮಾಡಿ ಹೊಲಸು ಚೆಲ್ಲಿದ್ದಾರೆ. 'ಕೈ ಕೆಸರಾದರೆ ಬಾಯಿಮೊಸರು' ಎಂಬಕಾಲ ಹೋಗಿ ಬಾಯಿಗೂ ಕೆಸರೇ ಗತಿಯಾಗುತ್ತಿದೆ. ಬೇಕು-ಬೇಡದ ಕ್ಕೆಲ್ಲ ತನ್ನ ನೇತಾನ ಕಣ್ಸನ್ನೆಗೆ ಲೇಖಣಿ ಸನ್ಯಾಸ, ಟೂಲ್ಸ್ ಡೌನ್, ವರ್ಕ್ ಟು ರೂಲ್, ಬಂದ್, ಘೇರಾವೋ ಮಾಡುವಷ್ಟು ಕುರಿಗಳಾಗಿದ್ದಾರೆ ನಮ್ಮ ದುಡಿಯುವ ಮಂದಿ. ಇದರ ಪರಿಣಾಮ ಅನುಭವಿಸಬೇಕಾಗುವುದು ಶ್ರೀಸಾಮಾನ್ಯನೇ. ಇತ್ತೀಚೆಗೆ ರೈಲು ಸಂಚಾರ ಸ್ಥಗಿತಗೊಂಡಿತು. ಕಾರಣ : ರೈಲುಕಾರ್ಮಿಕರ ಮುಷ್ಕರ. ಬೇಡಿಕೆಗಳೇನೆ ಇರಲಿ. ಆದರೆ ಇದರಿಂದ ಪಟ್ಟ ಕಷ್ಟ ಎಷ್ಟೊಂದು ಜನಸಾಮಾನ್ಯರಿಗೆ ಗೊತ್ತು. ಸ್ವಂತ ಕಾರು-ಬಸ್ಸುಗಳಿದ್ದರೆ ಶ್ರೀಮಂತವರ್ಗಕ್ಕಾಗಲಿ ಸರಕಾರೀ ನೌಕರರಿಗಾಗಲಿ ಇದರಿಂದ ಯಾವುದೇ ತೊಂದರೆ ಉಂಟಾಗಲಿಲ್ಲ. ಸರಕುಗಳ ಪೂರೈಕೆ ಸಮಯಾ-ಸಮಯಕ್ಕೆ ಸರಿಯಾಗಿ ಆಗದ ಕಾರಣ ಮಾರುಕಟ್ಟೆಗಳಲ್ಲಿ ಕೃತಕ ಬರಗಾಲ ಉಂಟಾಯಿತು. ಮಾರುಕಟ್ಟೆಯಲ್ಲಿ ಇದ್ದ-ಬದ್ದ ಸರಕನ್ನು ದುಬಾರಿ ಬೆಲೆಗೆ ಮಾರಿ, ಬಡವರ ಶೋಷಣೆಮಾಡಿ ಲಾಭ-ಬಡುಕ ವ್ಯಾಪಾರಿಗಳು ತಮ್ಮ-ತಮ್ಮ ಡೊಳ್ಳನ್ನು ಸವರಿದ್ದೆ ಸವರಿದ್ದು.

ತಿಂಗಳ ಮುಡಿದವನ ವಚನಗಳು

ಸುಳ್ಳು ಮೆರೆವುದು ಬೇಗ
ಸಾಯುವುದೂ ಬೇಗ
ಸತ್ಯ ತೋರುವುದು ತಡ
ಸಾಯುವುದೂ ತಡ
ಸತ್ಯದ ಪಕ್ಷ ಒಬ್ಬನದೇ ಆದರೂ
ಅದನೆಮ್ಮಿ ಬದುಕಿರೋ
ಸತ್ಯವಲ್ಲದುದನೊಲ್ಲ ನಮ್ಮ ತಿಂಗಳ ಮುಡಿದವನು !

ಬಿ. ಎ., ಎಂ. ಎ., ಪಿ.ಎಚ್.ಡಿ.,
ಇವು ಮಾನವರಿತ್ತ ಪದವಿ
ನೀ ನನಗಿತ್ತ ಪದವೀ
ಇವರಾರಿಗೂ ಅರಿದು ತಿಂಗಳ ಮುಡಿದವನೇ !

— ಗುಂಡ್ಮಿ, ಚಂದ್ರಶೇಖರ ಐತಾಳ.

ಯೋಗ್ಯ ಮಾರ್ಗದರ್ಶನವಿದೆಯೇ ?

ನಮ್ಮ ಕಾರ್ಮಿಕರ ಸಂಘಟನೆಗಳ ಒಂದು ದೊಡ್ಡ ಕೊರತೆಯೆಂದರೆ, ಕಾರ್ಮಿಕರ ಮುಂದಾಳು-ಗಳೆನಿಸಿದ ಮಂದಿ ತಮ್ಮ ರಾಜಕೀಯದ ಬೇಳೆ ಬೇಯಿಸಲು ಈ ಬಡಕಾರ್ಮಿಕರನ್ನು ದುರಪಯೋಗ ಮಾಡಿಕೊಳ್ಳುವುದು. ಪ್ರಾಮಾಣಿಕವಾಗಿ ದುಡಿಯಿರಿ ಎಂದು ಯಾವನಾದರು ಕಾರ್ಮಿಕ ಮುಂದಾಳು ತನ್ನ ಸಂಘಕ್ಕೆ ಕರೆ ನೀಡಿದ್ದು ಇವೆಯೇ ? ನಮ್ಮದು ಹೇಳಿ-ಕೇಳಿ ಬಡರಾಷ್ಟ್ರ — ಆರ್ಥಿಕವಾಗಿ ನಾವು ಉತ್ಪಾದನೆ ಹೆಚ್ಚಿಸಿದರೆ, ಪ್ರಾಮಾಣಿಕವಾಗಿ ದುಡಿದರೆ ಸಂಪತ್ತು ಅಧಿಕವಾಗಿ ಬೆಲೆಯೂ ಇಳಿದೀತು. ನಮ್ಮ ಗರೀಬಿಯೂ ಹಠಾಯಿಸಲ್ಪಟ್ಟೀತು — ಶಕ್ಕಮಟ್ಟಿಗಾದರೂ. ಮಾತು-ಮಾತಿಗೆ ವರ್ಗದ್ವೇಷದ ಹೆಸರಲ್ಲಿ ಕೆಲಸ ಮೊಟಕು ಗೊಳಿಸುತ್ತಾರೆ. ಸಂಬಳ ಹೆಚ್ಚು ಕೇಳಿದರೆ ಆಗುವ ಪರಿಣಾಮ ಘೋರ. ನಮ್ಮ ಸರಕಾರದ ಬರಿದಾದ ಬೊಕ್ಕಸದಲ್ಲಿ ಇರುವುದಾದರು ಏನು ? ದುಭಾರಿ ಬೆಲೆಯ ವಸ್ತುಗಳನ್ನು ವಿಕ್ರಯಿಸಲು ಜನರ ಕೈಗೆ ಅರ್ಥ ಹಣವನು ಸರಕಾರ ಹೆಚ್ಚಿಸಿ ಪೂರೈಸುತ್ತದೆ. ಇದೇ Deficit-finance ಅನ್ನುತ್ತದೆ. ನಾವೇ ಸರಕಾರಕ್ಕೆ ಈ ದುಡುಕಿನ ನೀತಿಗೆ ಆಸ್ಪದ ನೀಡಿ, ಬಳಿಕ ಸರಕಾರದ ಅರ್ಥನೀತಿಯನ್ನು ಅಳಿಯುವುದರಲ್ಲಿ ಅರ್ಥವಿಲ್ಲ.

ದುಡಿಮೆಯೇ ದೇವರು

ಈಗ ನಮಗೆ ಬೇಕಾಗಿರುವುದು ಪ್ರಾಮಾಣಿಕ ದುಡಿಮೆ. ಜಪಾನಿನ ಕಣ್ಣು ಕೋರೈಸುವ ಸಾಧನೆಗೆ ಕಾರಣ ಇಲ್ಲೇ ಇದೆ. ಇಂದು ವಿಶ್ವದಲ್ಲಿ ಜಪಾನಿಗೆ ಸರಿದೂಗುವ ಔದ್ಯೋಗಿಕ ರಾಷ್ಟ್ರವಿಲ್ಲ. ಜಪಾನಿನ ಉದ್ಯಮಕ್ಕೆ ಬೇಕಾದ ಕಚ್ಚಾವಸ್ತುಗಳು ಆ ಪುಟ್ಟ ರಾಷ್ಟ್ರದಲ್ಲಿಲ್ಲ. ಎಲ್ಲವನ್ನೂ ಅವರು ಆಮದು ಮಾಡಿಕೊಂಡೇ ಸಿದ್ಧಪಡಿಸುತ್ತಾರೆ. ಆದರೆ ಅವರಲ್ಲಿ ಒಂದೇ ಒಂದು ಉತ್ತಮ ಕಚ್ಚಾವಸ್ತು ಇದೆ. ಅದೆಂದರೆ ಮೈಮುರಿದು ದುಡಿಯುವ ಪ್ರಾಮಾಣಿಕ ಜನತೆ. ಇದೆಲ್ಲದರ ಒಟ್ಟು ಪರಿಣಾಮವೆಂದರೆ ಗತ ಮಹಾಯುದ್ಧದಲ್ಲಿ ಮಣ್ಣುಗೂಡಿದ ಒಂದು ರಾಷ್ಟ್ರ ಇಂದು ಮೈಸೆಟೆದು ನಿಂತಿರುವುದು. ಆ 'ಉದಯರವಿ' ಯ ನಾಡಿನಲ್ಲಿ ಸರ್ವತ್ರ ಸಮೃದ್ಧ-ಸಂಪತ್ತಿನ ಸೂರ್ಯೋದಯವಾಗಿದೆ. ನಮ್ಮ ಕಾರ್ಮಿಕ ಮುಂದಾಳುಗಳನ್ನು ಜಪಾನಿಗೆ ಕಳಿಸಿ, ಅಲ್ಲಿನ ಕಾರ್ಮಿಕ ಆಂದೋಲನದ ವೈಶಿಷ್ಟ್ಯತೆಯನ್ನು ಪ್ರತ್ಯಕ್ಷ ಅರಿತುಕೊಳ್ಳಲು ಆಸ್ಪದ ನೀಡಬೇಕು. ಆ ದಿಶೆಯಲ್ಲಿ ಸಾಗಿದರೆ ಮಾತ್ರ ನಾವು 'ವರ್ಗದ್ವೇಷ' ದ ಗೊಡ್ಡು ವಿಚಾರಕ್ಕೆ, ತಿಲಾಂಜಲಿ ನೀಡುವಂತಾದೀತು. ಉತ್ಪಾದನೆ ಹೆಚ್ಚಾಗದ ಹೊರತು ಬೇಡಿಕೆಗಳನ್ನು ಪೂರೈಸುವುದಾದರೂ ಹೇಗೆ. ? ರಾಷ್ಟ್ರದ ಅಭ್ಯುದಯ, ಜನತೆಯ ಉದ್ಧಾರದ ಸೂತ್ರ ಇಲ್ಲೇ ಇದೆ.

ಜನತೆಯ ನೋವು

ಜನಾರ್ದನನ ನಲಿವು-ಆಗಲಾರದು

ನಮ್ಮ ವ್ಯಾಪಾರ-ಉದ್ಯಮ ರಂಗವೂ ಸಾಕಷ್ಟು ಅಪ್ರಮಾಣಿಕತೆಗೆ ಬಲಿಯಾಗಿದೆ. ಕಾಳಸಂತೆ, ಅಕ್ರಮ ದಾಸ್ತಾನು, ಇತ್ಯಾದಿಗಳಿಂದೆಲ್ಲ ಅಮಿತಲಾಭ ಪಡೆದು, ತೆರಿಗೆಯನ್ನು ವಂಚಿಸಿ - ಸರಕಾರಕ್ಕೆ ದ್ರೋಹಮಾಡುವ ವ್ಯಾಪಾರಿ ವರ್ಗ ಬೆಳೆದು ಬಂದಿದೆ. ಕೋಟಿಗಟ್ಟಲೆ ಸಂಪಾದಿಸಿ, ಅದರಲ್ಲಿ ಒಂದಿಷ್ಟು ದಾನ-ಧರ್ಮ ಮಾಡಿ ದೇವರು-ದಿಂಡರ ಹೆಸರಲ್ಲಿ ವಿನಿಯೋಗಿಸಿ ತಾವು ಪುಣ್ಯಗಿಟ್ಟಿಸುತ್ತೇವೆಂದು ಈ ವರ್ತಕರ ವರ್ಗ ತಪ್ಪು ತಿಳಿದಿದ್ದರೆ ಅವರಷ್ಟು ಮೂರ್ಖರು ಇನ್ನಾರು ಇಲ್ಲ. ಜನತೆ ಜನಾರ್ಧನನ ಶೋಷಣೆಯಿಂದಾದ ಸಂಪತ್ತು ಯಾವ ದೇವನ ವಿನಿಯೋಗಕ್ಕೂ ಅರ್ಹವಲ್ಲ. ಸಮಾಜದಿಂದ ಪ್ರಾಮಾಣಿಕವಾಗಿ ಗಳಿಸಿದ್ದನ್ನು, ಅಲ್ಪಪ್ರಮಾಣದಲ್ಲಾದರೂ ಸಮಾಜಕ್ಕೆ ಹಿಂದಿರುಗಿಸುವುದರಲ್ಲಿ ಪುಣ್ಯವೆ ಹೊರತು ಕೋಟಿಗಟ್ಟಲೇ ಸಂಪಾದಿಸಿ, ಕಾಶಿ-ರಾಮೇಶ್ವರದ ಹುಂಡಿಯಲ್ಲಿ ನೂರಿನ್ನೂರು ನಿಕ್ಷೇಪಿಸುವುದರಿಂದಲ್ಲ. ಪ್ರಾಮಾಣಿಕವಾಗಿ ವ್ಯಾಪಾರ-ಉದ್ಯಮ ನಡೆಸಿ ತಾನೇ ತಾನಾಗಿದ್ದರೂ ಅದರಷ್ಟು ದೊಡ್ಡ ಸಮಾಜ ಸೇವೆ ಇನ್ನೊಂದಿಲ್ಲ. ಕಲಬೆರಕೆಯಿಂದ ಜನರ - ಬಡವರ ಆರೋಗ್ಯವನ್ನು ಕೆಡಿಸಿ, ತಾನು ಶ್ರೀಮಂತನಾಗಿ ತನ್ನ ಕುಟುಂಬದವರ ಸುಖದಲ್ಲಿ ಸರ್ವಸುಖ ಅಡಗಿದೆ ಎನ್ನುವುದರಿಂದ ದೇಶೋದ್ಧಾರವಾಗದು. ಯಾವ ದೇವನು ಇದನ್ನು ಮೆಚ್ಚಬಲ್ಲ ? ನಮ್ಮ ನವಶ್ರೀಮಂತ ವರ್ಗ ಆಳವಾಗಿ ಯೋಚಿಸಬೇಕಾದ ಪ್ರಶ್ನೆ ಇದು. ಸಮಾಜ ಜೀವನದ ಪ್ರಾಮಾಣಿಕ ಸೇವೆಯು ಭಗವಂತನ ಸೇವೆಯೆಂದು ಪರಿಗಣಿಸದ ಹೊರತು ನಮ್ಮ 'ಧರ್ಮ' ಕ್ಕೆ ಅರ್ಥವಿಲ್ಲ. ಕಳ್ಳಸಾಗಾಣಿಕೆಯಿಂದ, ಕಾಳಸಂತೆಯಿಂದ ಸಂಪಾದಿಸಿ, ದೇಗುಲ ಛತ್ರಗಳನ್ನು ಕಟ್ಟಿಸಿ ಕೀರ್ತಿ ಭಾಜನನಾಗುವಷ್ಟು 'ಮೂರುಕಾಸಿನ ಕೆಲಸ' ಇನ್ನೊಂದಿಲ್ಲ. ಏಕೆಂದರೆ ಹೀಗೆ ಮಾಡುವುದರಿಂದ, ದೇವರನ್ನು ತಮ್ಮ ಕುಕೃತ್ಯದಲ್ಲಿ ಭಾಗಿಯಾಗಿಸಲು ಈ ಮಂದಿ ಇಚ್ಛಿಸಹುತ್ತಾರೆ ಎಂಬ ಕಲ್ಪನೆ ಮೂಡುತ್ತದೆ, ಇವರನ್ನೂ ಯಾವ ದೇವನೂ ಕ್ಷಮಿಸಲಾರ !

ಗಾಂಧೀಜಿಯವರ ಶಿಷ್ಯರಾಗಿ ಪಟ್ಟಭದ್ರರಾದಮಂದಿ ಈಗ ಎಷ್ಟು ಕೆಳಗೆ ಕುಸಿದುಬಿದ್ದಿದ್ದಾರೆಂದು ತಿಳಿಯಲು ರಾಜ ಕಾರಣದ ಆಗು-ಹೋಗುಗಳನ್ನು ದಿನೇ-ದಿನೇ ವೃತ್ತಪತ್ರಿಕೆಗಳಲ್ಲಿ ಓದಿದಾಗ ಅರ್ಥವಾಗದಿರದು. ರಾಜಕೀಯ ರಂಗದಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ದಿನ ಹೋದಂತೆ ಮಿತಿಮೀರುತ್ತಿದೆ. ಸಮಾಜದಲ್ಲಿ ಆದರ್ಶ ವಾತ್ಸಲ್ಯಗಳಿಗೆ ಸ್ಥಾನವೇ ಇಲ್ಲದಂತಾಗಿದೆ.

ತಿಂಗಳ ಮುಡಿದವನ ವಚನಗಳು

ಹೆಸರಿನಲ್ಲೇನು ?
ಉಸಿರಿನಲ್ಲೂ
ನನ್ನ ನಿನ್ನಂತೆ ಮಾಡಯ್ಯ
ತಿಂಗಳ ಮುಡಿದವನೇ ?

ಪರದೇಶೀ ಬುದ್ಧಿಯ ಲದ್ದಿ ಬೇಡ
ಸ್ವದೇಶಿ ಬುದ್ಧಿಯ ರಾಗಿಮುದ್ದೆ ಸಾಕು
ತಿಂಗಳ ಮುಡಿದವನೇ !

— ಗುಂಡ್ಮಿ, ಚಂದ್ರಶೇಖರ ಐತಾಳ.

ಇತರರಿಗೆ ಒಳಿತಾದರೆ ತನಗೂ ಒಳಿತಾಯಿತೆಂದು ತಿಳಿಯುವ ಗಾಂಧೀವಾದಿಗಳೆಲ್ಲಿ ? ತನಗೆ ಒಳಿತಾದರೆ ಇತರರಿಗೂ ಒಳಿತಾದಂತೆಯೇ ಎಂಬ ಭ್ರಮಾಲೋಕದಲ್ಲಿರುವ ಈ ವಾದಿಗಳೆಲ್ಲಿ ?

ಹೇ ವಾಣಿ ! ಗೀರ್ವಾಣಿ !

— ಮಲ್ಲಿಕಾ ವಿರಚಿತ
(ಶ್ರೀಮತಿ ಲಕ್ಷ್ಮೀದೇವಿ ಕಡಿದಾಳಮಂಜಪ್ಪ.)

ಹೇ ವಾಣಿ ! ಗೀರ್ವಾಣಿ ! ಅವತರಿಸು ನೀನಿಲ್ಲಿ
ನನ್ನ ಸುಪ್ತ ಚೇತನವನ್ನೆಚ್ಚರಿಸು ಕರುಣದಲಿ
ನೀನೆ ಕಿಡಿಯಾಗಿ ಕುಡಿಯಾಗಿ ಉದ್ದೀಪಿಸಿ
ಹೃದಯ ದೀಪ್ತಿಯಿಂ ಮಮಮನ ಕಲ್ಪವನರಳಿಸು.

ನೀನೆ ಚಿರ ಸುಖಾಶ್ರಯ ಸೃಷ್ಟಿಸ್ಥಿತಿ ಲಯಗಳಿಗೆ
ನೀನೆ ಚಿಚ್ಛಕ್ತಿ ವಿಶ್ವಕೆ ನೀನುಸಿರ್ ಹವೆಗೆ
ಮೇಣ್ ಶಾಂತಿ-ಸತ್ಯ-ಧರ್ಮ ಜಗ ಭಾವೋನ್ನತಿಗೆ
ನಿನ್ನುಳಿದ ಬದುಕು ವ್ಯರ್ಥವು ನೀನೆ ಎನ್ನೆದೆಗೆ.

ಚಿರಂತನ ಬೆಳಕು ನೀ ಮಾಯೆ-ಮೋಹ-ಶಕ್ತಿಯು
ಮೇಣ್ ಪರಮಾರ್ಥ ಪ್ರೇಮದಲಿ ಭಕ್ತಿ-ಮುಕ್ತಿಯು
ಹೇ ಜನನೀ ! ತ್ರೈಭುವನ ತಮೋಹಾರಿಣಿ ! ಚಿನ್ಮಯಿ
ನೀನಲ್ಲದಿನ್ನಾರು ತೊಳೆಯ ಬಲ್ಲರು ತಾಯಿ ?

ಈ ಮಾನವನಾವರಿಸಿದ ಘನ ಘೋರ ಕತ್ತಲೆಯ
ಮನ್ನಿಸಿ ಮಮ ಜೀವನವನುದ್ಧರಿಸು ಅಜಜಾಯೆ !

(ಒಂದು ವಿಮರ್ಶೆ)

ವೈಜ್ಞಾನಿಕ ದೃಷ್ಟಿಯಲ್ಲಿ ತತ್ವಶಾಸ್ತ್ರದ ನಿಲವು

— ಎನ್. ಕೆ. ನರಸಿಂಹಮೂರ್ತಿ

> "ವಿಜ್ಞಾನದ ವ್ಯಾಪ್ತಿ - ಎಲ್ಲಿ ಮುಗಿಯುವುದೋ ಅಲ್ಲಿಂದ ತತ್ವಶಾಸ್ತ್ರ ಆರಂಭವಾಗುವುದು" ಎಂಬ ಕೂಗು ಮಹಾಪೊಳ್ಳು ಎನ್ನುತ್ತಾರೆ ಲೇಖಕರು, ವಿಜ್ಞಾನದ ಕೊನೆಯ ಹಂತ ಮಾನವನಿಗೆ ಸಿಗುವ ಸಂಭವವೇ ಇಲ್ಲ ಎಂಬುದು ಲೇಖಕರವಾದ.

ಸುಮಾರು ನಾಲ್ಕು ಸಾವಿರ ವರ್ಷಗಳಿಗೆ ಹಿಂದೆಯೇ ಪ್ರಾಚೀನ ಭಾರತ, ಇರಾನ್, ಇರಾಕ್, ಸಿರಿಯಾ ಮೊದಲಾದ ದೇಶದ ಜನರಲ್ಲಿ ನಿಕಟ ಸಂಪರ್ಕವಿದ್ದಿತು. ವ್ಯಾಪಾರಕ್ಕಾಗಿ ಸಂಚರಿಸುತ್ತಿದ್ದವರು ಪರಸ್ಪರ ವಿಚಾರವಿನಿಮಯ ಮಾಡಿಕೊಂಡು ತಮಗೆ ಉತ್ತಮವೆನಿಸಿದ ಜ್ಞಾನವಿಭಾಗಗಳನ್ನು ಆರಿಸಿ ತಮ್ಮದಾಗಿ ಮಾಡಿಕೊಳ್ಳುತಿದ್ದರು. ಗರ್ಗಸಂಹಿತೆಯರ

ಮ್ಲೇಚ್ಛಾಹಿಯವನಾಸ್ತೇಷು ಸಮ್ಯಕ್
ಶಾಸ್ತ್ರಮಿದಂ ಸ್ಥಿತಂ ।
ಋಷಿವತ್ತೇಪಿ ಪೂಜ್ಯಂತೇ ಕಿಂ ಪುನರ್ದೈವವಿತ್
ದ್ವಿಜಃ ॥

ಎಂಬ ಶ್ಲೋಕದಿಂದ ಭಾರತೀಯರು ಪ್ರಾಚೀನ ಯವನರ (ಗ್ರೀಕರ) ಜ್ಯೋತಿಷ್ಯ ವಿಜ್ಞಾನವನ್ನು ಮೆಚ್ಚಿಕೊಂಡಿದುದು ತಿಳಿದುಬರುತ್ತದೆ. ಒಂದು ವರ್ಷದಲ್ಲಿ ಸುಮಾರು 365¼ ಸೌರದಿನಗಳಿರುವುದೆಂದು ನಮಗೆ ತಿಳಿದುಬಂದುದು ಗ್ರೀಕರಿಂದಲೇ. ಕೇಂದ್ರ, ಕೇತುದ್ರುವ ಜಿತುಮ ಮೊದಲಾದುವು ಗ್ರೀಕ್ ಭಾಷೆಯ ಪದಗಳೇ. ಜ್ಞಾನ ಯಾವ ಒಬ್ಬ ವ್ಯಕ್ತಿಯ ಅಥವಾ ಜನಾಂಗದ ಸ್ವತ್ತಲ್ಲವೆಂಬುದು ಯುಕ್ತಿಸಂಮತ.

ಭೂ ಕೇಂದ್ರ ವಾದ ಕುಸಿಯಿತು

ವೈಜ್ಞಾನಿಕ ಪ್ರಗತಿಯಲ್ಲಿ ಒಂದೆರಡು ಪ್ರಭಾವಶಾಲಿ ಮೈಲುಗಲ್ಲುಗಳನ್ನು ಗುರುತಿಸಬಹುದು. ನಾವು ವಾಸಮಾಡುವ ಭೂಮಿ ಸ್ಥಿರವಾಗಿದೆ ಎಂ ಭಾವಿಸಿದ ಭಾರತೀಯರು ಇದಕ್ಕೆ 'ಅಚಲಾ' ಎಂ ಹೆಸರನ್ನಿಟ್ಟರು. ಪ್ರಾಚೀನ ಪಾಶ್ಚಾತ್ಯರೂ ಇ ಭಾವನೆಯನ್ನು ತಳೆದಿದ್ದರು. "ಮಾನವನ ಹಿತಕ ಗಿಯೇ ಸೂರ್ಯ ಚಂದ್ರರು ಸ್ಥಿರವಾಗಿರುವುದ ಭೂಮಿಯ ಸುತ್ತ ಸುತ್ತುವರು. ಅವರ ಜೊತೆ ಬುಧ, ಶುಕ್ರ, ಅಂಗಾರಕ, ಗುರು, ಶನಿಗಳ ಗ್ರಹಗಳೂ ನಿರಂತರವಾಗಿ ಸುತ್ತುತ್ತಿರುವುವು." ಎಂ ಗ್ರೀಕ್ ತತ್ತ್ವಜ್ಞ ಅರಿಸ್ಟಾಟಲ್ ಕ್ರಿ. ಪೂ. ಶತಮ ನದಲ್ಲಿ ಸಾರಿಹೇಳಿದುದನ್ನೆ ಎಲ್ಲರೂ ನಂಬಿದ್ದ ಇದು "ಭೂಕೇಂದ್ರವಾದ"

ಕ್ರಿ. ಶ. ಹದಿನೈದನೆಯ ಶತಮಾನದವರೆ ಪ್ರಾಯಶಃ ಎಲ್ಲರೂ ಇದನ್ನೆ ಒಪ್ಪಿದ್ದರು. ತ ವಿವಿಧ ಸಮೀಕ್ಷಣೆ, ವಿಮರ್ಶೆಗಳ ಆಧಾರದ ಮೇ ಕೋಪರ್ನಿಕಸ್ ಎಂಬ ಪಾದ್ರಿ 'ಭೂಮಿಯು ಸ್ಥಿರವಲ್ಲ ಸೂರ್ಯನೇ ಸ್ಥಿರ. ಅವನು ಸುತ್ತ ದೂರಾನುಕ್ರಮ ಬುಧ, ಶುಕ್ರ, ಭೂಮಿ, ಅಂಗಾರಕ, ಗುರು, ಶ ಎಂಬ ಗ್ರಹಗಳು ಸುತ್ತುವುವು" ಎಂದು ಸಾಧಿಸಿದಾಗ ಮಾನವನ ವಿಚಾರ ಸರಣಿಗೆ ಹೊಸ ಪ್ರಚೋದನೆ ಹುಟ್ಟಿತು. ಮುಂದೆ ಗೆಲಿಲಿಯೋ, ಕೆಪ್ಲರ್, ನ್ಯೂಟನ್, ಲಾಪ್ಲಾಸ್ ಮೊದಲಾದ ಮೇಧಾವಿಗಳ ಪರಿಶ್ರಮದಿಂದ 'ಭೂಕೇಂದ್ರ ವಾದ' ಕುಸಿದು ಬಿದ್ದು ಸೂರ್ಯಕೇಂದ್ರವಾದವೇ ಸರ್ವಮಾನ್ಯವಾಯಿತು.

ಕೊಲಂಬಸ್, ಮ್ಯಾಗಿಲಾನ್, ಡ್ರೆಕ್ ಮುಂತಾದವರ ಸಾಹಸ ಪೂರ್ಣ ಪ್ರಯಾಣಗಳಿಂದ 'ನಮ ಭೂಮಿ ಗುಂಡಾಗಿ ಇದೆ' ಎಂಬ ಅಂಶ ದೃಢಪಟ್ಟಿತು. ಭೂಮಿ ಚಪ್ಪಟೆಯಾಗಿದೆ ಎನ್ನುತ್ತಿದ್ದವರ ಮಾತಿನ ಆಧಾರ ಕಳಚಿ ಬಿದ್ದಿತು. ದಕ್ಷಿಣ ದ್ರುವದತ್ತ ಸಾಗಿ, ಹೋಗಿ ಬಂದವರು ತಮ್ಮ ಅನುಭವದಿಂದ 'ಎಲ್ಲೆಡೆಯಲ್ಲಿಯೂ 12 ಘಂಟೆಯ ಹಗಲು ಕಳೆದು ಮುಂದೆ 12 ಘಂಟೆಯ ರಾತ್ರಿ ಯಾವಾಗಲೂ ಆಗುತ್ತಿರುವುದಿಲ್ಲ. ಕೆಲವೆಡೆ ಮೂರು ನಾಲ್ಕು ತಿಂಗಳವರೆಗೆ ಅಖಂಡ ರಾತ್ರಿ, ಅಥವಾ ಅಖಂಡ ಹಗಲು ಇರುವುದು. ಎಂದು ಮನಗಂಡು ಅದನ್ನು ಇತರರಿಗೂ ತಿಳಿಸಿದರು. ಈ ಸಂಶೋಧನೆಗಳಿಂದ ನಮ್ಮ ಪುರಾಣಗಳಲ್ಲಿ ಕಂಡುಬರುವ ಹಲವಾರು ಸಂಗತಿಗಳು, ಅರ್ಥವಾದಗಳು, ಕಟ್ಟು ಕಥೆಗಳು, ಉತ್ಪ್ರೇಕ್ಷೆಗಳು ಹಾಗೂ ಸತ್ಯದಿಂದ ದೂರವಾದವು, ಎಂದು ಜನರು ತಿಳಿಯುವಂತಾಯಿತು.

ಹದಿನೆಂಟನೇ ಶತಮಾನದಲ್ಲಿ ಶನಿಗ್ರಹದಿಂದ ಆಚೆಗೆ ಇರುವ ಯುರೇನಸ್ ಗ್ರಹವನ್ನೇ ಹರ್ಷೆಲ್ ಕಂಡುಹಿಡಿದನು. ಶನಿಯೇ ಅತ್ಯಂತ ದೂರದಲ್ಲಿನ ಗ್ರಹ ಎಂಬ ನಂಬಿಕೆ ಸುತ್ತಿಗೆ ಪೆಟ್ಟಾಯಿತು. ಕಳೆದ ಶತಮಾನದ ಆದಿಭಾಗದಲ್ಲಿ ಕೇವಲ ಗಣಿತದಿಂದಲೇ ನೆಪ್ಚೂನ್ ಗ್ರಹದ ಅಸ್ತಿತ್ವವನ್ನು ಕಕ್ಷೆ ಮತ್ತು ಗತಿಗಳನ್ನು ತಿಳಿದು ಅವನ್ನು ದೂರದರ್ಶಕದಲ್ಲಿ ಸಮೀಕ್ಷಿಸಲು ಅನುಕೂಲ ಮಾಡಿಕೊಟ್ಟದುದು ಜ್ಞಾನದ ಎಲ್ಲೆಯನ್ನು ಬಹುಮಟ್ಟಿಗೆ ಮುಂದುವರಿಸಿತು.

ಮುಗಿಯದ ವಿಜ್ಞಾನ

ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ವ್ಯಾಲೆಸ್, ಲ್ಯಾಮಾರ್ಕ್, ಡಾರ್ವಿನ್ ಮೊದಲಾದ ವಿಜ್ಞಾನಿಗಳು ಪ್ರಾಣಿವಿಜ್ಞಾನದಲ್ಲಿ ಮಹತ್ವಪೂರ್ಣ ಸಂಶೋಧನೆಗಳನ್ನು ನಡೆಸಿದರು. "ಸನ್ನಿವೇಶಗಳಿಗೆ ತಕ್ಕಂತೆ ತಮ್ಮ ಅಳಿವು-ಉಳಿವುಗಳ ಪ್ರಶ್ನೆಯನ್ನು ಪರಿಹರಿಸಿಕೊಂಡು ಪ್ರಾಣಿಗಳು ಪರಿಣಾಮ ಹೊಂದಿ ಹೊಂದಿ ಹೊಸರೀತಿಯಲ್ಲಿ ಮಾರ್ಪಡುವುವು' ಎಂದು ಡಾರ್ವಿನ್ನನ ಪರಿಣಾಮ ತಿಳಿಸುತ್ತದೆ. ಭಗವಂತನು 84 ಲಕ್ಷ ಯೋನಿಗಳಲ್ಲಿ ಮಾತ್ರ ಪ್ರಾಣಿ ಸೃಷ್ಟಿ ಮಾಡಿದನು ಎಂಬ ವಾದಕ್ಕೆ ಹೊಸ ಬಗೆಯ ಪ್ರಾಣಿಗಳು ಹಾಗೂ ಸಸ್ಯಗಳು ಉತ್ಪತ್ತಿಯಾದುದು ಅಜ್ಞಾನ ನಿವಾರಕ ಸಾಧನವಾಯಿತು.

ಇತ್ತೀಚಿನ ಸಂಶೋಧನೆಗಳಾದ ಪರಮಾಣು ಸ್ಫೋಟ, ತೇಜೋವಿಕರಣ, ಬಾಹ್ಯಾಕಾಶ ಸಂಚಾರ ಚಂದ್ರನ ಮೇಲ್ಮೈ ಮೇಲೆ ಮಾನವನ ನಡೆ ಮೊದಲಾದ ವಿಜ್ಞಾನದ ಇಂದಿನ ನಿಷ್ಕೃಷ್ಟಸಿದ್ಧಾಂತಗಳು ಬೇರುಸಹಿತ ಸಡಿಲಿಸಿದುದು ಹಾಗಿರಲಿ, ಪ್ರಾಚೀನ ತತ್ತ್ವಶಾಸ್ತ್ರದ ತಳಹದಿಯನ್ನೇ ಅವು ಅಲುಗಾಡಿಸಿದವು. "ವಿಜ್ಞಾನದ ವ್ಯಾಪ್ತಿ ಎಲ್ಲಿಮುಗಿಯುವುದೋ, ಅಲ್ಲಿಂದ ತತ್ವ ಶಾಸ್ತ್ರ ಆರಂಭವಾಗುವುದು" ಎಂಬ ಕೂಗು ಎಷ್ಟು ಪೊಳ್ಳಾದುದು.! ವಿಜ್ಞಾನ ಇಂದಿಗೂ ಕೊನೆಗಂಡಿಲ್ಲ, ಮುಂದೆಯೂ ಅದರ ಕೊನೆಯ ಹಂತ ಮಾನವನಿಗೆ ಸಿಗುವ ಸಂಭವವಿಲ್ಲ. ತಿಳಿದಷ್ಟೂ ಮುಂದೆ ತಿಳಿಯಬೇಕಾದುದು ಅನಂತವಾಗಿಯೇ ಉಳಿದಿರುವುದು. ಹೀಗೆ ವಿಜ್ಞಾನದ ವ್ಯಾಪ್ತಿ ಮುಗಿಯುವುದು ಸಾಧ್ಯವೇ ಅಲ್ಲದಿರುವಾಗ ತತ್ತ್ವಶಾಸ್ತ್ರ ಆರಂಭವಾಗುವುದು ತಾನೆ ಎಂದು ?

ಮಾನವನ ಅರಿವು ವಿಜ್ಞಾನದಿಂದ ಬಲಗೊಳ್ಳುತ್ತದೆ. ಪ್ರಯೋಗ, ಪರೀಕ್ಷೆ. ಪರಾಮರ್ಶೆಗಳಿಂದ ವಿಜ್ಞಾನ ಮುಂದುವರಿಯುತ್ತಿರುತ್ತದೆ. ಹೀಗೆ ಮಾನವನ ತಿಳಿವಳಿಕೆಯ ಇತಿಮಿತಿಯನ್ನು ಅರಿತು ಊಹಾಪೋಹಗಳಿಂದ, ಆಪ್ತವಾಕ್ಯ ಮತ್ತು ಪ್ರತ್ಯಕ್ಷಗಳಿಗೆ ವಿರುದ್ಧವಾಗಿರದಂತೆ ಹೊಸವಿಷಯಗಳನ್ನು ಕುರಿತು ಸಮಾಲೋಚಿಸುವುದು ತತ್ತ್ವಶಾಸ್ತ್ರದ ಗುರಿ.

"ತತ್ತ್ವವಿಮರ್ಶಕನಿಗಿಂತ ವಿಜ್ಞಾನಿ ಉತ್ತಮ. ಅವನ ಕಲ್ಪನೆಯನ್ನು ಪ್ರತ್ಯಕ್ಷ ಸಿದ್ಧವಾದ ಪ್ರಯೋಗ

ಗಳಿಂದ ಸಮರ್ಥಿಸಬಹುದು " ಎನ್ನಬಹುದೇ ? ಎಲ್ಲ ವಿಷಯಗಳಿಗೂ ಪ್ರತ್ಯಕ್ಷ ಪ್ರಮಾಣ ಸಾಧ್ಯವಿಲ್ಲ. ಪ್ರತ್ಯಕ್ಷ ಸಿದ್ಧವಾದುದೆಲ್ಲಾ ನಿರ್ದುಷ್ಟವೆಂದು ಹೇಳಲೂ ಸಾಧ್ಯವಿಲ್ಲ. ಪ್ರತ್ಯಕ್ಷವಲ್ಲದ ವಿಷಯಗಳಿಗೆ ಅಸ್ತಿತ್ವವೇ ಇರದು, ಎಂಬುದೂ ಸರಿಯಲ್ಲ. ಕಣ್ಣು, ಕಿವಿ, ಮೂಗು ಮೊದಲಾದ ಇಂದ್ರಿಯಗಳಿಗೆ ಗೋಚರವಾದುದು ಪ್ರತ್ಯಕ್ಷ. ಆದರೆ ಆ ಇಂದ್ರಿಯಗಳು ಅಸಮರ್ಥವಾಗಿ ಅಥವಾ ದೋಷಯುಕ್ತವಾಗಿದ್ದರೆ ವಸ್ತುಗಳ ಯಥಾರ್ಥಜ್ಞಾನವನ್ನು ಹುಟ್ಟಿಸಲಾರವು. ಕುರುಡನಿಗೆ ಒಂದು ಚಿತ್ರ ಪ್ರತ್ಯಕ್ಷಸಿದ್ಧವಾಗಬಲ್ಲದೇ? ಕಾಮಾಲೇ ರೋಗಪೀಡಿತನಿಗೆ ವಸ್ತುವಿನ ಯಥಾರ್ಥ ಬಣ್ಣ ತಿಳಿದುಬಂದೀತೆ ? ಕೆಂಪಿನಿಂದ ನೇರಳೆಯವರೆಗೆ ಇರುವ ಬಿಳಿಬಣ್ಣದ ಕಿರಣದ ಅವಯವಗಳನ್ನು ಮಾತ್ರ ಕಣ್ಣು ಕಾಣಬಲ್ಲದು. ಅತಿ ನೇರಳೆ ಹಾಗೂ ಅಂತರ ರಕ್ತಕಿರಣಗಳು ದೃಗ್ಗೋಚರವಾಗಲಾರವು. ಅರ್ಧಮರ್ಧ ಮಾತ್ರ ಕೇಳಬಲ್ಲವನಿಗೆ ಯಥಾರ್ಥವಾಗಿ ಶಬ್ದ ಅರಿವಾದೀತೆ ? ನೆಗಡಿ ಇರುವಾಗ ಹುರಿದ ರವೆಯ ವಾಸನೆ ತೋರಿ ಬಂದೀತೆ ?

ಜೀವ ಪರಮಾತ್ಮರ ಸಾಕ್ಷಾತ್ಕಾರವನ್ನು ತನ್ನ ಪ್ರಯೋಗ ಶಾಲೆಯಲ್ಲಿ ವಿಜ್ಞಾನಿ ಪಡೆದು ಕೊಳ್ಳುವವರೆಗೆ, ಅನುಮಾನದಿಂದ ಜೀವೇಶ್ವರರ ಒಂದು ಸೂಕ್ತ ಕಲ್ಪನೆಯನ್ನು ಮಾಡಿಕೊಂಡು ತತ್ತ್ವಜ್ಞಾನಿ ತನ್ನ ಸಾಧನೆಯನ್ನು ಮುಂದುವರಿಸದೇ ಕೈ ಕಟ್ಟಿ ಕುಳಿತುಕೊಳ್ಳಬೇಕೇ ? ಇಲ್ಲ !

ವಿಜ್ಞಾನಿಯ ಹಾದಿಯೇ ಬೇರೆ, ತತ್ತ್ವಜ್ಞಾನಿಯ ಹಾದಿಯೇ ಬೇರೆ !

ಮಲಗುವ ಮುನ್ನ ತಾನು ಸಾಧಿಸಬೇಕೆಂದಿರುವ ಮಹಾಕಾರ್ಯದ ಸಮಾಲೋಚನೆ ಮಾಡಿಕೊಂಡಿದ್ದವನು ನಿದ್ರಾವಶನಾದ ಮೇಲೆ ಅದನ್ನು ಮರೆಯುವುದಿರಲಿ, ತನ್ನ ಬಳಿಯಲ್ಲಿಯೇ ಸಾಗಿಹೋಗುತ್ತಿರುವ ಜಿರಳೆ, ಹಲ್ಲಿ, ಕೊನೆಗೆ ಹಾವು ಮುಂತಾದ ಪ್ರಾಣಿಗಳ ಅಸ್ತಿತ್ವವನ್ನೂ ಗುರುತಿಸಲಾಗದೇ ನಿಶ್ಚೇಷ್ಟನಾಗಿರುವನು ! ತಮಗೆ ಇಂತಾದ್ದೆ

ತಿಂಗಳ ಮುಡಿದವನ ವಚನ

ಕರಟದ ಸೌಟಾದರೂ ಬಿಡಿಸಬಲ್ಲುದಯ್ಯ
ಮಣ್ಣಿನ ಮಡಿಕೆಯಾದರೂ ಬೇಯಿಸದೇ ಅಯ್ಯಾ !
ನಾನು ಕರಟದ ಸೌಟು
ನಾನು ಮಣ್ಣಿನ ಮಡಕೆ
ಅಡಿಗೆ ಮಾಡಿ ಬಡಿಸಯ್ಯಾ ತಿಂಗಳ ಮುಡಿದವನೇ !

ಕನಸು ಬೀಳಲೆಂದು ಬಯಸಿ ಅದನ್ನು ಎಲ್ಲರೂ ಪಡೆಯಬಲ್ಲರೇ ? ಸಕಲ ಸಾಧನ ಸಂಪತ್ತುಗಳಿಂದಲೂ ಕೂಡಿದ್ದು ಕಾರ್ಯೋನ್ಮುಖನಾಗಿರುವವನಿಗೆ ಮುನ್ನೆಚ್ಚರಿಕೆಯೇ ಇಲ್ಲದೆ ಯಾವುದಾದರೊಂದು ಅನಿರೀಕ್ಷಿತ ಅಡ್ಡಿ ಒದಗಿಬಂದು ಅವನ ಪ್ರಯತ್ನ ವ್ಯರ್ಥವಾಗುವುದಿಲ್ಲವೇ ? ಜನರು ತಮ್ಮ ಇಷ್ಟದಂತೆಯೇ ನಾನಾ ಬಗೆಯ ಖಾಯಿಲೆಗಳಿಂದ ನರಳುತ್ತಿರುವರೇ ? ಮಾನವನ ಹುಟ್ಟು ಸಾವುಗಳು ಅವನ ಇಚ್ಛೆಯಂತೆ ನಡೆಯದೇ ಇರುವಾಗ ಜೀವನ ಮಾತ್ರ ಅವನ ಇಚ್ಛೆ, ಪ್ರಯತ್ನಗಳಿಂದಲೇ ಸಾಗುತ್ತಿವೆ, ಎಂದು ಒಪ್ಪೋಣವೇ ?

ಹೀಗೆ ಸಮಾಲೋಚಿಸಿ, " ಸರ್ವಶಕ್ತನೂ, ಸರ್ವಪ್ರೇರಕನೂ, ಸರ್ವೇಶ್ವರನೂ ಆದ ಪರಮಾತ್ಮನೊಬ್ಬನಿರುವನು". ಅಂತರ್ಯಾಮಿಯಾಗಿದ್ದು ಎಲ್ಲರಿಂದಲೂ ಅವನು ಕರ್ಮಗಳನ್ನು ಮಾಡಿಸಿ, ಫಲ ಕೊಡುತ್ತಿರುವನು ' ಎಂದು ಅನುಮಾನದಿಂದ ಹಾಗೂ ಆಪ್ತಬಲಗಳಿಂದ ತತ್ತ್ವಜ್ಞಾನಿಗಳು ನಿಶ್ಚಯ ಮಾಡಿದ್ದಾರೆ. ದಿಕ್ಕಾಲಾದಿಗಳಿಗೆ ಸೀಮಿತವಾಗಿರದೆ ಅನಂತಜ್ಞಾನಾತ್ಮಕನಾಗಿದ್ದು, ಪ್ರತಿಯೊಬ್ಬನಿಗೂ ಅವನವನ ಅನುಭವಗಳಿಂದ ಮಾತ್ರವೇ ತಿಳಿದುಕೊಳ್ಳಬಹುದಾಗಿರುವ ಪ್ರಶಾಂತತೆ ಸ್ವರೂಪಿಯಾದ ಪರಮಾತ್ಮನಿಗೆ ಪ್ರಣಾಮಗಳು, ಎಂದು ಭರ್ತೃಹರಿ ಹೀಗೆ ಹೇಳಿದ್ದಾನೆ :

ದಿಕ್ಕಾಲಾದ್ಯನವಚ್ಛಿನ್ನಾನಂತಚಿನ್ಮಾತ್ರ
ಮೂರ್ತಯೇ |
ಸ್ವಾನುಭೂತ್ಯೇಕಮಾನಾಯ ನಮಃ ಶಾಂತಾಯ
ತೇಜಸೇ ||

ಡೆಪುಟಿ ಚೆನ್ನಬಸಪ್ಪ

—ಸ. ಸ. ಮಾಳವಾಡ

೧-೧೧-೧೯೭೩ ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎಂಬ ನಾಮಕರಣೋತ್ಸವ ನಡೆಯಿತು. ನವಂಬರ್ ಂದನೆಯ ದಿನಾಂಕವು 'ಕನ್ನಡದ ಹುಲಿ' ಡೆಪುಟಿ ಚೆನ್ನಬಸಪ್ಪನವರ ಜನ್ಮದಿನವೂ ಆಗಿದೆ.

ಆಗಸ್ಟ್ ೧೫ ನೆಯ ದಿನಾಂಕವು ಭಾರತದ ಸ್ವಾತಂತ್ರ್ಯೋತ್ಸವ ದಿನ. ಅದು ಶ್ರೀ ಅರವಿಂದರ ಜನ್ಮ ನವೂ ಆಗಿರುವಲ್ಲಿ ದೇವೀಸಂಕಲ್ಪವಿದೆ. ಅಂತೆಯೇ ಕರ್ನಾಟಕ ರಾಜ್ಯೋತ್ಸವದ ದಿನವು ಡೆಪುಟಿ ಚನ್ನ ಸಪ್ಪನವರ ಜನ್ಮದಿನವೂ ಆಗಿರುವುದು ದೈವೀಸಂಕಲ್ಪವೇ ಸರಿ. ಕರ್ನಾಟಕ ರಾಜ್ಯೋತ್ಸವವು ಸಾಧ್ಯ ಾಗುವ ದಿಸೆಯಲ್ಲಿ ಕನ್ನಡಕ್ಕಾಗಿ ಹೋರಾಡಿದ ಹೊಸಗನ್ನಡದ ಆದಿಪುರುಷ ಚೆನ್ನಬಸಪ್ಪ.

೧೯ ನೆಯ ಶತಮಾನದ ಉತ್ತರಾರ್ಧದಲ್ಲಿ ಧಾರ ಾಡ ಪ್ರದೇಶದಲ್ಲಿ ಕನ್ನಡವನ್ನು ಉಳಿಸಲು, ಬೆಳೆಸಲು ೆನ್ನಬಸಪ್ಪನವರು ನಿಷ್ಠೆಯಿಂದ, ಕೆಚ್ಚಿನಿಂದ ಹೋರಾಟ ಕೊಂಡರು. ಹಾಗೆ ಅವರು ಹೋರಾಡದಿದ್ದರೆ ಇಂದು ಾರವಾಡವು ಬೆಳಗಾವಿಯ ಸಮಸ್ಯೆಯನ್ನು ಎದುರಿಸ ೇಕಾಗುತ್ತಿತ್ತು. ಅಂದಿನ ಪರಿಸ್ಥಿತಿ ಹಾಗಿತ್ತು.

ಆಗ ಧಾರವಾಡದಲ್ಲಿ ಬರೀ ಮರಾಠಿ ಕಲಿಸುವ ಾಲೆಗಳಿದ್ದವು. ಕನ್ನಡ ಶಾಲೆಗಳಿರಲಿಲ್ಲ. ಮರಾಠಿ ಪತ್ರಿಕೆಗಳು ಹೊರಡುತ್ತಿದ್ದವು. ಕನ್ನಡ ಪತ್ರಿಕೆಗಳು ುಗಮವಾಗಿರಲಿಲ್ಲ. ಸಾರ್ವಜನಿಕ ಸಭೆಗಳಲ್ಲಿ ಮರಾಠಿ ಾಷಣಗಳೇ ನಡೆಯುತ್ತಿದ್ದವು. ಕನ್ನಡಕ್ಕೆ ಅವಕಾಶ ಿರಲಿಲ್ಲ. ಕನ್ನಡಿಗರು ಕೂಡ ಮೋಡಿ ಲಿಪಿ ಮರಾಠಿ ಂಕಿಗಳನ್ನು ಖಾಸಗಿಯಾಗಿ ಬಳಸುತ್ತಿದ್ದರು. ಇವೆಲ್ಲ ಅಂದಿನ ಪರಿಸ್ಥಿತಿಯ ವಾಸ್ತವಾಂಶಗಳು.

ತಿರುಳ್ಗನ್ನಡದ ಪ್ರದೇಶವಾದ ಧಾರವಾಡದಲ್ಲಿ ಅಂದು ಇಂತಹ ಪರಿಸ್ಥಿತಿಯೇಕೆ ಉಂಟಾಗಿತ್ತು ! ಈ ಪ್ರಶ್ನೆಗೆ ಉತ್ತರವು 1565 ರ ನಂತರದ ಈ ಭಾಗದ ಇತಿಹಾಸದಿಂದ ದೊರೆಯುತ್ತದೆ.

ಛಿದ್ರೀಕರಣದ ಪರಾಕಾಷ್ಠೆ

ವಿಜಯನಗರ ಸಾಮ್ರಾಜ್ಯದ ಶಕ್ತಿಯು ಅಳಿದ ನಂತರ ಸುಮಾರು ಮೂರುನೂರು ವರ್ಷಗಳವರೆಗೆ ಈ ಪ್ರದೇಶವು ಅನ್ಯರ ಅಧಿಪತ್ಯಕ್ಕೆ, ಕನ್ನಡವು ಅನ್ಯಭಾಷೆಗಳ ಆಕ್ರಮಣಕ್ಕೆ ಒಳಗಾಗಿದ್ದವು. ಆ ಮೂರು ಶತಕಗಳಲ್ಲಿ ಮುಸಲ್ಮಾನ್- ಮರಾಠಾ, ಬ್ರಿಟಿಷ್ ಆಧಿಪತ್ಯಗಳು ಇಲ್ಲಿ ಆಡಳಿತ ನಡೆಸಿದವು. ಆಗ ಕನ್ನಡ ಭಾಷೆಯು ಹಿಂದೆ ಸರಿಯಿತು. ಅನ್ಯ ಭಾಷೆಗಳ ಮೇಲುಗೈ ಆಯಿತು. 1818 ರಲ್ಲಿ ಪೇಶ್ವೆ ಅಧಿಕಾರ ಅಳಿದು ಇಲ್ಲಿ ಬ್ರಿಟಿಷರ ಆಡಳಿತ ಆರಂಭವಾಯಿತು. ಆದರೆ ಆರಂಭದಲ್ಲಿ ಇಲ್ಲಿಯ ಜನತೆಯ ಭಾಷೆ ಕನ್ನಡವೆಂಬುದನ್ನು ಬ್ರಿಟಿಷ್ ಆಳರಸರಿಗೆ ತಿಳಿಯಗೊಡದಂತಹ ಕುತಂತ್ರ ನಡೆದಿತ್ತು.

> "ಡೆಪುಟಿ ಚೆನ್ನಬಸಪ್ಪನವರು- ಶಿಕ್ಷಕರು, ಶಿಕ್ಷಣಾಧಿಕಾರಿಗಳು, ಸಮಾಜಸುಧಾರಕರು, ಸತ್ಯಶೋಧಕರು, ಧ್ಯೇಯನಿಷ್ಠರು- ಹೀಗೆ ಅವರ ವ್ಯಕ್ತಿತ್ವಕ್ಕೆ ಹಲವಾರು ಪೈಲುಗಳಿವೆ. ಅವರ ಹೋರಾಟದ ಕಾರಣದಿಂದ 'ಧಾರವಾಡ' ಇಂದು ಕರ್ನಾಟಕದ 'ಸಾಂಸ್ಕೃತಿಕ ರಾಜಧಾನಿ' ಯಾಗಿದೆ ಎನ್ನುತಾರೆ. ಸ. ಸ. ಮಾಳವಾಡರು."

1799 ರಲ್ಲಿ ನಡೆದ ಟಿಪ್ಪುವಿನ ಮರಣ ಮತ್ತು ಶ್ರೀರಂಗಪಟ್ಟಣದ ಪತನ ನಂತರ ಕರ್ನಾಟಕದ ಛಿದ್ರೀಕರಣವು ಪರಾಕಾಷ್ಟೆಯನ್ನು ತಲುಪಿತು. ಆಗ ಕರ್ನಾಟಕದ ಮೂರ್ತಿ ಈ ಭಾಗದಲ್ಲಿ ಕಣ್ಮರೆಯಾಗ ತೊಡಗಿತು. ಮೈಸೂರು ಭಾಗದಲ್ಲಿ ಕನ್ನಡಕ್ಕೆ ನೆಲೆ ದೊರೆತಿತ್ತು. ಆದರೆ ಅಲ್ಲಿಯವರೆಗೆ ವಿಶಾಲ ಕರ್ನಾಟಕಕ್ಕಿಂತ ಸಂಕುಚಿತ ಮೈಸೂರಿನ ಮಮತೆಯು ಹೆಚ್ಚಾಗಿತ್ತು.

1799 ರಲ್ಲಿ ಛಿದ್ರೀಕರಣವಾಗಿದ್ದ ನಮ್ಮ ನಾಡು 1956 ರಲ್ಲಿ ಏಕೀಕೃತವಾಯಿತು. ಅದಕ್ಕೆ ಪೂರ್ವದಲ್ಲಿ ನಮ್ಮ ನಾಡು ಇಪ್ಪತ್ತಕ್ಕೆ ಮೇಲ್ಪಟ್ಟ ತುಂಡುಗಳಾಗಿ ಬೇರೆಬೇರೆ ಆಡಳಿತಗಳಿಗೆ ಒಳಗಾಗಿತ್ತು.

ಅವೆಲ್ಲ ಒಂದಾಗಿ ಇಂದು 'ಕರ್ನಾಟಕ' ಎಂಬ ಹೆಸರಿನಲ್ಲಿ ರಾಜ್ಯೋತ್ಸವ ನಡೆಯುವುದಕ್ಕೆ ಚೆನ್ನಬಸಪ್ಪನವರ ನಿಸ್ಸೀಮ ಕನ್ನಡಾಭಿಮಾನ ಕೆಚ್ಚಿನ ಹೋರಾಟಗಳೇ ಪ್ರಥಮ ಕಾರಣ ಅವರ ನಂತರ ನಾವು ಪೂಜ್ಯ ಆಲೂರು ವೆಂಕಟರಾಯರು, ಪಿ.ಜಿ. ಹಳಕಟ್ಟಿ, ಬಿ.ಎಂ. ಶ್ರೀಕಂಠಯ್ಯ ಕುವೆಂಪು, ಮುಂತಾದವರ ಹೆಸರುಗಳನ್ನು ಸ್ಮರಿಸಿಕೊಳ್ಳಬೇಕು.

ಚುರುಕು ವಿದ್ಯಾರ್ಥಿ ಚೆನ್ನಬಸಪ್ಪ

ಚೆನ್ನಬಸಪ್ಪ ಬಸವಲಿಂಗಪ್ಪ ಧಾರವಾಡ ಎಂಬುದು ಈ ಪುಣ್ಯ ಪುರುಷನ ಪೂರ್ತಿಯಾದ ನಾಮಧೇಯವಾಗಿದೆ. ಅವರು ಜನ್ಮ ತಳೆದದ್ದು ಧಾರವಾಡದಲ್ಲಿ ೧-೧೧-೧೮೩೩ ರಂದು. ಲಿಂಗೈಕ್ಯರಾದುದು ೪-೧-೧೮೮೧ ರಂದು. ಅಂತೂ ಧಾರವಾಡವು ಅವರ ಜನ್ಮಭೂಮಿ, ಕರ್ಮಭೂಮಿ, ಪುಣ್ಯಭೂಮಿ.

೧೮೪೦ ರ ಸುಮಾರಿಗೆ ಧಾರವಾಡದಲ್ಲಿ ಸರಕಾರಿ ಶಾಲೆಗಳು ಇರಲಿಲ್ಲ. ಆದುದರಿಂದ ಬಾಲಕ ಚೆನ್ನಬಸಪ್ಪನು ಅಯ್ಯನವರ ಮಠದ ಶಾಲೆಯಲ್ಲಿ ಓದಿದರು. ಈ ಮೊದಲೆ ಅವರ ತಂದೆ ತೀರಿಕೊಂಡಿದ್ದರು. ಅವರ ತಾಯಿ ಮಗನ ವಿದ್ಯಾಭ್ಯಾಸ ಮುಂದುವರಿಸಬೇಕೆಂಬ ಹಂಬಲ ತೋರಿದಳು. ಆ ತಾಯಿಯ ಹಂಬಲವು ಮುಂದೆ ಸಾವಿರಾರು ಜನರ ಕನ್ನಡ ವಿದ್ಯಾ ಸಾಧನೆಗೆ ಕಾರಣವಾಯಿತು.

ಬಾಲಕ ಚೆನ್ನಬಸಪ್ಪನು ಚುರುಕು ವಿದ್ಯಾರ್ಥಿ ಆತನ ನೆನಪಿನ ಶಕ್ತಿಯೂ ಅಗಾಧವಾಗಿತ್ತು. ಬಾ ಡಲ್ಲಿ ತುಂಟುತನವು ಇತ್ತಂತೆ. ಆದರೆ ಆಗಲೆ ಸ್ವಾತಂತ್ರ್ಯ ಮನೋಭಾವ, ಸಾಹಸ ಪ್ರಿಯತೆಗ ಕಂಡು ಬರುತ್ತಿದ್ದವು. ಅಂದಿನ ಮಠದ ಅಯ್ಯನ ಪಾಠಶಾಲೆಯಲ್ಲಿ ಪ್ರಾಚೀನ ಕನ್ನಡ ಕಾವ್ಯಗಳ ಅಭ್ಯಾ ಚೆನ್ನಾಗಿ ನಡೆಯುತ್ತಿತ್ತು. ಅಂತೆಯೇ ಈ ಬಾಲಕನ ಕನ್ನಡ ಪ್ರೇಮವು ಮೊಳೆಯಿತು. ಗಣಿತ ವಿಷಯದ ಆತನು ವಿಶೇಷ ಜಾಣ್ಮೆಯನ್ನು ತೋರಿದ.

ಮುಂದೆ ಇಂಗ್ಲೀಷ್ ಕಲಿಯಬೇಕೆಂಬ ಉತ್ಸಾ ಮನೆತನ ಸಿರಿವಂತರದಾಗಿರಲಿಲ್ಲ. ಅಲ್ಲದೆ ಆ ಧಾರವಾಡದಲ್ಲಿ ಇಂಗ್ಲೀಷಿನ ಶಾಲೆಗಳಿರಲಿಲ್ಲ. ಬಾಲ ಚೆನ್ನಬಸಪ್ಪ ಕಾಲುನಡಿಗೆಯಿಂದಲೇ ಪುಣೆಯ ಪ್ರಯಾ ಕೈಗೊಳ್ಳುವ ಸಾಹಸ ಕೈಕೊಂಡ. ಅಲ್ಲದೆ ಹೋ ಇಂಗ್ಲಿಷ್ ಶಾಲೆ ಸೇರಿದ. ಅಲ್ಲಿಗೆ ತನ್ನ ತಾಯಿಯನ ಕರೆಸಿಕೊಂಡ.

ಶಿಕ್ಷಣ ಕ್ಷೇತ್ರದಲ್ಲಿ

ಹಾಯ್‌ಸ್ಕೂಲ್ ವಿದ್ಯಾಭ್ಯಾಸದ ನಂತರ ಇಂ ನಿಯರಿಂಗ್ ಕಾಲೇಜು ಸೇರಿದ. ಶಿಷ್ಯವೃತ್ತಿ ಪಾರಿತೋ ಷಕಗಳಿಂದ ಶಿಕ್ಷಣ ವೆಚ್ಚವನ್ನು ನೀಗಿಸಿದ. ಇಂಜಿ ಯರಿಂಗ್ ಕಾಲೇಜಿನ ಅಭ್ಯಾಸ ಮುಗಿಸಿದ ನಂತರ ಚೆನ್ ಬಸಪ್ಪ ಅದೇ ಕಾಲೇಜಿನಲ್ಲಿ ಕೆಲಕಾಲ ಲೆಕ್ಚರರ್ ಆಗಿದ್ದರು ಆಗ ಅವರಿಗೆ ಇಂಗ್ಲೇಂಡಿಗೆ ಹೋಗುವ ಸನ್ನಿವೇಶವು ಟಾಗಿತ್ತು. ಆದರೆ ಅದು ಹೇಗೋ ಫಲಿಸಲಿಲ್ಲ ಇಂಗ್ಲೆಂಡಿಗೆ ಹೋಗಿ ವಿದ್ಯಾಭ್ಯಾಸ ಮುಂದುವರಿಸಿದ್ದ ಭಾರತದ ಉದ್ಯಮರಂಗದಲ್ಲಿ ಅವರು ಪ್ರತಿಷ್ಠಿತ ವ್ಯ ಯಾಗಬಹುದಾಗಿತ್ತು. ಸಿರಿವಂತಿಕೆಯನ್ನು ಪಡೆಯ ಬಹುದಾಗಿತ್ತು. ಆದರೆ ಕನ್ನಡದ ಬಗೆಗೆ ಕತ್ತಲೆಯ ಆವರಿಸಿದ್ದ ಧಾರವಾಡ ಪ್ರದೇಶದಲ್ಲಿ ಕನ್ನಡದ ದೀ ಹಚ್ಚುವ ಕಾರ್ಯಕ್ಕೆ ಅವರು ದೊರೆಯುತ್ತಿರಲಿಲ್ಲವೇನೋ ಇಲ್ಲಿ ನಾವು ವಿಧಿಯ ಕೈವಾಡ ಕಾಣಬಹುದು.

ಪುಣೆಯ ವಾಸವು ಚೆನ್ನಬಸಪ್ಪನವರಲ್ಲಿ ಸಾವ ಜನಿಕ ಸೇವಾಭಾವವನ್ನು, ಮಾತೃಭಾಷೆಯ ಬಗೆಗೆ ಅಭಿಮಾನವನ್ನು ಮೂಡಿಸಿತು.

1855ರಲ್ಲಿ ಅವರು ಮರಳಿ ಧಾರವಾಡಕ್ಕೆ ಬಂದರು. ಕೆಲಕಾಲ ಪೋಸ್ಟಲ್ ಇಲಾಖೆಯಲ್ಲಿ ಮತ್ತು ಇಂಜಿನಿಯರಿಂಗ್ ಕೆಲಸ ಕೈಕೊಂಡಿದ್ದರು. ಆದರೆ ಅವರ ಮನದ ಒಲವಿಗೆ, ಅಭಿರುಚಿಗೆ ಆ ಕೆಲಸ ಹೊಂದಿಕೆಯಾಗಲಿಲ್ಲ. ಅಂತೆಯೆ ಅವರು ಅಂದಿನ ಮುಂಬಯಿ ಸರಕಾರದ ವಿದ್ಯಾ ಇಲಾಖೆಯನ್ನು ಪ್ರವೇಶಿಸಿದರು.

1856ರಲ್ಲಿ ಆರಂಭವಾದ 'ನಾರ್ಮಲ್‌ಸ್ಕೂಲ್' ಎಂಬ ವಿದ್ಯಾಲಯದ ಮುಖ್ಯ ಅಧ್ಯಾಪಕರಾಗಿ ನೇಮಕಗೊಂಡರು. ಆ ನಾರ್ಮಲ್ ಸ್ಕೂಲ್ ಅಂದರೆ ಇಂದಿನ ಸರ್ಕಾರಿ ಗಂಡುಮಕ್ಕಳ ಟ್ರೈನಿಂಗ್ ಕಾಲೇಜು. ಆ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರೇ ಚನ್ನಬಸಪ್ಪ.

ಕನ್ನಡ ನವೋದಯದ ಕಾರ್ಯದಲ್ಲಿ ಈ ಟ್ರೈನಿಂಗ್ ಕಾಲೇಜಿಗೆ ಮಹತ್ತಾದ ಸ್ಥಾನವಿದೆ. ಆ ನಿಷ್ಠಾವಂತ, ಉತ್ಸಾಹಿ ಕನ್ನಡ ಕಾರ್ಯಕರ್ತರನ್ನು ಒದಗಿಸಿದ ಶ್ರೇಯಸ್ಸಿದೆ. ಈ ದಿಸೆಯಲ್ಲಿ ಪ್ರಿನ್ಸಿಪಾಲರಾದ ಚೆನ್ನಬಸಪ್ಪನವರಿಗೆ ಮಹತ್ವದ ಪಾಲಿದೆ.

1864ರಲ್ಲಿ ಈ ಕಾಲೇಜಿನ ಬಗೆಗೆ ಚೆನ್ನಬಸಪ್ಪನವರ ವರದಿ ಹೀಗಿದೆ:

"ನಾನು ಈ ಕಾಲೇಜಿನಲ್ಲಿ ಹಾಜರ್ ಆದಾಗ 12 ಮತ್ತು 14 ವಿದ್ಯಾರ್ಥಿಗಳ ಎರಡು ವರ್ಗಗಳಿದ್ದವು ಆದರೆ ಆ ವಿದ್ಯಾರ್ಥಿಗಳಲ್ಲಿ ಅರ್ಧದಷ್ಟು ಜನರಿಗೆ ಒಂದರಿಂದ ಒಂಬತ್ತರವರೆಗೆ ಕನ್ನಡ ಅಂಕಿಗಳನ್ನು ಸರಿಯಾಗಿ ಎಣಿಸಲು ಬರುತ್ತಿರಲಿಲ್ಲ. ಅಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಲ್ಲಿ ಮರಾಠಿಗರೇ ಹೆಚ್ಚಾಗಿದ್ದರು. ಕನ್ನಡವು ಮಾತೃಭಾಷೆಯಾಗಿರುವ ವಿದ್ಯಾರ್ಥಿಗಳು ದೊರೆಯುತ್ತಿರಲಿಲ್ಲ."

ಶಾಲಾ ಪತ್ರಿಕೆಯ ಪ್ರಾರಂಭ

ಇಂತಹ ಪರಿಸ್ಥಿತಿಯಲ್ಲಿದ್ದ ಕಾಲೇಜನ್ನು ಚೆನ್ನಬಸಪ್ಪನವರು ಮುಂದೆ ಉತ್ತರ ಕರ್ನಾಟಕದ ಸಂಸ್ಕೃತಿಯ ಉಗಮಸ್ಥಾನವನ್ನಾಗಿ ಮಾರ್ಪಡಿಸುವ ಪವಾಡ ಸಾಧಿಸಿದರು. ಆಗ ಅವರು ಆರಂಭಿಸಿದ 'ಕನ್ನಡ ಶಾಲಾ ಪತ್ರಿಕೆ' ಈಗಲೂ ಊರ್ಜಿತ ಸ್ಥಿತಿಯಲ್ಲಿರುವುದು ಸಂತೋಷದ ಸಂಗತಿಯಾಗಿದೆ.

'ಡೆಪ್ಯುಟಿ' ಆದರು

1866 ರಿಂದ 1881ರ ವರೆಗೆ ಚೆನ್ನಬಸಪ್ಪನವರು ಡೆಪುಟಿ ಎಜುಕೇಷನಲ್ ಇನ್‌ಸ್ಪೆಕ್ಟರಾಗಿ ಕೆಲಸ ಮಾಡಿದರು. ಈ ಹುದ್ದೆಯನ್ನು ಪಡೆದ ಅಚ್ಚಕನ್ನಡಿಗರಲ್ಲಿ ಅವರೇ ಮೊದಲಿಗರು.

15 ವರುಷ ಡೆಪುಟಿ ಎಂಬ ಹುದ್ದೆಯಲ್ಲಿದ್ದ ಅವರನ್ನು ಜನರು ಗೌರವದಿಂದ 'ಡೆಪುಟಿ ಚೆನ್ನಬಸಪ್ಪ' ನವರು ಎಂಬುದಾಗಿ ಸಂಭೋದಿಸತೊಡಗಿದರು. ಇಂದಿಗೂ ಅದೇ ಹೆಸರು ಉಳಿದು ಬಂದಿದೆ. ಇಟ್ಟ ಹೆಸರಿಗಿಂತ ಜನತೆ ಪ್ರೇಮಾದರಗಳಿಂದ ಕೊಟ್ಟ ಹೆಸರೇ ಜನಮನದಲ್ಲಿ ಉಳಿಯುತ್ತದೆ ಎಂಬ ಮಾತಿಗೆ ಇದು ಸಾಕ್ಷಿಯಾಗಿದೆ.

ಶಿಕ್ಷಣಾಧಿಕಾರಿಯಾಗಿ ಚೆನ್ನಬಸಪ್ಪನವರು ಕನ್ನಡದ ಉದ್ಧಾರಕ್ಕಾಗಿ ಬಗೆಬಗೆಯ ಕಾರ್ಯಗಳನ್ನು ಕೈಕೊಂಡರು. ಮುಖ್ಯವಾಗಿ ಅವರು ಕನ್ನಡದ ಪ್ರಜ್ಞೆಯನ್ನು ಜಾಗೃತಗೊಳಿಸುವುದಕ್ಕೆ ಪರಿಶ್ರಮಿಸಿದರು. ಆ ದಿಸೆಯಲ್ಲಿ ಶಿಕ್ಷಣ ರಂಗದಲ್ಲಿ ಪರಿಣಾಮಕಾರಿಯಾದ ಕ್ರಮವನ್ನು ಕೈಕೊಂಡರು.

[೨]

1865 ರಲ್ಲಿ ಈ ವಿಭಾಗದ ಶಿಕ್ಷಣಾಧಿಕಾರಿ ರಸೆಲ್ ಅವರು ಸರಕಾರಕ್ಕೆ ಕಳುಹಿಸಿದ ವರದಿಯ ಕೆಲವು ಮಾತುಗಳು ಹೀಗಿವೆ:

'ಧಾರವಾಡ ವಿಭಾಗದ ಶಾಲೆಗಳಲ್ಲಿಯ ಶಿಕ್ಷಕರು ಅವರ ಮೇಲ್ವಿಚಾರಕರು (ಡೆಪುಟಿ ಇನ್‌ಸ್ಪೆಕ್ಟರ್) ಕನ್ನಡಿಗರಾಗಿಲ್ಲ. ಕನ್ನಡ ಪ್ರಾಥಮಿಕ ಶಾಲೆಗಳಲ್ಲೂ ಕೂಡ ಕನ್ನಡ ಭಾಷೆಯನ್ನು ಅರಿತ ಅಧ್ಯಾಪಕರ ಸಂಖ್ಯೆಯು ತೀರ ಸಣ್ಣದಾಗಿದೆ. ಇನ್ನುಳಿದ ವಿಭಾಗಗಳಲ್ಲಿ ಅಲ್ಲಿಯ ಮಾತೃಭಾಷೆಗಳಾದ ಗುಜರಾತಿ, ಮರಾಠಿಗಳನ್ನು ಕಲಿಸುವ ಏರ್ಪಾಡು ಇರುವಂತೆ ಈ ವಿಭಾಗದಲ್ಲಿ ಕನ್ನಡ ಕಲಿಸುವ ವ್ಯವಸ್ಥೆಯನ್ನು ಮಾಡಿಯೇ ಇಲ್ಲ. ಇಂತಹ ಶಾಲೆಗಳ ಬಗೆಗೆ ಇಲ್ಲಿಯ ಜನತೆಯು

ಉದಾಸೀನರಾಗಿರುವುದು ಅಚ್ಚರಿಯ ಮಾತಲ್ಲ.'

ಈ ವರದಿಗೆ ರಸೇಲ್‌ಸಾಹೇಬರ ಅಂಕಿತವಿದ್ದರೂ ಅವರು ಹಾಗೆ ಬರೆಯುವುದಕ್ಕೆ ಚೆನ್ನಬಸಪ್ಪನವರೇ ಕಾರಣರಾದರೆಂಬ ಮಾತು ಸ್ಪಷ್ಟವಿದೆ.

ಆ ವರದಿಯಲ್ಲಿ ಕಂಡುಬಂದ ಚಿತ್ರವನ್ನು ಮಾರ್ಪಡಿಸಿ ಇಲ್ಲಿಯ ಶಿಕ್ಷಣ ರಂಗಕ್ಕೆ ಕನ್ನಡ ದೀಕ್ಷೆಯನ್ನು ಕೊಟ್ಟವರು ಚೆನ್ನಬಸಪ್ಪನವರೇ ಆಗಿದ್ದಾರೆಂಬುವನು ನಾವು ಸ್ಮರಿಸಿಕೊಳ್ಳಬೇಕು.

ಸರಕಾರವು ರಸೆಲ್‌ರ ವರದಿಯನ್ನು ಒಪ್ಪಿಕೊಂಡು ಇಲ್ಲಿ ಕನ್ನಡ ಕಲಿಸುವ ವ್ಯವಸ್ಥೆಯನ್ನು ಕೈಗೊಂಡಿತು.

ಇದಕ್ಕಾಗಿ ಮೊದಲು ಕನ್ನಡ ಕ್ರಮಿಕ ಪುಸ್ತಕಗಳನ್ನು ಸಿದ್ಧಗೊಳಿಸುವುದು ಅವಶ್ಯಕವಾಗಿತ್ತು.

ತಾವು ಮಾಡಿದರು ಇತರರಿಂದ ಮಾಡಿಸಿದರು

ಈ ಕಾರ್ಯದಲ್ಲಿ ಚೆನ್ನಬಸಪ್ಪನವರು ಮುಂದಾಳು ಆಗಿ ಕಾರ್ಯ ಕೈಕೊಂಡರು. ಅವರು ಸ್ವತಃ ಪಠ ಪುಸ್ತಕ ಬರೆದರು. ಇತರರಿಂದ ಬರೆಯಿಸಿದರು.

ಡೆಪುಟಿ ಇನ್ಸ್‌ಪೆಕ್ಟರ್ ಆಗಿ ಕಾರ್ಯಮಾಡಿದ ಅವಧಿಯಲ್ಲಿ ಚೆನ್ನಬಸಪ್ಪನವರು ಕನ್ನಡದ ಬಗೆಗೆ ಪ್ರೀತಿ, ಅಭಿಮಾನ, ಉತ್ಸಾಹಗಳನ್ನು ಜನತೆಯಲ್ಲಿ ತುಂಬುವ ಕಾರ್ಯಕ್ಕೆ ತಮ್ಮ ಬಾಳನ್ನು ಮುಡಿಪಾಗಿ ಇಟ್ಟರು. ಕನ್ನಡಕ್ಕಾಗಿ ದುಡಿಯುವ ಒಂದು ಪಡೆಯನ್ನು ಅವರು ಅಂದು ಸಿದ್ಧಗೊಳಿಸಿದರು. ಅಂತಹವರಲ್ಲಿ ಕೆಲವು ಪ್ರಮುಖವಾದ ಹೆಸರುಗಳು ಹೀಗಿವೆ.

ಗಂಗಾಧರ ಮಡಿವಾಳೇಶ್ವರ ತೂರಮರಿ, ಶಾಂತವೀರ ರಾಚಿದೇವ ಕಿತ್ತೂರ, ವೀರಭದ್ರ ಮಡಿವಾಳೇಶ್ವರ ಪಂಡಿತ, ಶೇಷೋ ರಾಮಚಂದ್ರ ಚೂರಮರಿ, ವೆಂಕಟರಂಗೋ ಕಟ್ಟಿ, ಭುಜಂಗರಾವ್ ಹುಯಿಲಗೋಳ, ಪಾಂಡುರಂಗ ಚಿಂತಾಮಣಿ ಪೇಟಕರ.

ಅಂದು ಕನ್ನಡಭಾಷೆಗೆ ಮಹತ್ವದ ಸೇವೆಸಲ್ಲಿಸಿದ ಕೆಲವು ಹಿರಿಯರಿವರು. ಮುಂದೆ ಹೊಸ ಕಾರ್ಯಕರ್ತರು ಈ ಕಾರ್ಯವನ್ನು ಮುಂದುವರಿಸಿದರು. ಇವರೆಲ್ಲರ ಚರಿತ್ರೆ ಸಂಗ್ರಹಿಸಿ ಚಿಕ್ಕ ಹೊತ್ತಿಗೆಗಳನ್ನು ಪ್ರಕಟಿಸುವ ಕಾರ್ಯವನ್ನು ಕರ್ನಾಟಕ ವಿದ್ಯಾವರ್ಧಕ ಸಂಘವು ಕೈಗೊಳ್ಳಬೇಕಾಗಿದೆ.

ಶೇಷೋ ರಾಮಚಂದ್ರ ಚೂರಮರಿಯವರು ಚೆನ್ನಬಸಪ್ಪನವರ ಬಗ್ಗೆ ತಮ್ಮ ಪೂಜ್ಯ ಭಾವನೆಯನ್ನು ಹೀಗೆ ವ್ಯಕ್ತಪಡಿಸಿದ್ದಾರೆ.

"ಬಡವರ ವಿದ್ಯೆಗಾಗಿ ತನುವಿಂ, ಮನದಿಂ,
ಧನದಿಂದೆ ಸಾಹಸಂ
ಬಡುತಿಹ ಧೀರ ಚೆನ್ನಬಸವೇಶ್ವರ ದಿವ್ಯರ
ಪಾದಭೂಷಣಂ"

ಶಾಂತವೀರ ರಾಚಿದೇವ ಕಿತ್ತೂರರು, ಬಾಳಾಚಾರ್ಯ ಸಕ್ಕರಿಯವರ ಗುರುಗಳು. ಗುರುಸ್ಮರಣೆಯ ಒಂದು ಕಾರಣವಾಗಿ ಅವರು 'ಶಾಂತಕವಿ' ಎಂಬ ಕಾವ್ಯನಾಮ ಇಟ್ಟುಕೊಂಡರು. ಕನ್ನಡ ದಾಸಯ್ಯನಾಗಿ ಶಾಂತಕವಿಗಳು ಕನ್ನಡ ಭಾಷೆಗೆ ಶ್ರೇಷ್ಠ ಸೇವೆ ಸಲ್ಲಿಸಿದ್ದು ಸುಪ್ರಸಿದ್ಧವಿದೆ.

ವಿದೇಶೀಯರಾದ ಡಾ॥ ರೆಟಲ್, ಡಾ॥ ಕಿಟ್ಟೆಲ್ ಅವರು ಆಗ ಕನ್ನಡದ ಸೇವೆ ಕೈಕೊಂಡರು. ಅವರ ಕನ್ನಡ ನಿಘಂಟು ರಚನೆಯ ಕಾರ್ಯಕ್ಕೆ ಚೆನ್ನಬಸಪ್ಪನವರು ನೆರವನ್ನು ಒದಗಿಸಿದರು.

ಇಂತಹ ಕಾರ್ಯಕರ್ತರಲ್ಲಿ ಆಗ ಸುಮಧುರ ಬಾಂಧವ್ಯವು ಕಂಡುಬರುತ್ತಿತ್ತು. ಕನ್ನಡದ ಕಾರ್ಯಕ್ಕಾಗಿ ಎಲ್ಲರೂ ಒಂದಾಗಿ ನಿಷ್ಠೆಯಿಂದ ದುಡಿಯುತ್ತಿದ್ದರು.

ನಡೆ ಕನ್ನಡ-ನುಡಿ ಕನ್ನಡ

ಧಾರವಾಡ ಪ್ರದೇಶವು ನೂರಾರು ವರುಷಗಳವರೆಗೆ ಮರಾಠಿ ಭಾಷೆ ಅಧಿಕಾರಿಗಳ ಒತ್ತಾಯಕ್ಕೆ ಒಳಗಾಗಿತ್ತು. ಇಲ್ಲಿಯ ಶಿಕ್ಷಣ ರಂಗದಲ್ಲಿ ಸಾರ್ವಜನಿಕ ಜೀವನದಲ್ಲಿ ಮರಾಠಿಗೇ ಪ್ರಾಧಾನ್ಯ ಕೊಡಲಾಗಿತ್ತು. ಆಡಳಿತದ ಕಾರಣದಿಂದಾಗಿ ಜನಸಾಮಾನ್ಯರ ಆಡುನುಡಿಯಲ್ಲಿ ಮರಾಠಿ ಪದಗಳು, ಸಂಖ್ಯಾವಾಚಕಗಳು, ಸೇರಿಕೊಂಡಿವು. ಮೋಡಿ ಲಿಪಿಯಲ್ಲಿ ಸಹಿ ಮಾಡುವುದು ಶ್ರೇಷ್ಠ-ವೆಂಬ ಭ್ರಮೆಯು ಮೂಡಿತ್ತು.

ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿ ಚೆನ್ನಬಸಪ್ಪರು ಕನ್ನಡವನ್ನು ಉಳಿಸಿ ಬೆಳಸುವ ಕಾರ್ಯಕ್ಕಾಗಿ ...ರಾಟ ಕೈಕೊಳ್ಳಬೇಕಾಯಿತು.

ಅವರು ತಮ್ಮ ಕೈಕೆಳಗಿನ ಕನ್ನಡ ಶಾಲೆಯ ...ಕರಿಗೆ ಕನ್ನಡ ಪದಗಳನ್ನೂ, ಸಂಖ್ಯಾವಾಚಕಗಳನ್ನೂ ...ಸಲು, ಕನ್ನಡ ಲಿಪಿಯಲ್ಲಿ ಸಹಿ ಮಾಡಲು ಉಪದೇಶಿ...ರು. ಕೋಪದ ಇಲ್ಲವೆ ಚುಚ್ಚುಮಾತುಗಳಿಂದ ...ಸ್ಕರಿಸಿದರು. ತಪ್ಪಿದವರಿಗೆ ದಂಡ ಕಟ್ಟಿಯೂ ಬುದ್ಧಿ...ಸಿದರು. ಅಧಿಕಾರಿಗಳ ಬಗೆಗೆ ಭಯ-ಗೌರವಗಳಿದ್ದ ...ಲವು ಆದಾಗಿತ್ತು.

ಕನ್ನಡ ಶಾಲೆಯ ಶಿಕ್ಷಕರು ಎಲ್ಲ ಸಂದರ್ಭ...ಲ್ಲಿಯೂ ಕನ್ನಡ ಭಾಷೆಯನ್ನು ಬಳಸಬೇಕೆಂದು ...ವರು ಪರಿಪತ್ರ (Circular) ಹೊರಡಿಸುವ ...ರ್ಪಾಡು ಮಾಡಿದರು. ಆಗ ಟ್ರೈನಿಂಗ್ ಕಾಲೇಜಿನ ...ನ್ಸಿಪಾಲರಾಗಿದ್ದ ಭುಜಂಗರಾವ್ ಹುಯಿಲಗೋಳ ...ವರಿಗೆ ಚೆನ್ನಬಸಪ್ಪನವರು ಬರೆದ ಪತ್ರಗಳಲ್ಲಿ ಒಂದೆರಡು ...ಾಂಪಲ್ ನೋಡಬಹುದು.

...ಯ ಭುಜಂಗರಾವ್,

...........ಮರಾಠಿಯಲ್ಲಿ ಸಹಿ ಮಾಡುವುದು ಅವಶ್ಯ...ಲ್ಲವೆಂದು ನಿಮ್ಮ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಅವರ ...ಕಿತವು ಕನ್ನಡದಲ್ಲಿಯೂ ಇರುವುದು ಅವಶ್ಯವಾಗಿದೆ

ನಿಮ್ಮ

...-8-1868 ಚೆನ್ನಬಸಪ್ಪ ಧಾರವಾಡ. ಡೆ.ಎ.ಇ.

(ಕನ್ನಡ ಶಾಲೆಯ ಶಿಕ್ಷಕರು ಕಾಲೇಜಿಗೆ ...ಟ್ರೈನಿಂಗಿಗೆ ಬಂದಾಗ ಮರಾಠಿಯಲ್ಲಿ ಸಹಿ ಮಾಡುತ್ತಿದ್ದ ...ಸಂದರ್ಭದಲ್ಲಿಯ ಪತ್ರವಿದು.)

ಈಗ ಇನ್ನೊಂದು ಪತ್ರ

...ಯ ಭುಜಂಗರಾವ್

...........ಈಗ ನಮ್ಮ ಕನ್ನಡ ಶಾಲೆಗಳಲ್ಲಿ ಮರಾಠಿ...ನ್ನು ಕಲಿಸುವುದು ಅವಶ್ಯವಿಲ್ಲ. ಶಿಕ್ಷಕರ ಯಶಸ್ಸು ಅವರು ಕನ್ನಡವನ್ನು ಹೇಗೆ ಕಲಿಸುವರೆಂಬುದರ ಮೇಲೆ ಅವಲಂಬಿಸಿದೆ. ಇದನ್ನು ನಿಮ್ಮ ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ಸ್ಪಷ್ಟವಾಗಿ ತಂದುಕೊಡಬೇಕು.

ನಿಮ್ಮ

ನರಗುಂದ ಕ್ಯಾಂಪ್ ಚೆನ್ನಬಸಪ್ಪ ಧಾರವಾಡ
2-3-1870 ಡೆ.ಎ.ಇ.

ಸಂಘ ಸಂಸ್ಥೆಗಳ ಸ್ಥಾಪನೆಗೆ ನೆರವಾದರು

ಚೆನ್ನಬಸಪ್ಪನವರು ಸಾರ್ವಜನಿಕರಿಗೂ ಕನ್ನಡದ ದೀಕ್ಷೆಯನ್ನು ಕೊಟ್ಟರು. ಆಗ ಅಂಗಡಿಗಳಲ್ಲಿ ಲೆಕ್ಕವನ್ನು ಮರಾಠಿಯಲ್ಲಿ ಇಡುವ ರೂಢಿ ಇತ್ತು. ಕನ್ನಡದಲ್ಲಿಯೇ ಲೆಕ್ಕ ಬರೆಯಬೇಕೆಂದು ಅವರು ಸಲಹೆ ಕೊಟ್ಟರು. ಹಾಗೆ ಮಾಡದ ಅಂಗಡಿಕಾರರನ್ನು ಬಹಿಷ್ಕರಿಸುವ ಉಪಾಯ ಕೈಕೊಂಡರು.

ಸಾರ್ವಜನಿಕ ಸಭೆಗಳಲ್ಲಿ ಕನ್ನಡದಲ್ಲಿ ಭಾಷಣ ಮಾಡಲು ಉತ್ತೇಜನ ಕೊಟ್ಟರು.

ಹಳೆಯ ಪದ್ಧತಿಯ ಪಾಠಶಾಲೆಗಳಲ್ಲಿ ಕನ್ನಡದಲ್ಲಿ ಬಲ್ಲಿದರಾದ ಪಂಡಿತರಿದ್ದರು. ಅಂತಹವರನ್ನು ಚೆನ್ನಬಸಪ್ಪನವರು ಸರಕಾರಿ ಶಾಲೆಗಳಲ್ಲಿ ನೇಮಕ ಮಾಡಿದರು. ಗಂಗಾಧರ ಮಡಿವಾಳೇಶ್ವರ ತೂರಮರಿಯವರು ಅಂತಹವರಲ್ಲಿ ಒಬ್ಬರು. ಈ ಬಗೆಯ ವಿದ್ವಾಂಸರುಗಳು ಮುಂದೆ ಟ್ರೈನಿಂಗ್ ಕಾಲೇಜಿಗೆ ಬಂದರು. ಅವರಲ್ಲಿ ಕೆಲವರು ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಗೆ ನೆರವಾದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡದ ನವೋದಯ ದದಿಶೆಯಲ್ಲಿ ಬೆಲೆಯುಳ್ಳ ಕಾಣಿಕೆ ಸಲ್ಲಿಸಿದ್ದು ಸರ್ವಶೃತವಿದೆ.

ಚೆನ್ನಬಸಪ್ಪನವರು ಕೆಲವು ಕ್ರಮಿಕ ಪುಸ್ತಕಗಳನ್ನು ಬರೆದುದಲ್ಲದೆ ಶೇಕ್ಸಪಿಅರ್ ಕವಿಯ ಕೆಲವು ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದರು. ಅವರು ಬರೆದ ಗಣಿತ ವಿಷಯವು ಅಂದು ಬಹಳ ಮೆಚ್ಚುಗೆಯನ್ನು ಪಡೆದಿತ್ತು. ಗಣಿತ ತಜ್ಞ ಡಾ॥ ಡಿ. ಸಿ. ಪಾವಟೆಯವರು ಆ ಪುಸ್ತಕವನ್ನು ಹೊಗಳುತ್ತಿರುವುದನ್ನು ನಾನು ಕೇಳಿದ್ದೇನೆ. ಡಾ॥ ಪಾವಟೆಯವರು 1907 ರಲ್ಲಿ ಕನ್ನಡ

ಸೊಸೈಟಿಯಲಿ ಸಿಗುವುದು ಸರ್ಕಾರಿ ಭತ್ಯ
ಬಹಳ ಕಾಯಬೇಕು ಅದಕಾಗಿ ದಿನನಿತ್ಯ
ಕ್ಯೂನಲ್ಲಿರುವಾಗಲೇ ರೇಟೇರುವುದು ಭತ್ಯ
ವರ್ಣಿಸಲಾಗದು ಬಡವನ ಪರಿಪಾಟ ನಿತ್ಯ

—ಕೆಹೆಚ್.

ಶಾಲೆಯ ಬಾಲಕರಾಗಿದ್ದರು. ಆಗ ಅವರಿಗೆ ಚೆನ್ನ ಬಸಪ್ಪನವರು ಬರೆದ ಗಣಿತ ಪುಸ್ತಕ ಪಾರಿತೋಷಕವಾಗಿ ದೊರಕಿತ್ತಂತೆ. ಈ ಸಂಗತಿಯನ್ನು ಅವರು ತಮ್ಮ ಆತ್ಮ ಚರಿತ್ರೆಯಲ್ಲಿ ಬರೆದಿದ್ದಾರೆ.

ಹತ್ತೊಂಬತ್ತನೆಯ ಶತಮಾನ ಉತ್ತರಾರ್ಧದ ಕನ್ನಡ ಭಾಷೆ ವಾಙ್ಮಯಗಳ ಮೇಲೆ ಚೆನ್ನಬಸಪ್ಪನವರು ಪ್ರಭಾವ ಬೀರಿದರು. ಅಂತೆಯೆ ಆ ಕಾಲವನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಡೆಪುಟಿ ಚೆನ್ನಬಸಪ್ಪ ಯುಗವೆಂದು ಗುರುತಿಸಬೇಕಾಗಿದೆ.

ಧಾರವಾಡದ ಟ್ರೈನಿಂಗ್ ಕಾಲೇಜ್ ಇಲ್ಲಿಯ ಕರ್ನಾಟಕ ಕಾಲೇಜ್ ಸ್ಥಾಪನೆಗೆ ಪ್ರೇರಣೆಯನ್ನು ಒದಗಿಸಿತು. ಮುಂದೆ ಕರ್ನಾಟಕ ಕಾಲೇಜು ಕರ್ನಾಟಕ ಯುನಿವರ್ಸಿಟಿಯ ಸ್ಥಾಪನೆಗೆ ಕಾರಣವಾಯಿತು. ಈ ದೃಷ್ಟಿಯಿಂದ ಡೆಪುಟಿ ಚೆನ್ನಬಸಪ್ಪನವರನ್ನು ನಾವು ಕರ್ನಾಟಕ ವಿಶ್ವವಿದ್ಯಾಲಯದ 'ಪ್ರಪಿತಾಮಹಾ' ರೆಂದು ಕರೆಯಬೇಕು, ಚೆನ್ನಬಸಪ್ಪನವರ ಹೆಸರಿನಲ್ಲಿ ಧಾರವಾಡದಲ್ಲಿ ಒಂದು ವಾಚನಾಲಯವು ಇದೆ.

ಕೀರ್ತಿಶೇಷ ದೊಡ್ಡ ಸಾಹೇಬರು ಚೆನ್ನಬಸಪ್ಪನವರ ಕಾರ್ಯದಿಂದ ಸ್ಫೂರ್ತಿ ಪಡೆದರು.

ಚೆನ್ನಬಸಪ್ಪನವರು ಸಮಾಜಪ್ರೇಮಿಯೂ ಆಗಿದ್ದರು. 1910 ರಲ್ಲಿ ಬೆಳಗಾವಿಯಲ್ಲಿ ಸ್ಥಾಪಿತವಾದ ಕರ್ನಾಟಕ ಲಿಂಗಾಯತ ಎಜುಕೇಷನ್ ಸೊಸೈಟಿಯ ಸ್ಥಾಪನೆಗೆ ಅವರು ಬಹುಕಾಲ ಹಿಂದೆಯೇ ಕೈಕೊಂಡಿದ್ದ ಚಟುವ[ಟಿ]ಕೆಗಳು ಪ್ರೇರಣೆಯನ್ನು ಒದಗಿಸಿದವು. ಅವರು ತಮ್ಮ ಸ್ವಂತ ವೆಚ್ಚದಿಂದ ಒಂದು ವಿದ್ಯಾರ್ಥಿನಿಲಯವನ್ನು ನಡೆಸಿದ್ದರು.

ಅರ್ಥಪೂರ್ಣ ವ್ಯಕ್ತಿತ್ವ

ಶಿಕ್ಷಕ, ಶಿಕ್ಷಣಾಧಿಕಾರಿ, ಉತ್ಕಟ ಕನ್ನಡಪ್ರೇ[ಮಿ] ಸಮಾಜ ಸುಧಾರಕ, ಸತ್ಯಶೋಧಕ, ಧ್ಯೇಯನಿಷ್ಠ ಹೀಗೆ ಅವರ ವ್ಯಕ್ತಿತ್ವಕ್ಕೆ ಹಲವಾರು ಪೈಲುಗಳಿವೆ.

ಸಾಹಸ ಪ್ರಿಯತೆ, ಸ್ಪಷ್ಟವಾದಿತ್ವ, ನ[...] ನಿಷ್ಠುರತೆ, ಪ್ರಾಮಾಣಿಕತನ, ಕಳಕಳಿ, ಪ್ರ[...] ದೃಷ್ಟಿ, ನೈತಿಕ ಧೈರ್ಯ— ಇತ್ಯಾದಿ ಗುಣ[...] ಕೂಡಿದ್ದ ಈ ಮಹನೀಯರು ಗೌರವಪೂರ್ಣ ವ್ಯ[...]ಯಾಗಿದ್ದರು.

ಕರ್ನಾಟಕ ನವೋದಯಕ್ಕೆ ಧಾರವಾಡವು ವಿಶಿಷ್ಟವಾದ ಕಾಣಿಕೆ ಸಲ್ಲಿಸಿದೆ. ಕರ್ನಾಟಕದ ಸರ್ವಾಂಗೀಣ ಪ್ರಗತಿ ಸಾಧನೆಯ ದಿಸೆಯಲ್ಲಿ ನಮ್ಮ ನಗರವು ಚಾಲನೆ ಪ್ರೇರಣೆಗಳನ್ನು ಒದಗಿಸಿದೆ. ಈಗ ಅದು ಕನ್ನಡಿಗರ ಸಾಂಸ್ಕೃತಿಕ ರಾಜಧಾನಿ.

ಈ ಬಗೆಯ ಮಹತ್ವವು ಧಾರವಾಡಕ್ಕೆ ಬ[...] ಬರಲು ಹತ್ತೊಂಬತ್ತನೆಯ ಶತಮಾನದ ಉತ್ತರಾ[ರ್ಧ]ದಲ್ಲಿ ಚೆನ್ನಬಸಪ್ಪನವರು ನಡೆಸಿದ ಹೋರಾಟವು ಪ್ರಥ[...] ಕಾರಣವಾಗಿದೆ. ಈ ಪೂತನ್ನು ನಾವಿಂದು ಕೃತಜ್ಞತೆಯಿಂದ ಗೌರವದಿಂದ ಸ್ಮರಿಸಿಕೊಳ್ಳಬೇಕು.

'ಕರ್ನಾಟಕ' ಎಂಬ ಸಮರ್ಪಕ ಹೆಸರನ್ನು ಪಡೆ[...] ವರಲ್ಲಿ ಪ್ರಥಮ ರಾಜ್ಯೋತ್ಸವದ ಆಚರಣೆಯು, ಚೆನ್ನ ಬಸಪ್ಪನವರ ಆತ್ಮಕ್ಕೆ ಅಪಾರ ಆನಂದವನ್ನು ತರುತ್ತ[...]

ಕನ್ನಡದ ದೀಪ ಹಚ್ಚಿದ ಅಗ್ರಗ[ಣ್ಯ] **ಚೆನ್ನಬಸಪ್ಪ.** ಇಂತಹ ಪುಣ್ಯ ಪುರುಷನಿ[ಗೆ] ನಮೋ ನಮೋ.

— ದೊಡ್ಡ ದೊಡ್ಡ ಘೋಷಣೆ ಮಾಡಬೇಡಿ —

ಕೆಲಸ ಮಾಡಿರಿ

— ಬಿ. ಸುಬ್ರಾಯ ಅಡಿಗ

ಹೀಗೆ ಮಾಡುವೆ ; ಹಾಗೆ ಮಾಡುವೆ

ಹೀಗೆ ಮಾಡುವೆ ; ಹಾಗೆ ಮಾಡುವೆ ಎಂದು ಮುಂತಾಗಿ ದೊಡ್ಡ ದೊಡ್ಡ ಘೋಷಣೆ ಹೊರಡಿಸುತ್ತಾ ತಿರುಗುವುದು ಸರಿಯಲ್ಲ. ಇಂದು ಘೋಷಿಸಿದ ವಿಷಯವನ್ನು ನಾಳೆ ಮಾಡಿಯೇ ಬಿಡುವಿರೆಂದೇನು ಇಲ್ಲ. ನಾಳೆ ಮಾಡಬೇಕಾಗಿದ್ದ ಕೆಲಸ ಆರಂಭವಾಗುವ ಸಂದರ್ಭವೂ ಒದಗಬಹುದು.

ಘೋಷಣೆ–ತಿಳಿಗೇಡಿತನ

ನಮ್ಮ ದೇಹ ಇಂದು ಇದ್ದಂತೆಯೇ ನಾಳೆ ಇದ್ದೀತೆಂದು ಅದಾರು ಹೇಳಬಲ್ಲರು ? ಕಾಹಿಲೆ ಹಾಗೂ ಸಾವು ಯಾವಾಗ ಬಂದಡರುವುದೆಂದು ಅದಾರು ಬಲ್ಲರು ? ದುರ್ದೈವದಿಂದ ನಾವು ಘೋಷಿಸಿದಂತೆ ಎಸಗಲಾರೆವಾದರೆ ಆ ಘೋಣೆಗೆ ಬೆಲೆ ಏನುಳಿದೀತು ? ಧನ ನಾಶದ ಹಲವಾರು ಆಕಸ್ಮಿಕ ಘಟನೆಗಳು ನಡೆಯುವುದುಂಟು. ಕಳವು, ಅಗ್ನಿಆಕಸ್ಮಿಕ, ಬರಗಾಲ, ನಷ್ಟ–ಮೊದಲಾದ ಎಷ್ಟೋ ಘಟನೆಗಳು ಇಂದಿನ ಸುಸಂಪನ್ನ ಮನುಷ್ಯನನ್ನು ನಾಳೆಯೇ ದರಿದ್ರನನ್ನಾಗಿ ಮಾಡಬಲ್ಲವು. ಆಗ ಇಂದಿನ ಸಂಪನ್ನ ಸ್ಥಿತಿಯಲ್ಲಿ ಎಸಗಿದ ಘೋಷಣೆಗಳಿಗೇನು ಬೆಲೆ !

ಭವಿಷ್ಯ ಅನಿಶ್ಚಿತ. ನಿಯಮಿತಿಯ ಗರ್ಭದಲ್ಲಿ ಎಂತಹ ಮೃದಲ ಹಾಗೂ ದುಃಖದ ಘಟನೆಗಳು ಅಡಗಿವೆಯೋ ಯಾರಿಗೆ ಗೊತ್ತು ? ನಾಳೆ ನಾವೇನು ಮಾಡುವೆವು? ಏನು ಮಾಡೆವು– ಎಂಬುದನ್ನು ಇಂದಲ್ಲ, ನಾಳೆ ನಿರ್ಣಯಿಸಲು ಸಾಧ್ಯ. ಮೊದಲೇ ಅವನ್ನು ಘೋಷಿಸುತ್ತಾ ತಿರುಗುವುದು ತಿಳಿಗೇಡಿತನ ಇಂದಿನ ಸ್ಥಿತಿಯಲ್ಲಿ ಸಾಧ್ಯವಿರುವುದನ್ನೇ ಯೋಚಿಸುತ್ತಾ ಮಾಡುತ್ತ ಇರಬೇಕು. ಮುಂದಿನದರ ಬಗ್ಗೆ ಆಶ್ವಾಸನೆ ನೀಡುವುದು ವ್ಯರ್ಥ. ನೀಡುವ ಸಂದರ್ಭ ಒದಗಿದರೂ "**ಇಂದಿ**ನಂತೆಯೇ ಪರಿಸ್ಥಿತಿ ಅನುಕೂಲವಾಗಿದ್ದರೆ ನಾನದನ್ನು ಈಡೇರಿಸುವೆ"—ಎಂದು ತಪ್ಪದೇ ಹೇಳಬೇಕು.

ಹಿಂದೆಂದೂ ಇಲ್ಲದಷ್ಟು ಘೋಷಣೆಗಳು ನಾವಿಂದು ಕೇಳುತ್ತಿದ್ದೇವೆ. ವೃತ್ತ ಪತ್ರಿಕೆಗಳಲ್ಲಿ ಘೋಷಣೆಗಳ ಪ್ರವಾಹವೇ ಹರಿಯುತ್ತಿದೆ. ಘೋಷಿಸುವುದೇ ತಿಳಿಗೇಡಿತನ ಎನ್ನುವ ಲೇಖಕರು ಅದರ ಆಗು – ಹೋಗುಗಳನ್ನು ಮಾರ್ಮಿಕವಾಗಿ ಚರ್ಚಿಸಿದ್ದಾರೆ.

ಕಳೆದುದನ್ನು ಚಿಂತಿಸಿ ಫಲವೇನು ?

ಮುದುಕರು ಗತಕಾಲದಲ್ಲಿ ಘಟನಾಕ್ರಮಗಳಲ್ಲಿ ಹೆಚ್ಚು ಅಭಿರುಚಿ ತಳೆಯುತ್ತಾರೆ. ಮತ್ತು ಕಳೆದ ಸಂಗತಿಗಳನ್ನು ತುಂಬ ಉತ್ಸಾಹದಿಂದ ಉಲ್ಲೇಖಿಸುತ್ತಾರೆ. ಗತ ಕಾಲವೇ ಅವರ ಶ್ರೇಷ್ಠ ಸಮಯವಾಗಿತ್ತು. ಅದು ಕಳೆದು ಹೋಗಿದೆ. ವರ್ತಮಾನಕಾಲ ನೀರಸವಾದುದು, ಭವಿಷ್ಯವಂತೂ ಭಯಕಾರಕ. ಎಂತಲೇ ಸುಖಾನುಭೂತಿಯಾಗಿ ಅವರು ಮಧುರ ಭೂತಕಾಲದಲ್ಲಿ ಮುಳುಗಿರುತ್ತಾರೆ. ಕೆಲವಿಚಿತ್ರ-ವ್ಯಕ್ತಿಗಳಿಗೆ ದುಃಖದ ನೆನಪು ಮಧುರವೆನಿಸುತ್ತದೆ.

ಅಂತಹವರು ತಮ್ಮ ಜೀವನದಲ್ಲಿ ಘಟಿಸಿದ ದುರ್ಘಟನೆಗಳನ್ನು ವಿಪತ್ತುಗಳನ್ನು ವಿವರವಾಗಿ ವರ್ಣಿಸುತ್ತ ತಾವನುಭವಿಸಿದ ದು:ಖಾವಸ್ಥೆಯನ್ನು ನೆನೆದು ವಿಲಕ್ಷಣ ಆನಂದವನ್ನನುಭವಿಸುತ್ತಾರೆ. ಹಿಂದಿನ ಘಟನೆಗಳು ಸುಖಕರವಿರಲಿ-ದು:ಖಕರವಿರಲಿ, ಅವನ್ನೇ ಮೆಲುಕು ಹಾಕುತ್ತ ಕಾಲಕಳೆಯುವ ಜನ ಯಾವ ವಯಸ್ಸಿನವರೇ ಆಗಿದ್ದರೂ ಮುದುಕರೆಂದೇ ಅರ್ಥ. ಅವರ ಮನಸ್ಸು ಮುದಿಯಾಗಿದೆ; ಶಾರೀರಿಕವಾಗಿ ಅವರು ಯುವಕರಿದ್ದರೂ, ಅವರನು ಮುದುಕರ ಸಾಲಿಗೆ ಸೇರಿಸಬೇಕು.

ಕಲ್ಪನೆ ವಾಸ್ತವಿಕವಲ್ಲ !

ಭವಿಷ್ಯದ ಕಲ್ಪನೆಯಲ್ಲೇ ಮುಳುಗಿರುವುದು ಬಾಲಕರ ಸ್ವಭಾವ. ಅವರ ಗತಕಾಲ ಅಷ್ಟೇನೂ ಮಹತ್ವಕರ ಇರುವುದಿಲ್ಲ. ಅಲ್ಲದೆ ಅದರ ಸ್ಪಷ್ಟ ಸ್ಮರಣೆಯೂ ಅವರಿಗಿಲ್ಲ. ಅವರ ವರ್ತಮಾನ ಕಾಲವೂ ಅಸ್ಥಿರತೆ ಹಾಗೂ ಅನಿಶ್ಚಿತತೆಯಿಂದ ತುಂಬಿರುತ್ತದೆ. ಹೀಗಾಗಿ ಅವರ ಪಾಲಿಗೆ ಚಿಂತನದ ಏಕ ಮಾತ್ರ ಆಧಾರವೆಂದರೆ ಭವಿಷ್ಯವೊಂದೇ. ಮುಂದೆ ನಾವು ಹೀಗಾಗುತ್ತೇವೆ..... ಹಾಗೆ ಮಾಡುತ್ತೇವೆ...... ಹೀಗೆ ಮಾಡುತ್ತೇವೆ,— ಎಂದು ಮುಂತಾಗಿ ಅವರು ಹೇಳುತ್ತಾ ಇರುತ್ತಾರೆ. ಕಲ್ಪನೆಗಳನ್ನೇ ವಾಸ್ತವಿಕವೆಂದು ತಿಳಿಯುತ್ತಾರೆ. ಮಕ್ಕಳ ಈ ಮುಗ್ಧತೆಯನ್ನು ಕಂಡು ಹಿರಿಯರು ಕೆಲವೊಮ್ಮೆ ನಗುವುದುಂಟು. ಕಲ್ಪನೆಗೂ ವಾಸ್ತವಿಕತೆಗೂ ನಡುವೆ ಎಂತಹ ದೊಡ್ಡ ಗೋಡೆ ಅಡ್ಡವಾಗಿದೆ ಎಂಬುದನ್ನು ಆ ಹಿರಿಯರು ಅನುಭವದಿಂದ ಅರಿತಿದ್ದಾರೆ.

ಪ್ರೌಢರು-ಯಥಾರ್ಥವಾದಿಗಳು

ವಿಕಸಿತ ವ್ಯಕ್ತಿತ್ವವುಳ್ಳ ಪ್ರೌಢರು ಮುದುಕರಂತೆ ಗತಕಾಲದ ಸವಿನೆನಪಿನಲ್ಲಿ ಮುಳುಗಿರುವುದೂ ಇಲ್ಲ; ಮಕ್ಕಳಂತೆ ಭವಿಷ್ಯದ ಹಗಲು ಗನಸುಕಾಣುತ್ತ ಉಪಹಾಸಕ್ಕೆಡಾಗುವುದೂ ಇಲ್ಲ. ಅವರು ಯಥಾರ್ಥವಾದಿಗಳೆನಿಸಿ ವರ್ತಮಾನ ಕಾಲದಲ್ಲೇ ತಮ್ಮೆಲ್ಲ ಲಕ್ಷ್ಯವನ್ನು ಕೇಂದ್ರಿಕರಿಸುತ್ತಾರೆ. ಈಗಿನ ಕಠಿನ ಸಮಸ್ಯೆಗಳನ್ನು ಧೈರ್ಯದಿಂದೆದುರಿಸುವ ಶಕ್ತಿ ಪ್ರೌಢಾವಸ್ಥೆಗಿದೆ. ವರ್ತಮಾನವು ಇಂದಿನ ಜಟಿಲ ಸಮಸ್ಯೆಗಳೊಂದಿಗೆ ಎದುರು ಬರುವುದು; ಪ್ರಬಲ ಪುರುಷಾರ್ಥ ಹಾಗೂ ಪ್ರಖರ ಮನೋಬಲದ ಆಧಾರದ ಮೇಲೆಯೇ ಅವಕ್ಕೆ ಸಮಾಧಾನ ಹುಡುಕಬಹುದು. ಪೌರುಷವು ಗೌರವಶಾಲಿಯಾಗಿರುವಂತೆಯೇ ಹೊಣೆಗಾರಿಕೆಯಿಂದಲೂ ತುಂಬಿರುತ್ತದೆ. ಅದನ್ನು ಸರಿಯಾಗಿ ಉಪಯೋಗಿಸಿ ಎಂಥ ಸಮಸ್ಯೆಯನ್ನೂ ನಿವಾರಿಸಬಹುದು.

ನಾಳೆ ಏನು ಮಾಡಬೇಕೆಂಬುದರ ರೂಪರೇಷೆ ನಮ್ಮ ಕಣ್ಣ ಮುಂದೆ ಇರಬೇಕು. ಅದನ್ನಾಧರಿಸಿಯೇ ನಮ್ಮ ಈಗಿನ ಪ್ರಯತ್ನಗಳನ್ನು ಮುಂದುವರಿಸಬಲ್ಲೆವು. ಆದರೆ ಭವಿಷ್ಯ ಅನಿಶ್ಚಿತ ಎಂದು ದೃಢವಾಗಿ ನಂಬಿ ಮುಂದುವರಿಯಬಾರದು. ಏಕೆಂದರೆ ಮನುಷ್ಯನ ಇಚ್ಛೆಯೊಂದೇ ಸರ್ವೋಪರಿ ಎನಿಸದು. ಪರಿಸ್ಥಿತಿ ನಾಳೆ ಬದಲಾಗಬಹುದು. ಇಂದಿನ ಇಚ್ಛೆಯೂ ಕಾರಣಾಂತರದಿಂದ ನಾಳೆ ಶಿಥಿಲವಾದೀತು. ಇಂಥ ಸ್ಥಿತಿಯಲ್ಲಿ ಇತರರಿಗೆ ಆಕರ್ಷಕ ಆಶ್ವಾಸನೆ ಕೊಡುವುದರಲ್ಲೇನು ಅರ್ಥವಿದೆ?

ಆಶ್ವಾಸನೆ ಆಕರ್ಷಕ, ಆದರೆ !

ಮುಂದೆ ನೀವೇನು ಮಾಡುವಿರಿ-ಎಂಬುದರ ಬಗ್ಗೆ ನಿಮ್ಮ ಆತ್ಮೀಯರೊಡನೆ ವಿಚಾರ ವಿಮರ್ಶೆ ಮಾಡುವುದರಲ್ಲೇನೂ ತಪ್ಪಿಲ್ಲ. ಭವಿಷ್ಯಯೋಜನೆಗಳನ್ನು ರೂಪಿಸಿಕೊಳ್ಳುವುದೂ ತಪ್ಪಲ್ಲ. ಆದರೆ "ನಾನು ಹೀಗೆಯೇ ಮಾಡುವೆ" ಎಂದು ಘಂಟಾಘೋಷವಾಗಿ ಸಾರಬಾರದು; ಹಾಗೆ ಮಾಡಲು ಶಕ್ತಿ ಮೀರಿ ಪ್ರಯತ್ನಿಸುವ ದೃಢ ನಿರ್ಧಾರ ಕೈಗೊಳ್ಳಬಹುದು. ಆ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲು ತೊಡಗಲೂಬಹುದು. ಇಂಥ ಸಾಹಸಿಕ ಪ್ರಯತ್ನವು ಇಂದಿನ ಸಂಕಲ್ಪವನ್ನು ಪೂರ್ಣಗೊಳಿಸಬಲ್ಲದು. ಈ ರೀತಿ ದೊರೆಯುವ ಸಫಲತೆ ಶ್ಲಾಘನೀಯವಾದುದು. ಇವಕ್ಕೆ ಬದಲು

ತಿಂಗಳ ಮುಡಿದವನ ವಚನ

ಎಡೆಯಿರದ ಕಡೆಯಿರದ ಆಕಾಶದಲ್ಲಿ
ನಿನ್ನ ಪುಸ್ತಕವನೋದುವೆ
ಹೊಸ ಹೊಸ ರೂಪವಿರುವ ಬುವಿಯಲ್ಲಿ
ನೀರಾಳ ಹೇರಾಳ ಕಡಲರಾಶಿಯಲ್ಲಿ
ನಿನ್ನ ಪುಸ್ತಕವನೋದುವೆ
ಇವ ಬರೆದ ಮಸ್ತಕ ಎಲ್ಲಿರುವುದೆಂದು
ಇನ್ನೂ ಹುಡುಕಾಡುತ್ತಿರುವೆ ತಿಂಗಳಮುಡಿದವನೇ!

— ಗುಂಡ್ಮಿ, ಚಂದ್ರಶೇಖರ ಐತಾಳ.

ಮಾರುದ್ದದ ಘೋಷಣೆ ಹೊರಡಿಸಿ, ಆ ಬಳಿಕ ಈಡೇರಿಸದೆ ಹೋದರೆ ನಾಚಿಕೆಯಿಂದ ತಲೆ ತಗ್ಗಿಸಬೇಕಾಗುವುದು; ಅಲ್ಲದೆ ಇತರರ ವ್ಯಂಗ್ಯ ಬಾಣಗಳನ್ನು ಸಹಿಸಬೇಕಾಗುವುದು.

ನಾಳೆ ಬೇಡ-ಇಂದೇ ಮಾಡು

ಇದಕ್ಕಿಂತ ಹಿಂದಿನ ಸಂಗತಿಯನ್ನು ಯೋಚಿಸಿ, ಇಂದೇ ಅದನ್ನು ಈಡೇರಿಸಲು ಯತ್ನಿಸುವುದು ಲೇಸು. ಇಂದಿನ ಹೊಣೆಗಾರಿಕೆ ತುಂಬಾ ಹೆಚ್ಚಾಗಿದ್ದು ಅದನ್ನು ನೆರವೇರಿಸಲು ಬುದ್ಧಿಬಲ, ಸಾಹಸ, ಸಾಧನ ಸಲಕರಣೆ ಎಲ್ಲವೂ ಬೇಕಾಗುವುದು. ನಾವು ಈ ಉದ್ದೇಶವನ್ನೇ ನಮ್ಮ ಕಣ್ಣೆದುರಿಗಿರಿಸಿಕೊಳ್ಳಬೇಕು. ಯಾವುದಾದರೂ ಸತ್ಕಾರ್ಯಮಾಡಬೇಕಾಗಿದ್ದರೆ ಇಂದೇ ಮುಗಿಸಬೇಕು. "ನೀನು ಮಾಡಬೇಕಾದ ಸತ್ಕರ್ಮ ಇಂದೇ ಮಾಡು." ಎಡಗೈಯಿಂದ ಮಾಡಬೇಕಾದ ದಾನವನ್ನು ಬಲಗೈಯ ಬಳಿಗೂ ಒಯ್ಯಬೇಡ. ಏಕೆಂದರೇ ಇಷ್ಟೊಂದು ಅಲ್ಪಸಮಯದಲ್ಲಿ ನಿನ್ನ ಮನಸ್ಸು ಬದಲಾಗಬಹುದು, ನೀನು ಕೊಡಬೇಕಾದುದನ್ನು ಕೊಡದೆಯೇ ಹೋಗಬಹುದು — ಎಂದು ಯೇಸುಕ್ರಿಸ್ತರು ಹೇಳುತ್ತಿದ್ದರು. ನೂರು ಮಣ ಹೇಳಿಕೆಗಿಂತಲೂ ಒಂದು ಸೇರು ಕೆಲಸ ಎಷ್ಟೋ ಮೇಲು' ಎಂದು ಬುದ್ಧಿವಂತರ ಅಭಿಪ್ರಾಯ. ಘೋಷಣೆ ಹೊರಡಿಸುತ್ತಾ ತಿರುಗುವುದಕ್ಕಿಂತ ಕರ್ಮನಿಷ್ಠೆಯಿಂದಲೇ ನಿಮ್ಮ ಸದಾಶಯತೆಯನ್ನು ತೋರ್ಪಡಿಸೋಣ.

ಸಂಕಲ್ಪಿಸಿ, ಸಾಧಿಸಿರಿ

ನಾಲಗೆ ಸಣ್ಣದು, ಕೈಗಳು ದೊಡ್ಡವು. ನಾಲಿಗೆ ಒಂದು, ಕೈಗಳೆರಡು. ನಾವು ಕಡಿಮೆ ಮಾತಾಡಿ ಹೆಚ್ಚು ಮಾಡಲೆಂದು ದೇವರು ಈ ಅನುಪಾತ ಇರಿಸಿದ್ದಾನೆ. ಕೆಲಸವೇ ನಮ್ಮ ಸದ್ಭಾವನೆಯ ವಾಸ್ತವಿಕ ರುಜುವಾತು. ನಾಲಿಗೆ ಭಾವಾವೇಷದಿಂದ ಏನೇನೋ ಹೊಗಳಬಹುದು. ಆ ಆವೇಶ ಇಳಿಯುತ್ತಲೇ ಹಿಂದಿನ ಮಾತನ್ನು ಬದಲಿಸಲೂ ಬಹುದು. ಆದರೇ ಕೆಲಸ ಕೆಲಸವೇ. ಸಂಕಲ್ಪದ ಪ್ರೌಢತನ ಆದರಿಂದಲೇ ನಮಗೆ ವ್ಯಕ್ತವಾಗುವುದು.

ಆವೇಶ ಹಾಗೂ ಸಂಕಲ್ಪದ ನಡುವಣ ಅಂತರವೇ ಘೋಷಣೆ ಮತ್ತು ಕ್ರಿಯೆ ನಡುವೆ ಇರುತ್ತದೆ. ಸಾಮಾನ್ಯವಾಗಿ ಆವೇಶಕ್ಕೀಡಾದವರೇ ಮಾರುದ್ದದ ಘೋಷಣೆ ಹೊರಡಿಸುತ್ತಾರೆ. ಅತ್ಯುತ್ಸಾಹದ ಮನಃಸ್ಥಿತಿಯಲ್ಲಿದ್ದಾಗ ಇಂದಿನ ಘೋಷಣೆ ನಾಳೆ ಕಾರ್ಯರೂಪಕ್ಕೆ ಬಂದೀತೇ ಇಲ್ಲವೇ ಎಂಬುದನ್ನು ಯಾರೂ ಯೋಚಿಸುವುದಿಲ್ಲ. ಸಾಧ್ಯವಾಗದುದನ್ನು ಸುಮ್ಮನೇ ಘೋಷಿಸುವುದರಲ್ಲಿ ಅರ್ಥವೇನಿದೆ; ಒಂದುವೇಳೆ ಘೋಷಣೆ ಮಾಡುವ ಮನಸ್ಸಿದ್ದರೆ ಅದಕ್ಕೆ ದೂರಾಲೋಚನೆ, ದೃಢ ಸಂಕಲ್ಪ, ಉಪಯುಕ್ತ ಸಾಧನ, ಯೋಗ್ಯತೆ— ಎಲ್ಲವೂ ಇರಬೇಕು. ಅದಿಲ್ಲವಾದರೇ ನಮ್ಮೆಲ್ಲ ಶಕ್ತಿಯನ್ನು ಉಪಯೋಗಿಸಿ ಹೆಚ್ಚು ಹೆಚ್ಚು ಆಸಕ್ತಿ ಸದಾಶಯತೆ ಹಾಗೂ ಪ್ರಾಮಾಣಿಕತೆಯಿಂದ ಇಂದಿನ ಕೆಲಸ ಮಾಡಲು ತೊಡಗಬೇಕು. ನಾವು ಈ ರೀತಿ ವರ್ತಮಾನಕಾಲದಲ್ಲಿ ಬದುಕಲು ಪ್ರಯತ್ನಿಸಿದ ನಮ್ಮ ಭವಿಷ್ಯವು ತಾನಾಗಿಯೇ ರೂಪಿತವಾಗುವುದು. ಮತ್ತು ನಮ್ಮ ಜೀವನವೂ ಸಾರ್ಥಕವೆನಿಸುವುದು.

ಸ್ತ್ರೀ—

ದೇಶದ ತಾಯಿಬೇರು

—ವಿಶಾಲಾಕ್ಷಿ ದಕ್ಷಿಣಾಮೂರ್ತಿ

ಹೆಣ್ಣಿನ ಹಿರಿಮೆ ಅನ್ಯಾದೃಶವಾದುದು. ತಾಯ್ತನ ಮಹತ್ವ ಪರಿಪೂರಿತವಾದದ್ದು. ಹುಟ್ಟಿಗೆ ತಾಯಾಗಿ, ಬಾಳ್ವೆಗೆ ಮಡದಿಯಾಗಿ, ಮಮತೆಗೆ ಮಗಳಾಗಿ ಹೆಣ್ಣು ತನ ಮನುಷ್ಯನಿಗೆ ಹಲವು ಪ್ರಕಾರಗಳಲ್ಲಿ ನಂಟಾಗಿ ಬಂದಿದೆ.

ಪ್ರತಿ ವರ್ಷವೂ ಅನೇಕ ಮಂದಿ ವಿದ್ಯಾರ್ಥಿನಿಯರು ವಿದ್ಯಾವತಿಯರಾಗಿ ಪದವಿಪತ್ರಗಳನ್ನು ಹಿಡಿದು ಕಾಲೇಜಿನಿಂದ ಹೊರಬರುತ್ತಿದ್ದಾರೆ. 'ವಿದ್ಯಾರ್ಥಿನಿಯರದೇ ಮೇಲುಗೈ' ಎಂಬ ಶೀರ್ಷಿಕೆಗಳು ಕೂಡ ಎಷ್ಟೋ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ.

ವಿದ್ಯಾವಂತ ಮಹಿಳೆಯು ಮನೆ ವಿಶ್ವವಿದ್ಯಾಲಯ:

ಸಾಹಿತ್ಯ, ಲಲಿತ ಕಲೆ, ಶಿಕ್ಷಣ ಕ್ಷೇತ್ರದಲ್ಲಿ, ಸಾಮಾಜಿಕ ಜೀವನದಲ್ಲಿ ದುಡಿಯುತ್ತ ಬಂದಿದ್ದಾರೆ. ಒಬ್ಬ ಮಹಿಳೆ ವಿದ್ಯಾವತಿಯಾದರೆ ಇಡೀ ಮನೆಯೇ ಒಂದು ವಿಶ್ವವಿದ್ಯಾಲಯ ಆದಂತೆ. ಆದರೆ ಅವರಿಂದ ದೇಶಕ್ಕೆ ಎಷ್ಟು ಮಾತ್ರ ಪ್ರಗತಿಯಾಗಿದೆ ?

ಇಂದಿನ ಮಹಿಳೆ ಎಲ್ಲ ಕ್ಷೇತ್ರಗಳಲ್ಲೂ ಸ್ಪರ್ಧಿಸುತ್ತಿದ್ದಾಳೆ. ಸರ್ವತೋಮುಖ ವಿಕಾಸಕ್ಕಾಗಿ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಎಲ್ಲರ ಗಮನವನ್ನು ತನ್ನತ್ತ ಸೆಳೆಯಬೇಕೆಂಬ ಆಸಕ್ತಿಯಿಂದಿದ್ದಾಳೆ. ಇಷ್ಟೆಲ್ಲಾ ಆವಶ್ಯಕವೇ ಎಂದು ನಾವು ಯೋಚಿಸಿದಾಗ ನಮ್ಮ ಬುದ್ಧಿ ಚುರುಕಾಗುತ್ತದೆ. ಆಕೆಗೆ ಸ್ಥಾನಮಾನಗಳನ್ನು ಪ್ರತ್ಯೇಕವಾಗಿ ಯಾರೂ ಕರೆದು ಕೊಡಬೇಕಾದ ಅವಶ್ಯಕತೆಯಿಲ್ಲ. ಆಕೆ ತನ್ನ ಸ್ಥಾನವನ್ನು ಪ್ರತಿ ಕ್ಷಣದಲ್ಲೂ ತನ್ನದೇ ಆಗಿ ಉಳಿಸಿಕೊಳ್ಳುತ್ತಲೇ ಬಂದಿದ್ದಾಳೆ, ಬರುತ್ತಿದ್ದಾಳೆ.

ಮಾನವ ತನ್ನ ಹುಟ್ಟಿನಿಂದಲೇ ಮಹಿಳೆಯ ಆಸರೆಯಲ್ಲಿ ರೂಪುಗೊಂಡವ. ಭೂಮಿಗೆ ಬಿದ್ದೊಡನೆಯೇ, ಅವನ ಲಾಲನೆ, ಪಾಲನೆ, ಪೋಷಣೆ ಎಲ್ಲ ಕಾರ್ಯಗಳಿಗೂ ದೈವೀಶಕ್ತಿಯಂತೆ ನಿಂತು ನಡೆಸುತ್ತಾಳೆ. ನಲ್ಮೆಯ ಸೋನೆಯನ್ನು ಸುರಿಸಿ ಇಷ್ಟೆತ್ತರಕ್ಕೆ ಬೆಳೆಸುತ್ತಾಳೆ. ಎಲ್ಲ ತಾಯಂದಿರೂ ಈ ಕಾರ್ಯವನ್ನು ಸಹಜವಾಗಿ ಮಾಡಿಯೇ ಮಾಡುತ್ತಾರೆ. ಆದರೆ ಎಲ್ಲರಿಗಿಂತಲೂ ವಿಭಿನ್ನವಾಗಿ ಮಾಡುವ ತಾಯಿಯ ಕೆಲಸ ಹೆಚ್ಚುಗಾರಿಕೆಯದು.

****

ಯಶಸ್ವೀ ಸಾರ್ವಜನಿಕ ಸೇವೆ ಸಲ್ಲಿಸಿದ ಪ್ರತಿಯೋರ್ವ ಮಹಾಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆಂದು ಸಾರುತ್ತಿದೆ ಒಂದು ಪರ್ಷಿಯನ್ ಗಾದೆ. ಎಲ್ಲಾ ಕ್ಷೇತ್ರಗಳಲ್ಲಿ ಆಕೆಯ ಪಾತ್ರ ಮಹತ್ತರವಾದುದು. ಅದರ ಒಂದು ಮುಖವನ್ನು ಚಿತ್ರಿಸಿದ್ದಾರೆ ಖ್ಯಾತ ಲೇಖಕಿ ವಿಶಾಲಾಕ್ಷಿ ದಕ್ಷಿಣಾಮೂರ್ತಿಯವರು.

****

ಬರಿಯ ಊಟ, ತಿಂಡಿ, ಲಾಲನೆ, ಪಾಲನೆ, ಪೋಷಣೆ ಇವಿಷ್ಟೇ ಆದರೆ ದೇಹ ಬೆಳೆಯುತ್ತದೆ. ಮಾನವನಾಗಿ ರೂಪುಗೊಳ್ಳಲು ಸಾಧ್ಯವೇ ? ಅವನ ಬುದ್ಧಿಗೆ ಸಂಸ್ಕಾರವೂ ಬೇಕು. ಮನಸ್ಸಿಗೆ ಹಿತವಾದ ವಾತಾವರಣವನ್ನು ಮೂಡಿಸುವ ಜಾಣ್ಮೆ ಸಂಪೂರ್ಣವಾಗಿ ಸ್ತ್ರೀಯರ ಮೇಲೆ ಬಿದ್ದಿದೆ.

ಮನುಷ್ಯನ ವ್ಯಕ್ತಿತ್ವ–ಮಹಿಳೆಯ ಕೈವಾಡ:

ಒಂದು ಮಗು ಅದು ಹೆಣ್ಣಾಗಲಿ ಗಂಡಾಗಲಿ ಅದಕ್ಕೆ ತಕ್ಕ ಜ್ಞಾನಾರ್ಜನೆ, ಮಾನವೀಯತೆಯುಳ್ಳ ಹೃದಯ ಪರಿವರ್ತನೆ, ನಿಷ್ಠೆ, ಸೇವಾ ಮನೋಭಾವ, ಪರೋಪಕಾರ ಹಿತಾಸಕ್ತಿ, ತ್ಯಾಗ ಮನೋಭಾವ ಇವೆಲ್ಲ ರೂಪುಗೊಂಡಾಗಲೇ ಆ ವ್ಯಕ್ತಿ ಸಂಪೂರ್ಣ ಮಾನವನಾಗುವುದು.

ಈ ಗುಣಗಳೆಲ್ಲ ಅವನಲ್ಲಿ ರೂಪುಗೊಂಡಿದ್ದರೆ ಅದಕ್ಕೆಲ್ಲ ಬಹುಭಾಗ ಅವನನ್ನು ಬೆಳೆಸಿದ ಮಹಿಳೆಯ ಕೈವಾಡವೇ ಎಂಬುದು ನಿರ್ವಿವಾದ.

ಗಿಡದ ತುದಿಯಲ್ಲಿ ಅರಳಿ ಮಧುರ ವಾಸನೆಯನ್ನು ಸುತ್ತಲೂ ಬೀರುವ ಹೂವೊಂದರ ಬಾಳಿನ ಹಿಂದೆ ಬುಡದಲ್ಲಿ ಅಡಗಿ ಕುಳಿತಿರುವ ತಾಯಿಬೇರಿನ ತ್ಯಾಗ ಎಷ್ಟೊಂದು ಮುಖ್ಯವಾದ ಅಂಶ ! ಇದನ್ನು ಯಾರೂ ಬೇಗ ಯೋಚಿಸುವುದಿಲ್ಲ.

ಅಂತೆಯೇ ಮೇಧಾವಿತನ ಹೊಂದಿರುವ ಅನೇಕ ಗಣ್ಯರಲ್ಲಿ, ಔದಾರ್ಯ ಹೊಂದಿರುವ ಮಹನೀಯರಲ್ಲಿ, ತ್ಯಾಗಬುದ್ಧಿಯಿಂದ ಸಂಘ ಸಂಸ್ಥೆಗಳನ್ನು ಕಟ್ಟಿ ಉನ್ನತವಾದ ಶಿಕ್ಷಣವನ್ನು ಕೊಡಿಸಿ ದೇಶಕ್ಕೆ ಉನ್ನತರಾದ ಪ್ರಜೆಗಳ ಕೊಡಿಗೆಯನ್ನು ನೀಡುವ ದೇಶಪ್ರೇಮ ಉಳ್ಳ ಯಾವ ವ್ಯಕ್ತಿಯ ಜೀವನವನ್ನೇ ವಿಶ್ಲೇಶಿಸಿ ನೋಡಿದಾಗ ಇವರ ಹಿನ್ನೆಲೆ ಅರ್ಥವಾದೀತು. ಮಾತೃ ಹೃದಯದ ಔದಾರ್ಯದ ಮಡಿಲಿನಲ್ಲಿ ಬೆಳೆದ ಆ ಜನ ತಾಯಿಗಿಡದ ಬೇರಿನ ರಸವನ್ನುಂಡು ಅರಳಿದ ಸುಂದರ ಪುಷ್ಪಗಳಂತೆ ತಮ್ಮ ಮನಸ್ಸಿನ ವಿಚಾರಗಳನ್ನು ಬೆಳೆಸಿಕೊಂಡಿರುತ್ತಾರೆ.

ಕೋಮಲ ಹೆಣ್ಣು–ಜಟಿಲ ಸಮಸ್ಯೆಗಳನ್ನೂ ಬಿಡಿಸಿಯಾಳು:

ಇಂಥ ಒಂದು ಅಂಶವನ್ನು ನಾವು ಗಮನಿಸಿದಾಗ ಮಹಿಳೆಯ ಪಾತ್ರ ಹಿರಿದಾದ್ದು ಎಂದು ಒಪ್ಪಲೇಬೇಕು. ಅಷ್ಟೇ ಅಲ್ಲ. ಇಂದು ದೇಶದಲ್ಲಿ ಬಂದೊದಗಿರುವ ಅನೇಕ ಸಮಸ್ಯೆಗಳು ಮಹಿಳೆಯರಿಂದ ಸರಾಗವಾಗಿ ಪರಿಹಾರವಾಗಬಹುದು ಅನ್ನಿಸುತ್ತೆ. ಆದರೆ ಇವೆಲ್ಲಕ್ಕೂ ಮಹಿಳೆಯರ ತ್ಯಾಗ, ಧೈರ್ಯ ಅತ್ಯವಶ್ಯಕ.

ಉದಾಹರಣೆಗೆ ಆಹಾರ ಸಮಸ್ಯೆ. ತಾನೇ ಮನೆಯ ಸುತ್ತಲಿನ ಸ್ಥಳಗಳಲ್ಲಿ ತರಕಾರಿಯ ಗಿಡಗಳನ್ನು ಬೆಳೆಸಿ ಸತ್ವಪೂರ್ಣವಾದ ಆಹಾರವನ್ನು ರುಚಿಯಾಗಿ ತಾನೇ ಮಾಡಿಟ್ಟು ಮನೆಯ ಜನರನ್ನು ಆರೋಗ್ಯವಂತರನ್ನಾಗಿಸಬಹುದು. ಒಳ್ಳೆ ತರಕಾರಿಯಿಂದ ಬೇಯಿಸಿದ ಅಡಿಗೆಯನ್ನು ಅವರು ಉಂಡಂತೆಯೂ ಆಯಿತು. ಪ್ರತಿ ಮಹಿಳೆಯು ಹೀಗೆ ಮಾಡುವ ಪ್ರಯತ್ನ ಮಾಡಿದರೆ ಆಕೆ ದೇಶಕ್ಕೆ ಉಪಕಾರ ಮಾಡಿದಂತೆ. ಅಷ್ಟು ಪ್ರಮಾಣದಲ್ಲಿ ಧಾನ್ಯವನ್ನು ಉಳಿಸಿದಂತೆ. ದೇಹಕ್ಕೂ ಹಿತ, ದೇಶಕ್ಕೂ ಉಳಿತಾಯ.

ಮನೆಯ ಶೃಂಗಾರವೇ ಮನಸ್ಸಿನ ಶೃಂಗಾರ. ಮನೆಯ ಸುತ್ತಲಿನ ವಾತಾವರಣಕ್ಕೆ ಗಮನ ಕೊಡುವ ಆಕೆ ಮನೆಯ ಒಳಗೂ ತನ್ನ ಅಚ್ಚುಕಟ್ಟುತನವನ್ನು ಪ್ರದರ್ಶಿಸಬಹುದು. ಎಲ್ಲರಿಂದಲೂ ಆಕೆ ಮೆಚ್ಚಿಗೆ ಗಳಿಸಬಹುದು.

ಆಹಾರ ಕಲಬೆರಕೆಯ ಸಮಸ್ಯೆಗೆ ಆಕೆ ನೆರವಾಗಬಹುದು. ಆಗ ಇದೊಂದು ದೊಡ್ಡ ಸಮಸ್ಯೆಯೇ ಆಗಿ ಉಳಿಯದು. ತನ್ನ ಗಂಡ ಮಾಡುವ ಕೆಲಸ ಎಷ್ಟು ಭಾಗ ಶುದ್ಧವಾದುದು, ಎಷ್ಟು ಅಲ್ಲ ಎಂಬುದನ್ನು ಜಾಣೆಯಾದ ಮಹಿಳೆ ಬಹಳ ಬೇಗ ಗುರುತಿಸಬಲ್ಲಳು. ಆ ಬಗೆಯ ಸುಳಿವು ಕಂಡಾಗ ಆಕೆ ದಂಡಿಸಿ ಆ ಕೃತ್ಯವನ್ನು ನಿಲ್ಲಿಸಬಹುದು. ಅಥವಾ ಒಳ್ಳೆಯ ಕೆಲಸವಾಗಿದ್ದರೆ ಪ್ರೋತ್ಸಾಹಿಸಿ ಉತ್ತೇಜಿಸಬಹುದು.

ಲಂಚಗುಳಿತನಕ್ಕೆ ಸ್ತ್ರೀಯೂ ಕಾರಣಳು.

ಇನ್ನು ಸರಕಾರಿ ಅಧಿಕಾರಿಗಳು ಲಂಚಕೋರರಾಗಿರಬಹುದು. ಅವರ ಆ ಕೃತ್ಯಕ್ಕೆ ಬಹಳ ಭಾಗ ಮನೆಯ ವಾತಾವರಣ ಕೂಡ ಮುಖ್ಯ. ಮೂರು ಹೊತ್ತೂ ಅತೃಪ್ತಿಯ ಮನೋಭಾವ, ದುರಾಸೆ, ಎಲ್ಲ ವಸ್ತುಗಳು ತನ್ನದೇ ಆಗಬೇಕೆಂಬ ಆಸೆಯ ಅತಿರೇಕ ಇಂಥ ಗುಣ ಆ ಮನೆಯ ಗೃಹಿಣಿಗೆ ಹೆಚ್ಚಾಗಿದ್ದರೆ, ಅಂತಹ ಪ್ರಸಂಗಗಳಲ್ಲಿ ಹೇಗಾದರೂ ಮಾಡಿ ಹೆಂಡತಿಯನ್ನು ತೃಪ್ತಿಪಡಿಸಿ ಅವಳ ಹಸನ್ಮುಖವನ್ನು ಕಂಡು ನಲಿಯುವ ಆಸೆ ಇರುವ ಆ ಅಧಿಕಾರಿ ಬೇರೆ ಏನು ಮಾಡಬಲ್ಲ ? ಲಂಚಕ್ಕೆ ಕೈ ಒಡ್ಡಿ ಮನೆಗೆ ತಂದು ತುಂಬುವ ಚಪಲ·

ಈ ತೆರನಾದ ಮನೋಭಾವ ಹೊಂದಿ ದೇಶದ್ರೋಹವೆಸಗಲು ಆಗೋಚರಳಾಗಿ ಆತನ ಪತ್ನಿಯೂ ಕಾರಣಳೇ. ಆಗೋಚರಳಾಗಿ ನಿಂತು ಈ ಅಕೃತ್ಯಕ್ಕೆ ತಾನು ಪ್ರೋತ್ಸಾಹಿಸುತ್ತಿರುವೆ ಎಂದು ಒಂದು ಸಾರಿ ಕೂಡ ಆಕೆ ಯೋಚಿಸಲಾರಳು. ಆಕೆಯ ತಲೆಯಲ್ಲಿ ಈ ಯೋಚನೆ ಬಂದು ವಿವೇಚನಾಯುತಳಾಗಿ ಆಕೆ ಪರಿವರ್ತನೆ ಹೊಂದಿ ಹೊಸ ಬಾಳ್ವೆ ನಡೆಸಿದಾಗ ದೇಶದ ಸಮಸ್ಯೆಯಲ್ಲಿ ಆಕೆ ಕೂಡ ಉಪಕರಿಸಬಲ್ಲಳು. ಅಂಥಹವಳು ಪೂಜನೀಯಳೂ ಮತ್ತು ಮಾನ್ಯಳೂ ಹೌದು.

ವಿದ್ಯಾರ್ಥಿಗಳ ಪುಂಡು– ಮಾತೆ ತಗ್ಗಿಸಿಯಾಳು

ಇನ್ನು ವಿದ್ಯಾರ್ಥಿಗಳು ಕಾಲೇಜಿನಲ್ಲಿ ಸಂಪು ಹೂಡಿ ವಿನಾಕಾರಣ ತಮ್ಮ ಆಸ್ತಿಯನ್ನು ತಾವೇ ಹಾಳು ಮಾಡುತ್ತಾರೆ. ತಮ್ಮ ಮನೆಗೆ ತಾವೇ ಕಲ್ಲು ಒಗೆದುಕೊಂಡಂತೆ ಬೀದಿಯ ದೀಪ, ರೈಲು, ಕಾಲೇಜಿನ ಕಿಟಿಕಿ, ಗೋಡೆ, ಬಾಗಿಲು ಎಲ್ಲಕೂ ಕಲ್ಲು ತೂರಾಡುವ ಮನೋಭಾವ. ಇಂಥ ಪ್ರಸಂಗಗಳಿಂದ ಹೇಗೋ ತಪ್ಪಿಸಿಕೊಂಡು ಮನೆಗೆ ಓಡಿಬಂದು ಮನೆಯ ಹೆಂಗಳೆಯರ ಮುಂದೆ ತಾವು ಮಾಡಿಬಂದ ಮಹತ್ಕಾರ್ಯಕ್ಕಾಗಿ ಜಂಭ ಕೊಚ್ಚಿಕೊಂಡಾಗ ತಾಯಿ ಇವೆಲ್ಲಕ್ಕೂ ಪ್ರೋತ್ಸಾಹಿಸದೆ ಛೀಕಾರ ಹಾಕಬೇಕು. ಅವರಿಗೆ ವಿಚಾರಗಳು ಅರ್ಥವಾಗುವಂತೆ ಒತ್ತಿ ಹೇಳಬೇಕು. ಬಿಸಿರಕ್ತದ ಕಾವಿನಲ್ಲಿರುವ ಅವರ ಎಳೆ ಮನಸ್ಸಿಗೆ ದೇಶಪ್ರೇಮದ ಮನೋಭಾವ ಹುಟ್ಟಿಸಿ, ಇಂಥ ಕೆಲಸ ತಾವು ಮಾಡಬಾರದಾಗಿತ್ತು, ಬದಲಾಗಿ ಮಾಡುವವರನ್ನು ಅಕೃತ್ಯವೆಂದು ತಡೆಯಬಹುದಾಗಿತ್ತು, ಎಂದು ಅವರಲ್ಲಿ ಪೇಚಾಟ ಹುಟ್ಟುವಂತೆ ಬದಲಿಸಬಲ್ಲ ಶಕ್ತಿ ತಾಯಿಗಿದೆ.

ಅವರು ತಾವು ಮಾಡಿದ ಈ ಪರಿವರ್ತನೆಯನ್ನು ಧೈರ್ಯವಾಗಿ ಹೇಳಿಕೊಳ್ಳುವಂತಾಗಬೇಕು. ಅಂಥ ಪ್ರಸಂಗಗಳಲ್ಲಿ ಆಕೆಯನ್ನು ಮೆಚ್ಚಿ ಸನ್ಮಾನಿಸುವ ರೂಢಿ ಕೂಡ ನಮ್ಮ ದೇಶದಲ್ಲಿ ಬೆಳೆಯಬೇಕು. ಆಗಲೇ ನಮ್ಮ ಊರು, ನಮ್ಮ ದೇಶ. ನಮ್ಮ ನಾಡು ಭವ್ಯ.

ಮಕ್ಕಳ ಮನಸ್ಸಿನ ಮೇಲೆ ಆಕೆ ಎಂತಹ ಪ್ರಭಾವ ಬೀರಬಲ್ಲಳೆಂದರೆ, ಹಸಿರು ಗಿಡಗಳಲ್ಲಿ ಕಂಪಿನ ಉಸಿರನ್ನಡಗಿಸಿಟ್ಟು ಬಣ್ಣಬಣ್ಣಗಳ ಹೂವರಳಿಸಿ ನಲಿಸುವ ರವಿ ಕಿರಣದಂತೆ ಆಕೆ ತನ್ನ ಒಳ್ಳೆಯ ನಡತೆಯಿಂದ, ಮಾತುಗಳಿಂದ ಪ್ರಭಾವವನ್ನು ಬೀರಬಲ್ಲಳು.

"ಸ್ತ್ರೀ–ಪುರುಷರಲ್ಲಿರುವ ಪರಸ್ಪರ ವ್ಯತ್ಯಾಸಗಳು ವ್ಯಕ್ತವಾಗುವುದು ಕೇವಲ ಲೈಂಗಿಕ ಅವಯವಗಳ ರೂಪುರೇಖೆಗಳು, ಗರ್ಭಾಶಯದ ಅಸ್ತಿತ್ವ, ಹಾವಭಾವಗಳು, ಅವರು ಪಡೆಯುವ ಶಿಕ್ಷಣದ ವಿಧಾನ ಇವುಗಳಿಂದಲ್ಲ. ಅವು ಇವೆಲ್ಲಕ್ಕೂ ಮಿಗಿಲಾದ ಮೂಲಭೂತ ಪ್ರಕೃತಿಯಿಂದ ಸಂಭವಿಸುತ್ತವೆ. ಜೀವಕೋಶಗಳ ರಚನೆ ಹಾಗೂ ಜೀವಿಯ ಸರ್ವಸ್ವದಲ್ಲೂ ತುಂಬಿರುವ, ಅಂಡಾಶಯದ ಆಸರೆಯಲ್ಲಿ ಸಂರಕ್ಷಿಸಲ್ಪಟ್ಟಿರುವ ನಿರ್ದಿಷ್ಟ ರಾಸಾಯನಿಕ ವಸ್ತುಗಳಿಂದಲೂ ಈ ವ್ಯತ್ಯಾಸಗಳುದ್ಭವಿಸುತ್ತವೆ. ಈ ಮೂಲಭೂತ ವಿಚಾರಗಳನ್ನರಿಯದ ಸ್ತ್ರೀ ಸ್ವಾತಂತ್ರ್ಯವಾದಿಗಳು ಸ್ತ್ರೀ–ಪುರುಷರು ಒಂದೇ ರೀತಿಯಾದ ಶಿಕ್ಷಣ, ಒಂದೇ ತೆರನಾದ ಅಧಿಕಾರ ಹಾಗೂ ಹೊಂದಾಣಿಕೆಗಳನ್ನು ಹೊಂದಿರಬೇಕೆಂದು ವಾದಿಸುತ್ತಾರೆ. ಸ್ತ್ರೀ, ಸ್ವಾಭಾವಿಕವಾಗಿಯೇ ಪುರುಷನಿಂದ ಗಾಢವಾದ ಪ್ರತ್ಯೇಕತೆಯನ್ನು ಪಡೆದಿರುತ್ತಾಳೆ. ಆಕೆಯ ಜೀವಕೋಶಗಳ ಪ್ರತಿ ಧಾತುವೂ ಸಹ ಆಕೆಯ ಲಿಂಗ ಲಕ್ಷಣದ ಸಂಕೇತವಾಗಿರುತ್ತದೆ. ಅಂತೆಯೇ ಆಕೆಯ ಎಲ್ಲ ಅವಯವಗಳೂ, ಮಿಗಿಲಾಗಿ ಆಕೆಯ ನರವ್ಯೂಹವೂ ಸಹ."

—ಅಲೆಕ್ಸಿ ಕಾರೆಲ್.

[Gandhi's view of life–P 209]

ಯಂತ್ರದ ಇತಿಹಾಸ

— ಸರಿತಾ ಜ್ಞಾನಾನಂದ,

ಯಂತ್ರ—ಮಂತ್ರಗಳ ಇತಿಹಾಸ ತುಂಬಾ ಪ್ರಾಚೀನವಾದುದು ಎಂಬುದು, ಅವು ಜನರಲ್ಲಿ ಅತ್ಯಂತ ಪುರಾತನ ಕಾಲದಲ್ಲೂ ಪ್ರಚಲಿತವಾಗಿದ್ದು ಇಂದಿಗೂ ಅನೂಚಾನವಾಗಿ ನಡೆದುಬರುತ್ತಿರುವುದೇ ಸಾಕ್ಷಿ.

ರೋಗ ರುಜಿನಗಳಿಂದ ಮುಕ್ತಿ ಪಡೆಯಲು, ದುರಾದೃಷ್ಟ, ಅನಿಷ್ಟ, ಪೀಡೆ, ಭಯಗಳಿಂದ ಪಾರಾಗಿ ಸುಖ-ಸಂತೋಷಗಳನ್ನು ಅನುಭವಿಸಲು ಮಾನವ ಯಂತ್ರಗಳನ್ನು ಬಳಸುತ್ತಿದ್ದುದು ಭಾರತದ ಎಲ್ಲೆಕಟ್ಟಿನ ಹೊರಗೂ ಕಂಡುಬಂದಿದೆ. ಯಂತ್ರಕ್ಕೆ ಸಾಮಾನ್ಯ ಕಂಚು, ಹಿತ್ತಾಳೆ, ತಾಮ್ರ, ಬೆಳ್ಳಿ, ಚಿನ್ನ ಅಥವ ಐದು ಲೋಹಗಳ ಮಿಶ್ರಣವಾದ 'ಪಂಚಲೋಹ' ದ ತಗಡನ್ನು ಬಳಸಲಾಗುತ್ತದೆ. ಅದರ ಆಕಾರವೂ ಬೇರೆ ಬೇರೆಯ ತೆರನಾಗಿದ್ದು ರೇಖಾಗಣಿತದ ಆಕೃತಿಗಳನ್ನು ನೆನಪಿಗೆ ತರುವಂತಿರುತ್ತವೆ.... ಚತುರಸ್ರ, ಚಚ್ಚೌಕ, ವೃತ್ತ, ನಕ್ಷತ್ರಾಕಾರ ಇತ್ಯಾದಿ. ಈ ವಿಷಯಗಳನ್ನು ತಿಳಿಸುವ ವಿಭಾಗವನ್ನು ತಂತ್ರ ಶಾಸ್ತ್ರವೆಂದೂ, ಈ ವಿದ್ಯೆಯಲ್ಲಿ ಸಿದ್ಧಿ ಪಡೆದವರನ್ನು ಸಿದ್ಧರೆಂದು ಸಂಬೋಧಿಸುವುದೂ ವಾಡಿಕೆ. ಮಂತ್ರದ ಗುರಿ ಮಾನವನ ಕಲ್ಯಾಣ; ದೇವಿ-ದೇವತೆಗಳ ಆವಾಹನೆ. ತಂತ್ರದ ಗುರಿ ದೇವಿ-ದೇವತೆಗಳ ಪೂರ್ಣ ಸ್ವರೂಪದ ಪ್ರತೀಕದ ಸೃಷ್ಟಿ. ಇದರಲ್ಲಿಯ ಬೀಜಾಕ್ಷರಗಳು ಯಂತ್ರದ ಜೀವನಾಡಿ.

ಪ್ರತಿರೇಖೆಯೂ ಜೀವಂತ

"ಯಂತ್ರ" ದ ವ್ಯುತ್ಪತ್ತಿ 'ಯಮ್+ತ್+ರ' ಪ್ರಾಣದಲ್ಲಿ ಅಡಗಿರುವ ತೇಜಃಶಕ್ತಿಯೇ 'ಯಮ್' ಅದನ್ನು ಬಿಡುಗಡೆಮಾಡುವುದು 'ಯಂತ್ರ'. ಈ ಕಾರ್ಯ ಪ್ರತೀಕಗಳ ಮಾಧ್ಯಮದಿಂದ ನಡೆಯುತ್ತದೆ. ಈ ತಿಳಿವನ್ನು ಗಳಿಸಿದ ನಂತರ ಯಂತ್ರದ ಪ್ರತಿರೇಖೆಯೂ ಜೀವಂತವಾಗುತ್ತದೆ. ಬೇರೆ ಬೇರೆಯ ರೀತಿಯ ಪ್ರತಿಯೊಂದು ಕೋಣಕ್ಕೂ ರೇಖಾಗಣಿತದ ನಾನಾರೂಪಗಳ ಹೋಲಿಕೆಯ ಯಂತ್ರಗಳಿಗೂ ಬೇರೆ ಬೇರೆ ಅರ್ಥಗಳು, ಪೂಜ್ಯರೂಪಗಳು ಮೂಡಿಬರು

ಯಂತ್ರ ಧಾರಣೆ ಇತ್ತೀಚೆಗೆ ಹೆಚ್ಚು ಜನಪ್ರಿ
ಯವಾಗುತ್ತಿದೆ. ವಿಜ್ಞಾನದ ಮುನ್ನಡೆಯು ಯಂತ್ರದ
ಬಳಕೆಯನ್ನ ಕಡಿಮೆ ಮಾಡಿಲ್ಲ. ಮಾನಸಿಕ ವೈಪರೀತ್ಯ
ಗಳಿಗೆ, ರೋಗ ರುಜಿನಗಳಿಗೆ ಅದರ ಮರೆಹೋಗುತ್ತಾರೆ.
ಅದರ ಉಪಯೋಗದಲ್ಲಿ ನಮ್ಮ ನಂಬಿಕೆ ದೃಢವಾಗು
ತ್ತಿದೆ. ಇದರ ಇತಿಹಾಸ ಕುತೂಹಲಕಾರಿಯಾಗಿದೆ

ತ್ತವೆ. ಲೋಹದ ಮೇಲೆಯೇ ಯಂತ್ರಗಳನ್ನು ಕೊರೆಯಬೇಕೆಂಬ ನಿಯಮವೇನೂ ಇಲ್ಲ. ಯಾವ ವಸ್ತುವಿನ ಮೇಲಾದರೂ ಯಂತ್ರ ಲೇಪಿಸಲ್ಪಟ್ಟರೆ ದೇವಿ-ದೇವತೆಯರ ಪೂರ್ಣರೂಪ ಚಿತ್ರಿಸಿದಂತೆ.

ಪ್ರತಿಮಾ ಪೂಜೆಯಲ್ಲಿ ದೇವಿ-ದೇವತೆಯರ ರೂಪು ನಿರ್ಣಯಕ್ಕೆ ಆದ್ಯತೆ. ರೂಪು ಕಲ್ಪನೆಯಿಲ್ಲದೆ ಪ್ರತಿಮೆಯ ಆವಿರ್ಭಾವವೇ ಸಾಧ್ಯವಿಲ್ಲ. ರೂಪ ಕಲ್ಪನೆ ಹೊರ ಅಲಂಕಾರ; ಒಳ ಅರ್ಥವನ್ನು ಹೊರ ಗಿಡಲು ಅನುಸರಿಸುವ ಮಾಧ್ಯಮ. ಆದರೆ ಇದೇ ಅತಿಯಾದಾಗ ಮುಖ್ಯಾರ್ಥವೇ ಎಟಕವಂತಾಗಿ ಅರ್ಥಹೀನವೆಂದೆನಿಸುವುದೂ ಸಾಧ್ಯ. ಯಂತ್ರದಲ್ಲಿ ಈ ಅಪಾಯಕ್ಕೆ ಎಡೆಯಿಲ್ಲ. ಬಹಿರಾಡಂಬರಕ್ಕೆ ಅವಕಾಶವೇ ಇಲ್ಲ. ದೇವಾಲಯ ಮುಂತಾದೆಡೆಗಳಲ್ಲಿ ರೂಪ ಕಲ್ಪನೆ ಮಾಡಿದರೂ ಪೀಠದಲ್ಲಿ ಹೊರಕ್ಕೆ ಗೋಚರವಾಗದಂತೆ ಯಂತ್ರಸ್ಥಾಪನೆ ನಡೆದರೆ ಮಾತ್ರ ಮೂರ್ತಿಯಲ್ಲಿ ಚೈತನ್ಯ ಮೂಡುವುದೆಂಬ ನಿಯಮವು ಗಮನಾರ್ಹ. ಪ್ರತಿ ದೇವ–ದೇವತೆಗೂ ನಿಯಮಿತ ಯಂತ್ರವಿದೆ ಎಂದರೆ ಯಂತ್ರದ ಮಹತ್ತನ್ನು ಆಗಮ ಶಾಸ್ತ್ರಗಳು ಅರಿತಿವೆ ಎಂಬುದು ಸ್ಪಷ್ಟವಾಗುವುದಿಲ್ಲವೇ?

ಉಗಮ

ಪೂಜಾ ಸಾಮಗ್ರಿ, ಮಂಗಳ ದ್ರವ್ಯ, ಪೂಜಾ ಪದ್ಧತಿ ಇವು ಮೂರ್ತಿ ಪೂಜೆಯಲ್ಲಿ ಅವಶ್ಯಕವಾಗಿರುವಂತೆಯೇ ಯಂತ್ರ ಪೂಜೆಯಲ್ಲೂ ಅವಶ್ಯಕ. ಯಂತ್ರ ಪೂಜೆಯಲ್ಲಿ ಎರಡು ಮಾರ್ಗಗಳಿವೆ—ವಾಮಾಚಾರ, ದಕ್ಷಿಣಾಚಾರ. ದಕ್ಷಿಣಾಚಾರ ಪದ್ಧತಿ ಸಾತ್ವಿಕವಾದುದು. ಆಚಾರ್ಯ ಶಂಕರ, ಜಕ್ಕಣಾಚಾರ್ಯರು ಮುಂತಾದವರು ದಕ್ಷಿಣಾಚಾರದ ಸಾಂಪ್ರದಾಯ ಅನುಸರಿಸಿದವರು [ಜಕ್ಕಣಾಚಾರ್ಯ ಎಂಬುದು ದಕ್ಷಿಣಾಚಾರ್ಯ ಎಂಬ ಬಿರುದೆಂದು! ಹೇಳಿದ ಡಾ॥. ಎಂ. ಶೇಷಾದ್ರಿ ಅವರ ಮಾತನ್ನು ಇಲ್ಲಿ ಸ್ಮರಿಸಬಹುದು.] ಕಾಳಿದಾಸ ಮುಂತಾದವರು ವಾಮಾಚಾರ ಅನುಸರಿಸಿದವರು.

ಯಂತ್ರಪೂಜೆಯ ಉಗಮ ಎಂದಿನದು ಎಂಬುದಕ್ಕೆ ನಿಖರವಾದ - ವಿವರಣೆ ನೀಡಲು ಸಾಧ್ಯವಿಲ್ಲ. ಯಂತ್ರಪೂಜೆಯ ವಿವರಣೆಗಳು ಪ್ರಾಗೈತಿಹಾಸಿಕ ಕಾಲ, ವೈದಿಕ ಕಾಲ, ಜೈನ-ಬೌದ್ಧ ಕಾಲ ಹೀಗೆ ಎಲ್ಲ ಕಾಲಗಳಲ್ಲೂ ದೊರೆಯುತ್ತದೆ. ಮಹಂಜದಾರೋವಿನಲ್ಲೂ ಯಂತ್ರದ ಮಾದರಿಗಳು ದೊರೆತಿವೆ. ಪ್ರತಿಯೊಂದು ಕಾಲದಲ್ಲೂ ಯಂತ್ರದ ದೈವೀಶಕ್ತಿ ಅಂಗೀಕರಿಸಿ ಅದು ಪರಮಾತ್ಮನ ಪ್ರತಿರೂಪವೆಂದೇ ಸ್ವೀಕರಿಸಲಾಗುತ್ತಿತ್ತು ಎಂಬುದು ಗಮನಾರ್ಹ. ಮೂರ್ತಿ ಪೂಜೆಗಿಂತಲೂ ಯಂತ್ರಪೂಜೆ ಭಾರತದಲ್ಲಿ ಪ್ರಾಚೀನವಾದುದು ಎಂಬುವನ್ನು ತೀರ್ಮಾನಿಸಲಾಗಿದೆ. ಎಂದರೆ ಯಂತ್ರ ಇಂದಿನ ಮೂರ್ತಿಯ ಪ್ರಾರಂಭಿಕ ರೂಪವೆಂದರೂ ಸರಿಯೇ. ಮೂಲ ಪಂಚಭೂತಗಳಿಂದ ಸೃಷ್ಟಿ, ಸ್ಥಿತಿ, ಲಯ, ತಿರೋಧಾನ ಮತ್ತು ಅನುಗ್ರಹಗಳೆಂಬ ಪಂಚಕೃತ್ಯಗಳೂ ಅವುಗಳ ಕಾರಣೀಭೂತರಾದ ಇಚ್ಛಾಶಕ್ತಿ, ಆದಿ ಶಕ್ತಿ, ಪರಾಶಕ್ತಿ ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳೆಂಬ ಪಂಚಶಕ್ತಿಗಳೂ, ಪಂಚ ದೇವತೆಗಳಾಗಿ ಮೂಡಿಬಂದವರು ತ್ರಿಮೂರ್ತಿಗಳಾಗಿ ಪರಿವರ್ತಿತರಾಗಿ ಕೊನೆಗೆ ಶಿವ-ವಿಷ್ಣುಗಳಾಗಿ ಇಬ್ಬರಾಗಿ ಉಳಿದಕೊಂಡವರೂ, ಪುರಾಣ ಕಾಲದಲ್ಲಿ ಹುಟ್ಟಿದ ಅನೇಕ ದೇವ–ದೇವತೆಯರೂ ಯಂತ್ರಗಳಲ್ಲಿ ಅಡಗಿರುವರೇ. ವೈದಿಕ ಯುಗದಲ್ಲಿ ಇಂದ್ರ, ಮಿತ್ರ, ರುದ್ರ, ವಿಷ್ಣು, ಅಜ, ವರುಣ, ದ್ಯಾವಾ ಪೃಥ್ವಿ, ವಿಶ್ವಕರ್ಮ, ಗಾಯತ್ರಿ ಇವರೆಲ್ಲರೂ ಈ ಯಂತ್ರಗಳಲ್ಲಿ ಸಮೂಹಿತರಾಗಿರುವರು.

ಆಕಾರ—ಸಂಕೇತಗಳು

ಯಂತ್ರಗಳಲ್ಲಿ ಬಹುವಾಗಿ ಕಂಡುಬರುವ ತ್ರಿಕೋಣ ಹೇಗೆ ದೇವ–ದೇವತೆಯರ ಸಂಕೇತವಾಯಿತೆಂಬುದು ಇನ್ನೂ ತಿಳಿಯಬೇಕಾಗಿದೆ. ಯಜ್ಞದ ಅಗ್ನಿಗೆ ತ್ರಿಕೋಣವೇ ಅಧಿದೇವತೆ ಎಂದು ಹೇಳಲಾಗುತ್ತಿದೆ. ಇದು ಕಾರಣವಾಗಿರಬಹುದು. ಅಥವ ಗಾಯಿತ್ರಿ ಅಥವ ವಿಶ್ವಕರ್ಮನ ಐದುಮುಖಗಳನ್ನು ನಕ್ಷತ್ರಾಕಾರದಲ್ಲಿ ತೋರಿದಾಗ ಪುಷ್ಪವಾಗಿ ಕಾಣುವ ತ್ರಿಕೋಣಗಳು ಇದಕ್ಕೆ ಕಾರಣವಾಗಬಹುದು. ಶಕ್ತಿಯ ಉಪಾಸಕರೂ ತ್ರಿಕೋಣ ಮಾಧ್ಯಮದಿಂದ ತ್ರಿತತ್ವವನ್ನು ಪೂಜಿಸುತ್ತಿದ್ದರು. ಅದೇ ತ್ರಿಕೋಣ ಕಲ್ಪನೆಗೆ ಮೂಲವಾಗಿರಬಹುದು. ಕ್ರಿ. ಪೂ. ಮೂರು ಸಾವಿರ ವರ್ಷಗಳ ಮೊದಲು ಚೀಣಾದ ಮೊದಲ ಚಕ್ರೇಶ ಫೂಹ್-ಸಿನ ಕಾಲದಲ್ಲಿ ತೇಜಸ್ಸಿನ ಪ್ರತೀಕವಾಗ ತ್ರಿಕೋಣದ 'ಇನ್ನೂಯಾ' ಪೂಜೆ ನಡೆಸುತ್ತಿದ್ದರು. ಅಂತೂ ತ್ರಿಕೋಣ ಎಲ್ಲಾ ಯಂತ್ರಗಳಲ್ಲೂ ಮುಖ್ಯವಾದುದು.

ಯಜ್ಞಗಳಲ್ಲಿ ಚತುಷ್ಕೋಣ ದಕ್ಷತನಾವೇದಿಯ ರೂಪದಲ್ಲಿ ಅದಿತಿ ದೇವಿ [ದುರ್ಗೆ] ಯ ಪ್ರತೀಕವೆಂದು ಸ್ವೀಕರಿಸಲಾಗುತ್ತಿತ್ತು. ದಕ್ಷತನಾವೇದಿ ಯಂತ್ರದ ದೇವಿಗೆ ನಾಲ್ಕು ಶಕ್ತಿಗಳಿರುವಂತೆ ಪ್ರಚಲಿತ ನಂಬಿಕೆ — ಸೂರ್ಯ, ಅಗ್ನಿ, ಜಲ, ಪೃಥ್ವಿ. ಸಮಚತುಷ್ಕೋಣ ಯಂತ್ರ ಭೂ ತತ್ವದ ಪ್ರತೀಕವೂ ಹೌದು.

ಐದು ಕೋಣಗಳ ಯಂತ್ರ ಪಂಚಶಕ್ತಿಗಳ ಸಂಕೇತವಾಗಿರುವಂತೆಯೇ ಗಾಯಿತ್ರಿ ವಿಶ್ವಕರ್ಮ ಯಂತ್ರಗಳಲ್ಲಿ ಕಂಡುಬರುತ್ತದೆ. ಆರು ಕೋಣಗಳ ಯಂತ್ರದಲ್ಲಿ ಪಂಚಶಕ್ತಿಗಳೊಂದಿಗೆ ಮೂಲಪ್ರಕೃತಿಯೂ ಸೇರಿಸಲ್ಪಟ್ಟಿದೆ. ಆದ್ದರಿಂದ ಇದು ಆರು ಶಕ್ತಿಗಳನ್ನು ಸಮನ್ವಯಗೊಳಿಸಿದ ಯಂತ್ರ. ಬ್ರಹ್ಮ ವಿಷ್ಣು, ಶಿವ, ಸೂರ್ಯ, ಗಣೇಶ, ದುರ್ಗೆ ಇವರೆಲ್ಲರಿಗೂ ಬೇರೆ ಬೇರೆಯಾದ ಚಕ್ರಗಳೂ ಉಂಟು. ಶಾಕ್ತಯರು ಶ್ರೀಯಂತ್ರ ಹಾಗೂ ಶ್ರೀವಿದ್ಯೆ ಅತ್ಯಂತ ಶ್ರೇಷ್ಠವಾದುದೆಂದು ನಂಬುತ್ತಾರೆ. [ಶ್ರೀಚಕ್ರರಾಜ ಉದಿತಃ ಪರದೇವತಾಯ]

ಅಧೋಮುಖಿ ತ್ರಿಕೋಣ ಸ್ತ್ರೀತ್ವದ ಸಂಕೇತ. ಊರ್ಧ್ವಮುಖಿ ತ್ರಿಕೋಣ ಪುರುಷತ್ವದ ಸಂಕೇತ ಪ್ರಕೃತಿ–ಪುರುಷರ ಸಮಾಗಮವೇ ಸೃಷ್ಟಿ. ಆದ್ದರಿಂದ ಷಟ್ಕೋಣ ಯಂತ್ರದಲ್ಲಿ ಅಧೋಮುಖೀ ಸ್ತ್ರೀತ್ರಿಕೋಣ ಮತ್ತು ಊರ್ಧ್ವಮುಖೀ ಪುರುಷ

> ನೋಟಕವರು ಧರ್ಮ ದೇವತೆಯ ರೂಪ
> ಬಹುಕಷ್ಟ ಅರಿಯಲವರ ನಿಜ ಸ್ವರೂಪ
> ಹೇಳುವುದೆಲ್ಲಾ ನೀತಿ ನಿಯಮದ ತತ್ವ
> ಯಾರು ಬಲ್ಲರವರ ಪೈಶಾಚಿಕತ್ವ
>
> — ಕೆಹೆಚ್.

ತ್ರಿಕೋಣ ಸಂಯೋಗ ನಡೆದಿರುತ್ತದೆ. ಆದ್ದರಿಂದ ಇದು ಅರ್ಧನಾರೀಶ್ವರನ ಸ್ವರೂಪ ಕಲ್ಪನೆಯ ಮೂಲ ಸಂಕೇತವೆಂದಾದರೂ ಭಾವಿಸಬಹುದು. ಆದ್ದರಿಂದ ಈ ಚಕ್ರ ತಾಯಿಯೂ ಹೌದು; ತಂದೆಯೂ ಹೌದು. [ಜಗಜ್ಜನನ್ಯೈ ಜಗದೇಕ ಪಿತ್ರೆ]

ಮೂರು ತ್ರಿಕೋಣಗಳು ಸಮಾವೇಶಗೊಂಡರೇ ದುರ್ಗಾ ಯಂತ್ರ ರೂಪುಗೊಳ್ಳುತ್ತದೆ. ಇದರಲ್ಲಿ ಒಂಬತ್ತು ಕೋಣಗಳು ಪ್ರತಿಕೋಣದಲ್ಲೂ ಶಕ್ತಿ ಒಂದೊಂದು ರೂಪಿನಿಂದ ಆವಾಹನೆಯಾಗಿರುತ್ತಾಳೆ. ಜಗದ್ಧಾತ್ರಿ, ಮಾಹೇಶ್ವರೀ, ವೈಷ್ಣವಿ, ಕೌಮಾರಿ, ವಾರಾಹೀ, ನಾರಸಿಂಹ, ಬ್ರಾಹ್ಮಿ, ಚಾಮುಂಡಿ; ದಶಭುಜೆ ಮತ್ತು ಮಹಿಷಾಸುರ ಮರ್ಧಿನಿ. ಮೂರು ತ್ರಿಕೋಣಗಳನ್ನೂ ಮೂರು ವೃತ್ತಗಳು ಆವರಿಸುತ್ತವೆ. ಅವು ಜ್ಞಾನ ವಿಜ್ಞಾನ ಮತ್ತು ಆನಂದದ ಪ್ರತೀಕ. ನಂತರದ ಎಂಟು ಕಮಲ ದಳಗಳು, ಅಷ್ಟ ಶಕ್ತಿಗಳು—ಜಯ, ವಿಜಯ, ಕೀರ್ತಿ ಪ್ರೀತಿ, ಪ್ರಭಾ, ಶ್ರದ್ಧಾ, ಶೃತಿ ಮತ್ತು ಮೇಧಾ. ಇದನ್ನೇ ಅಣಿಮಾದಿ ಅಷ್ಟಸಿದ್ಧಿಗಳು ಎಂದು ಹೇಳುವುದೂ ಉಂಟು. ಇದರ ನಾಲ್ಕು ಅಂಚುಗಳಲ್ಲಿ ಮೂರು ರೇಖೆಗಳಿಂದ ಬಿಡಿಸಿದ ಚತುಷ್ಕೋಣಗಳು. ಮೂರು ರೇಖೆಗಳು ಭೂತ – ಭವಿಷ್ಯ—ವರ್ತಮಾನಗಳ ಪ್ರತೀಕ.

ದೇವಿ ಯಂತ್ರ ಮತ್ತು ದೇವತೆಯ ಯಂತ್ರ ರೇಖೆಗಳಲ್ಲಿ ಅಂತರವಿರದು. ಈ ಅಭಿನ್ನತೆ ದೇವತೆಗಳಂತೆ ದೇವಿಯರೂ ಸರ್ವ ಶಕ್ತಿ ಸಮೂಹಿತರು

ಎಂಬುದರ ಸೂಚನೆ ಎಂದು ಹೇಳಲಾಗುತ್ತದೆ.

[ಸರ್ವಶಕ್ತಿ ಸ್ವರೂಪಾತ್ಮಾಂಗಃ ಸರ್ವದೇವ
ಮಯೀತನುಃ

ವಿಶ್ವಾದ್ಯಂತ ವಿಸ್ತರಿಸಿದೆ

ಮಾತೃದೇವಿಯ ಪೂಜೆಗಾಗಿ ಒಂದೇ ರೀತಿಯ ಯಂತ್ರದ ಬಳಿಗೆ ಅನೇಕ ಭಿನ್ನ ಬುಡಕಟ್ಟಿನವರಲ್ಲೂ ಪ್ರಚಲಿತವಾಗಿದ್ದುದು ಕಂಡು ಬಂದಿದೆ. ಇದರಿಂದ ಒಂದೇ ಸಾಮಾಜಿಕ ಕಟ್ಟುಪಾಡು, ನಿಯಮಗಳನ್ನು ಅನುಸರಿಸುತ್ತಿದ್ದು ನಾಗರೀಕತೆಗೆ ಮೂಲವಾಗಿದ್ದ ಒಂದು ಬುಡಕಟ್ಟಿನಿಂದಲೇ ಈ ಎಲ್ಲವೂ ವಿಶ್ವದಾದ್ಯಂತ ಹರಡಿದೆ ಎಂಬ ನಂಬಿಕೆ ಬಲಪಡಿಸುತ್ತದೆ. ದೇವಿ ಯಂತ್ರದ ರೂಪದಲ್ಲಿ ಪ್ರಚಲಿತವಾಗಿರುವ ದುರ್ಗಾ ಯಂತ್ರ [ಪದ್ಮಯಂತ್ರ] ತ್ರಿಕೋಣಾ, ಚತುಷ್ಕೋಣ, ಪಂಚಕೋಣಯಂತ್ರಗಳು ಬೆಲಿಟೇನಿನ ಪ್ರಾಚೀನ ಕಲ್ಲು ಬಂಡೆಗಳಮೇಲೆ ಕೆತ್ತಿರುವುದು ದೊರೆತಿದೆ. ಇದೇ ರೀತಿಯವು ಏಷ್ಯ ಮೈನರಿನಲ್ಲೂ ದೊರೆಕಿವೆ.

ದೇವಿಪೂಜೆಗಾಗಿ ಯಂತ್ರಾಸನ ಅನಿವಾರ್ಯ. ಚಿನ್ನ, ಬೆಳ್ಳಿ, ಕಂಚು, ತಾಮ್ರ ಅಥವ ಪಂಚಲೋಹದ ಪಾತ್ರೆ ಅಥವ ಮಣ್ಣಿನ ಪಾತ್ರೆ ಪೂಜೆಗೆ ಬಳಸಲಾಗುತ್ತದೆ. ಕೆಂಪು ಚಂದನದಿಂದ ದೇವಿಯನು ಅಲಂಕರಿಸುವುದು ಪದ್ಧತಿ. ಎಲ್ಲ ಪ್ರಜೆಗಳಲ್ಲೂ ಮುಖ್ಯ ಅನುಷ್ಠಾನಗಳಲ್ಲೂ ಯಜ್ಞಕ್ರಿಯೆ, ಕುಂಡಗಳಲ್ಲೂ ದೇವೀ ಪ್ರತೀಕದ ಯಂತ್ರಗಳ ಸ್ಥಾಪನೆಗೆ ಆದ್ಯತೆ ಇದೆ. ಶಕ್ತಿ ಉಪಾಸನೆಯಲ್ಲಿ ತಮ್ಮಲ್ಲಿ ತಾವೇ ಶಕ್ತಿಯನ್ನು ಆರೋಪಿಸಿಕೊಳ್ಳುವ ಉಪಾಸಕ ಕೆಂಪು ಗಂಧವನ್ನು ತ್ರಿಕೋಣರೂಪವಾಗಿ ಧರಿಸಿ ಪೂಜೆಯ ನಂತರ ಯಂತ್ರವೇ ಕೇಂದ್ರ ಬಿಂದುವಾಗಿರಿಸಿಕೊಂಡು ತ್ರಿಕೋಣ, ಚತುಷ್ಕೋಣ ಅಥವ ವೃತ್ತಾಕಾರದ ಪ್ರದಕ್ಷಣೇ ನಡೆಸುತ್ತಾನೆ. ತನ್ನನ್ನು ತಾನು ಯಂತ್ರಮಯಗೊಳಿಸಿಕೊಂಡು, ದೇವೀಮಯವಾಗಿಸಿಕೊಳ್ಳುವ [ಅಹಂ ಬ್ರಹ್ಮಾಸ್ಮಿ] ಪೂಜಾ ಪದ್ಧತಿ ಇದು.

ಕೇವಲ ಬಾಹ್ಯಪ್ರತೀಕವಲ್ಲ

ಯಂತ್ರ ಬಾಹ್ಯ ಪ್ರತೀಕವಲ್ಲ. ಮಾನವನ ಅಂತರಂಗದಲ್ಲೂ ಇದೆ ಎಂಬುದು ತಂತ್ರಶಾಸ್ತ್ರದ ಹೇಳಿಕೆ. ಈ ವಿಭಾಗದಲ್ಲಿ ತಂತ್ರಶಾಸ್ತ್ರದ ಆಧುನಿಕ ವೈದ್ಯಶಾಸ್ತ್ರಕ್ಕೆ ತುಂಬ ಸನ್ನಿಹಿತವಾಗುತ್ತದೆ. ಮಾನವನ ದೇಹದಲ್ಲಿ ಶಕ್ತಿಕೇಂದ್ರಗಳಿವೆ ಎಂದು ತಂತ್ರಶಾಸ್ತ್ರ ಹೇಳುತ್ತದೆ. ಅವುಗಳಲ್ಲಿ ಮುಖ್ಯವಾದವು ಆರು. ಅವೇ ಷಟ್‌ಚಕ್ರಗಳು. ಅದೇ ರೀತಿ ವೈದ್ಯಶಾಸ್ತ್ರವು ಎಂಡೋಕ್ರೇನ್ ಗ್ರಂಥಿಗಳ ಪ್ರಾಮುಖ್ಯತೆ ಗುರುತಿಸಿವೆ. ಚಕ್ರದ ಸ್ಥಳಗಳೂ ಎಂಡೋಕ್ರೇನ್ ಗ್ರಂಥಿಗಳ ಸ್ಥಳಗಳೂ ಹೊಂದಿಕೊಳ್ಳುತ್ತವೆ. [ಚಕ್ರದ ವಿವರಗಳೂ ಹಾಗೂ ಎಂಡೋಕ್ರೇನ್ ಗ್ರಂಥಿಗಳ ವಿವರಗಳನ್ನು ನನ್ನ "ಪರಿಪೂರ್ಣ" ಕಾದಂಬರಿಯ ವೈಜ್ಞಾನಿಕ ಹಿನ್ನೆಲೆಯಲ್ಲಿ ಸ್ಪಷ್ಟವಟ್ಟಿಗೆ ವಿವೇಚಿಸಿದ್ದೇನೆ. ಕುತೂಹಲವಿದ್ದವರೂ ಅದನ್ನು ಪರಿಶೀಲಿಸಬಹುದು.] ಆದ್ದರಿಂದ ಈ ವಿದ್ಯೆ ಕೇವಲ ಹೊರ ಬೂಟಾಟಿಕೆಗಿಂತಲೂ ಅಂತರಂಗವನ್ನು ತಿಳಿಯುವ ಮುಖ್ಯ ಸಾಧನವಾಗಿತ್ತು ಎಂಬುದು ಸ್ಪಷ್ಟ

ಯೋಗಿಯಾದವನು ಯೋಗಾಭ್ಯಾಸದಿಂದ, ಸಾಧನೆಯಿಂದ, ಧ್ಯಾನದಿಂದ, ಸುಷುಪ್ತಿಯಿಂದ ಎಚ್ಚರಗೊಂಡು ತನ್ನ ಶಕ್ತಿಕೇಂದ್ರಗಳನ್ನು ಉದ್ದೀಪನಗೊಳಿಸಿ ದೇಹ–ಮನಗಳನ್ನು ಸಮತೋಲದಲ್ಲಿರಿಸಿ ಇಹದಲ್ಲಿ ಬಾಳ ಮುಕ್ತಿ ಸಾಧಿಸುತ್ತಾನೆ.

ಜಾಗರ್ತಿ ಯದಿ ಸಾದೇವಿ ಬಹುಭಿಃ
ಪುಣ್ಯಸಂಚವತಾಃ ।
ತದಾ ಪ್ರಸಾದ ಮಾಯಾತಿ ಮಂತ್ರಯಂ
ತಾರ್ಚ ನಾವಿಕವು ॥

ಪಂಚಾಂಮೃತ

— ವಾಣಿ

ಮೋಡವನ್ನು ಸೀಳಿಕೊಂಡು ಬೆಳಗಿನ ಎಳೆ ಬಿಸಿಲು ತೂರಿ ಬರಲು ಯತ್ನಿಸುತ್ತಿತ್ತು. ಆದರೆ ಮೋಡಗಳದೇ ಮೇಲುಗೈ. ಬಿಸಿಲನ್ನು ಹೊರಕ್ಕೆ ಬಿಡದೆ ಆಟವಾಡಿಸುತ್ತಿತ್ತು. ಸುತ್ತಲೂ ತಂಗಾಳಿಯ ಸುತ್ತಾಟ. ಮೈಗೆ ಹಿತವೆನಿಸುವ, ಮೈಗೆ ಆಹ್ಲಾದ ನೀಡುವ ಸಮಯ.

ರಾಜು ಕಾಂಪೌಂಡು ಗೋಡೆಯ ಮೇಲೆ ಕಾಲು ಅಲ್ಲಾಡಿಸುತ್ತ ಕುಳಿತಿದ್ದ. ಮುಖದ ಉದ್ದಗಲಕ್ಕೂ ನಗು ತುಂಬಿತ್ತು. ನಗು ಹೆಚ್ಚಿದಂತೆ ಕಾಲು ಅಲ್ಲಾಡಿಸುವ ವೇಗವೂ ಹೆಚ್ಚಿತ್ತು.

ಯಾವ ಸಂತೋಷ ಅವನ ಹೃದಯವನ್ನು ಮುಟ್ಟಿತ್ತೊ ? ತನ್ನ ಸುತ್ತಲಿನ ಅರಿವೇ ಮರೆತಂತಿತ್ತು.

'ರಾಜಾ...... ಕಾಫಿ ತಗೋಳೋ ?'

ಒಳಗಿನಿಂದ ತಾಯಿ ಕೂಗಿದರು. ಮಗ ಕೂಗಿಗೆ ಓಗೊಡದಾಗ ತಾಯಿ ಮತ್ತೆ ಕೂಗಿದರು. ಈ ಸಲ ಧ್ವನಿ ಜೋರಾಗಿತ್ತು.

'ಬಿಡಮ್ಮ ಹೊಟ್ಟೆ ಹಸಿದರೆ ತಾನೇ. ಬರ್ತಾನೆ. ಬೀದೀಲಿ ಕೂತಿರೋನ್ನ ಎಷ್ಟುಸಲ ಕೂಗೋದು ?'

ಸತ್ಯ ಕಾಫಿ ಲೋಟ ತುಟಿಗೆ ತಗುಲಿಸುತ್ತಾ ನುಡಿದ.

'ಇಲ್ಲಿಂದ ಕೂಗಿದರೆ ಕೇಳಲ್ಲ. ಹಿಂದಿನಿಂದ ಹೋಗಿ ಷರಟು ಎಳೆದರೆ ತಾನೇ ಓಡಿ ಬರ್ತಾನೆ.'

ಸುಬ್ಬುವಿನ ಸಲಹೆ.

ನಾನು ಅಲ್ಲೇ ಹೋಗಿ ಕರೀತೀನಿ.

ವಿಠಲ ಎದ್ದುನಿಂತ. ಎಲ್ಲರಿಗಿಂತ ಕಿರಿಯವನಾದ ಮರಿ ಮೌನವಾಗಿ ಪಿಳಿಪಿಳಿ ಕಣ್ಣು ಅರಳಿಸಿ ಎಲ್ಲರನ್ನೂ ನೋಡಿದ.

'ಇರ್ಲಿ ಬಿಡು, ಬರ್ತಾನೆ. ಕರೆಯೋದು ಏಕೆ ?'

ತಾಯಿ ಕಾವೇರಿ ಚುಟುಕಾಗಿ ಹೇಳಿದಳು. ಆಕೆ ಬೇಕೆಂದೇ ಉದಾಸೀನದ ಮುಖವಾಡ ಹಾಕಿಕೊಂಡಂತಿತ್ತು.

ಊಟದ ಹೊತ್ತಿನಲ್ಲೂ ಅಷ್ಟೆ, ರಾಜನಿಗೆ ಇನ್ನೊಂದು ಸಲ ಬೇಕೆ ಎಂದು ಕೇಳಿದರೆ ಹಿಂದಿನಿಂದಲೇ,

"ಅಮ್ಮನಿಗೆ ರಾಜನ ಮೇಲೆ ಅದೆಷ್ಟು ಪ್ರೀತಿ ? ಅವನಿಗೆ ಎಷ್ಟು ಉಪಚಾರ ಮಾಡಿದರೂ ಸಾಲದು!"

ಎಂಬ ಟೀಕೆ ಮಕ್ಕಳಿಂದ ಬರುವುದಿತ್ತು.

ಹೆಣ್ಣು ಮಕ್ಕಳ ಶಾಲೆಯಲ್ಲಿ ಉಪಾಧ್ಯಾಯಿನಿಯಾಗಿದ್ದ ಕಾವೇರಿಗೆ ಬೆಳಗಿನ ಹೊತ್ತು ನಿಂತು ಮಾತನಾಡುವಷ್ಟು ವ್ಯವಧಾನವಾದರೂ ಎಲ್ಲಿ ಬರಬೇಕು ?

ಹಾಸಿಗೆಯಿಂದ ಏಳುವಾಗಲೇ ಅವಸರ.

ಕಾಫಿ ಮಾಡುವಾಗಲೇ ಇನ್ನೊಂದು ಒಲೆ ಹಚ್ಚಿ ಅಡಿಗೆಗೆ ಇಡಬೇಕು. ಮಕ್ಕಳಿಗೆಲ್ಲ ಬಡಿಸಿ ತಾನೂ ಊಟಮಾಡಿಕೊಂಡು ಶಾಲೆಗೆ ಓಡಬೇಕು.

ಹುಡುಗರೂ ದಡಬಡನೆ ಉಂಡು ಬಟ್ಟೆ ಹಾಕಿಕೊಂಡು ಸ್ಕೂಲು ಕಾಲೇಜುಗಳಿಗೆ ಹೋಗುವರು. ಮನೆ ಎಂಡ ಮೇಲೆ ಹತ್ತು ಹಲವಾರು ಕೆಲಸ. ಎಲ್ಲ ಮುಗಿಸಿ ಬಾಗಿಲಿಗೆ ಬೀಗ ಹಾಕಿಕೊಂಡು ಹೊರಡುವ ವೇಳೆಗೆ ಸಾಕಾಗುವುದು.

ಮಕ್ಕಳಲ್ಲಿ ದೊಡ್ಡವ ಸತ್ಯ. ಅವನ ಬಳಿ ಇನ್ನೊಂದು ಬೀಗದ ಕೈ ಇರುವುದು. ಅಕಸ್ಮಾತ್ ಅವನು ಮುಂಚೆ ಮನೆಗೆ ಬಂದರೆ ತಾಯಿ ಬರುವ ಹೊತ್ತಿಗೆ ಸ್ಟೋವ್ ಹಚ್ಚಿ ಕಾಫಿ ಮಾಡುವುದುಂಟು.

ಆ ದಿನ ಶನಿವಾರ. ಶಾಲೆಗೆ ಮಧ್ಯಾಹ್ನ ರಜವಿತ್ತು. ಕಾವೇರಿಗೆ ಆ ದಿನ ಮಾರ್ಕೆಟ್ಟಿಗೆ ಹೋಗಿ ಸಾಮಾನು ತರುವ ದಿನ. ವಾರಕ್ಕೆ ಒಂದು ಸಲವಾದರೂ ಹೋಗದಿದ್ದರೆ ಸಂಸಾರ ನಡೆಯ ಬೇಕಲ್ಲ.

ಭಾನುವಾರ ಎಲ್ಲ ಅಂಗಡಿಗಳು ತೆರೆದಿರುವುದಿಲ್ಲ. ಆದ್ದರಿಂದಲೇ ಶನಿವಾರ ಸಂಜೆ ಹೊರಗೆ ಹೋಗುವ ಅಭ್ಯಾಸ ಮಾಡಿಕೊಂಡಿರೋದು. ಸತ್ಯನಿಗೆ ಸಾಮಾನು ತರುವಂತೆ ಹೇಳಬಹುದು. ಆದರೆ ಅವನದು ಹುಡುಗತನ. ನಾಲ್ಕು ಕಡೆ ನೋಡಿ ಚೌಕಾಶಿ ಮಾಡಿ ಸುಲಭ ಬೆಲೆಗೆ ಅವನು ತರಲಾರನೆಂದೇ ತಾಯಿಯ ನಂಬಿಕೆ.

ಮಕ್ಕಳು......ಅವಕ್ಕೆ ಕಷ್ಟ ಸುಖ ಅರ್ಥವಾಗೋಲ್ಲ. ಬೆಲೆ ಗಗನಕ್ಕೇರುತ್ತಿರುವ ಈ ಕಾಲದಲ್ಲಿ ಒಬ್ಬ ಹೆಂಗಸು ದುಡಿದು ಐದು ಮಕ್ಕಳನ್ನು ಸಾಕುವುದು ಸುಲಭವಲ್ಲ.

ದೊಡ್ಡ ಸಂಸಾರವನು ಹಿಂದೆ ಬಿಟ್ಟು ಕೈಹಿಡಿದಾತ ಎರಡು ವರ್ಷಗಳ ಹಿಂದೆ ಕಣ್ಣು ಮುಚ್ಚಿದ. ಆಗಿನಿಂದ ಕಾವೇರಿಗೆ ಈ ಬವಣೆ. ಗೃಹಿಣಿಯಾಗಿ ಮನೇಲಿ ಇದ್ದು ಸಂಸಾರ ನಡೆಸುತ್ತಿದ್ದವಳು, ಹೊರಗೂ ಹೋಗಿ ದುಡಿಯಬೇಕಾಯ್ತು.

'ಮನೆಕಡೆ ಹುಷಾರು. ಹೊರಗೆ ಹೋಗಬೇಕಾದ್ರೆ ಸರಿಯಾಗಿ ಬೀಗ ಹಾಕ್ಕೊಂಡು ಹೋಗಿ.'

ಮಕ್ಕಳಿಗೆ ಎಚ್ಚರಿಕೆ ಕೊಟ್ಟು ಕಾವೇರಿ ಹೊರಗೆ

> ಪಡೆದರೇನುಂಟು ಬರೀ ಪದವಿಗಳ ಪ್ರಭಾವ
> ಅವರಲ್ಲಿಹುದು ಸೌಜನ್ಯ, ಸಹನೆ, ನಮ್ರತೆಗಳ ಅಭಾವ
> ಏಗಟು, ಒರಟು, ಬಾಯ್ಮುಚ್ಚಿಸುವ ಬರೀ ಬಂಡಾಟ
> ಯಾರು ಕಲಿಸುವರವರಿಗೆ ಪ್ರೀತಿ, ವಿಶ್ವಾಸಗಳ ಪಾಠ.
>
> — ಕೆಹೆಚ್

ಬಂದಾಗ ರಾಜು ಕಾಲು ಅಲ್ಲಾಡಿಸುತ್ತಾ ಗೋಡೆಯ ಮೇಲೆ ಕೂತಿದ್ದ. ಅವನ ನೋಟವೆಲ್ಲ ಎದುರು ಮನೆ ಹಿತ್ತಲಿನಲ್ಲಿದ್ದ ಮರಗಳ ಕಡೆ. ಮರಗಳಲ್ಲಿ ಅವಿತು ಆಗಾಗ ಹಾರುತ್ತಿದ್ದ ಹಕ್ಕಿಗಳ ಕಡೆ. ಹಕ್ಕಿ ಕೂಗಿದಾಗ ಅದನ್ನು ಅನುಕರಿಸಿ ತಾನೂ ಕೂಗುವುದು.

'ರಾಜಾ...... ಮಾರ್ಕೆಟ್ಟಿಗೆ ಹೋಗ್ತಿದೀನಿ. ನಿಂಗೆ ಏನಾದ್ರು ಬೇಕೇ ?' ತಾಯಿಯ ಧ್ವನಿ ಭಾರವಾಗಿತ್ತು.

'ಬೇಡ...... ನಂಗೆ ಏನೂ, ಬೇಡ'

ರಾಜ ತಲೆ ಅಲ್ಲಾಡಿಸಿದ.

'ಆಗಿನಿಂದ ಇಲ್ಲೇ ಕೂತಿದಿ ಒಳಗೆ ಹೋಗಪ್ಪ.'

ರಾಜ ಉತ್ತರ ಕೊಡಲಿಲ್ಲ. ಬಸ್ಸಿಗೆ ಹೊತ್ತಾಯ್ತೆಂದು ಕಾವೇರಿ ಬೇಗ ಬೇಗ ಹೆಜ್ಜೆ ಹಾಕಿದಳು.

'ಅಮ್ಮಾ' ಹಿಂದಿನಿಂದ ಜೋರಾಗಿ ಕೂಗಿದ ರಾಜ

ಕಾವೇರಿ ನಿಂತು ಹಿಂದಿರುಗಿ ನೋಡಿದಳು. ರಾಜ ನಗುತ್ತಾ ಕೈಬೀಸುತ್ತಿದ್ದ.

† † †

ತಾಯಿ ಕಣ್ಣಿಗೆ ಕಾಣುವವರೆಗೆ ರಾಜ ಅತ್ತಲೇ ನೋಡುತ್ತಿದ್ದ. ಅವಳು ಮರೆಯಾದ ಮೇಲೆ ಅವನ ನೋಟ ಮತ್ತೆ ಎದುರಿನ ಮನೆಯ ಮರದ ಮೇಲೆ ನೆಟ್ಟಿತು.

ಹಕ್ಕಿಯ ಹಾರಾಟ ಕಾಣಿಸಲಿಲ್ಲ. ದೊಡ್ಡ ಹಲಸಿನ ಮರದ ತುಂಬ ಕಾಯಿಗಳು ಬುಡದಿಂದ ತುದಿಯವರೆಗೆ ತೂಗಾಡುತ್ತಿದ್ದವು.

ಅದೇನು ತೋರಿತೋ ?

ರಾಜ ಸರಸರನೆ ತಮ್ಮ ಮನೆ ಗೋಡೆಯಿಂದ ಹಾರಿ ಎದುರು ಮನೆಯ ಮೋಟು ಗೋಡೆಯ ಹತ್ತಿ ಒಳಗಿಳಿದ. ಮರದ ಮುಂದೆ ನಿಂತಾಗ ಹಿಗ್ಗಿನಿಂದ ಮುಖ ಅರಳಿತು.

ಹಣ್ಣು ತುಂಬಿದ್ದ ಮರ ಕಣ್ಣು ತುಂಬುವಂತಿತ್ತು.

ಒಂದು ಹಣ್ಣು ದೊಡ್ಡದಾಗಿ ಎಲ್ಲ ಕಾಯಿಗಳ ನಡುವೆ ಎದ್ದು ಕಾಣುತ್ತಿತ್ತು. ಗಿಡದಮೇಲೆ ಚೆನ್ನಾಗಿ ಮಾಗಲೆಂದು ಮನೆಯವರು ಅದನ್ನು ಕೀಳದೇ ಬಿಟ್ಟಿದ್ದರು.

ರಾಜನ ತೋಳಿಗೆ ದೈತ್ಯ ಶಕ್ತಿ ಹೇಗೆ ಬಂತೋ ? ಒಂದಾಳು ಎತ್ತಲು ಭಾರ ಎನಿಸುವಂತಿದ್ದ ಹಣ್ಣನ್ನು ಲೀಲಾಜಾಲವಾಗಿ ಕಿತ್ತು, ತಲೆಯ ಮೇಲೆ ಹೊತ್ತು ಮನೆಯ ಕಡೆ ಹೊರಟ. ಇನ್ನೇನು ಮೋಟುಗೋಡೆ ದಾಟಬೇಕು.

ಅಷ್ಟರಲ್ಲಿ ಹಿಂದಿನಿಂದ ನಾಲ್ಕು ಕೈಗಳು ಅವನನ್ನು ತಬ್ಬಿ ಹಿಡಿದವು.

ರಾಜ ತಿರುಗಿ ನೋಡುವುದರೊಳಗೆ ಬೆನ್ನಿನ ಮೇಲೆ ದಬದಬನೆ ಏಟುಗಳು ಬಿದ್ದವು.

"ಕಳ್ಳಾ...... ಬದ್ಮಾಷ್. ಎಷ್ಟು ದಿನದಿಂದ ಹೊಂಚು ಹಾಕುತ್ತಿದ್ದೆ ? ಸದಾ ಗೋಡೆ ಮೇಲೆ ಕೂತಿರ್ತಿ. ಇದಕ್ಕೇ ಏನು ?

ಮನೆಯ ಹುಡುಗರು ಅವನನ್ನು ಮುತ್ತಿಕೊಂಡು ದನವನ್ನು ಬಡಿಯುವಂತೆ ಬಡಿದರು.

ನೋವು ತಾಳಲಾರದೆ ರಾಜ 'ಅಯ್ಯೋ' ಎಂದು ಕೂಗು ಹಾಕಿದ. ಕೈ ಹಿಡಿತ ಸಡಿಲವಾಗಿ ಹಣ್ಣು ನೆಲಕ್ಕೆ ಬಿತ್ತು. ಕೊಸರಿಕೊಂಡು ಹೋಗಲು ಯತ್ನಿಸಿದಾಗ ತೊಟ್ಟಿದ್ದ ಷರಟು ಹರಿದು ನೇತಾಡಿತು.

'ಅಯ್ಯೋ...... ಬಿಡ್ರೋ ಅವನನ್ನ. ಹೀಗೆ ಹೊಡ್ಯೋದೆ ?'

ಒಳಗಿನಿಂದ ಆ ಮಕ್ಕಳ ತಾಯಿ ಕೂಗ್ತಾ ಓಡಿ ಬಂದಳು. ರಾಜನ ಕೂಗು ಅವಳಿಗೂ ಕೇಳಿಸಿತ್ತು.

'ನೋಡಮ್ಮ ಕಳ್ಳ. ಹಣ್ಣು ಕಿತ್ತಿದ್ದಾನೆ. ನಾವು ಮರದ ಮೇಲೆ ಹಣ್ಣಾಗ್ಲಿ ಅಂತ ಬಿಟ್ರೆ ಇದೇ ಕಷ್ಟ.'

'ಮೊದ್ಲು ಅವನ್ನ ಬಿಟ್ಟು ಈ ಕಡೆ ಬನ್ನಿ. ಏನಾಯ್ತು ವಿಚಾರ್ಸೋಣ.'

'ವಿಚಾರ್ಸಕ್ಕೆ ಏನಿದೆ ಹಣ್ಣು ಕಿತ್ತ, ಎತ್ಕೊಂಡ್ಹೋಗ್ತಿದ್ದ. ಅಷ್ಟರಲ್ಲಿ ನಾವು ಓಡಿಬಂದೆವು'

ಮನೆಯೊಡತಿ ಆ ಮಾತು ಕೇಳಿಸಿಕೊಳ್ಳದೆ ನೆಟ್ಟಗೆ ರಾಜನ ಬಳಿಗೆ ಧಾವಿಸಿದಳು. ಅವನ ಬೆನ್ನಿನ ಮೇಲೆ ಕೈಯಾಡಿಸುತ್ತ,

'ಮಗೂ...... ನಿನ್ಹೆಸರು ರಾಜ ಅಲ್ವೇ', ಎಂದಳು.

ಹುಡುಗ ಮಾತಾಡಲಿಲ್ಲ. ತಲೆ ಎತ್ತಿ, ಕನಿಕರದಿಂದ ತನ್ನನ್ನು ನೋಡುತ್ತಿದ್ದ ಕಣ್ಣುಗಳನ್ನು ದಿಟ್ಟಿಸಿದ.

'ಹೇಳಪ್ಪ, ನೀನು ಹಣ್ಣುಕಿತ್ತೆಯ ? ಹಣ್ಣು ಬೇಕು ಅಂತ ನನ್ನ ಕೇಳಿದ್ರೆ ನಾನೇ ಕೊಡ್ತಿದ್ದೆ'

ಅವಳ ಕೈ ಹುಡುಗನನ್ನು ನೇವರಿಸಿತು.

'ಬಿಡಮ್ಮಾ. ಅವನಿಗೇನು ಮುದ್ದು ಮಾಡ್ತಿ ? ಎರಡು ಬಿಗಿದು ಆಚೆಗೆ ಅಟ್ಟು.' ಅವಳ ಮಗ ಕೋದಂಡ ಕಿರುಚಿದ.

'ಸುಮ್ನಿರೋ ನೀನು. ಸ್ವಲ್ಪ ಸಮಾಧಾನವಾಗಿರಿ. ಆಮೇಲೆ ನಾನು ಎಲ್ಲ ಹೇಳ್ತೀನಿ. ಕೋದಂಡು ನೀವೆಲ್ಲ ಒಳಗ್ಹೋಗಿ' ತಾಯಿ ಆಜ್ಞಾಪಿಸಿದಳು.

ಗೊಣ ಗೊಣಗುಟ್ಟುತ್ತ ಹುಡುಗರು ಒಳಗೆ ಹೋದರು. ರಾಜ ಮನೆಗೆ ಹೋಗಲು ಮಿಸುಕಾಡಿದ.

'ಈ ಹಣ್ಣು ತಗೋ. ನೀವೆಲ್ಲ ತಿನ್ನಿ.

ಆಕೆ ಬಲವಂತದಿಂದ ಹಣ್ಣು ಎತ್ತಿಕೊಟ್ಟಳು. 'ನಿನ್ನ ಕೈಲಿ ಎತ್ತಕ್ಕೆ ಆಗುತ್ಯೇ ?' ಎಂದಳು.

'ಆಗುತ್ತೆ'

ಹಣ್ಣು ಪುನಃ ಅವನ ತಲೆ ಏರಿತು. ರಾಜ ಮನೆಯ ಕಡೆ ನಡೆದ. ಅವನ ಹರಿದ ಅಂಗಿಯನ್ನು ನೋಡುತ್ತ ಆ ತಾಯಿಯ ಕಣ್ಣಲ್ಲಿ ನೀರು ತುಂಬಿತು.

† † †

ಎರಡು ಕೈ ಚೀಲದ ತುಂಬಾ ಸಾಮಾನು ತುಂಬಿಕೊಂಡು ಕಾವೇರಿ ನಿಧಾನವಾಗಿ ಬರ್ತಿದ್ದಳು. ಹೃದಯ ಕೈಲಿದ್ದ ಹೊರೆಗಿಂತ ಹೆಚ್ಚು ಭಾರವಾಗಿತ್ತು. ವ್ಯಾಪಾರಕ್ಕೆಂದು ಹೊರಟರೆ, ಹೊರಡುವಾಗ ಇದ್ದ ಉತ್ಸಾಹ ಬರುವಾಗ ಇಲ್ಲ. ದುಡ್ಡು ಖರ್ಚಾಗುತ್ತಿತ್ತೇ ಹೊರತು ತೃಪ್ತಿಯಾಗುವಂತೆ ಸಾಮಾನು ಬರುವುದಿಲ್ಲ. ಬರುವ ಸಂಬಳದಲ್ಲಿ ಎರಡು ಕೊನೆ ದಾಟಿಸಬೇಕೆಂದರೆ ಅದೊಂದು ದೊಡ್ಡ ತಲೆನೋವು.

ಸತ್ಯ, ಸುಬ್ಬು ಇಬ್ಬರೂ ಚಿಕ್ಕ ಹುಡುಗರಿಗೆ ಮನೆಪಾಠ ಹೇಳಿ ನಾಲ್ಕು ಕಾಸು ಸಂಪಾದಿಸಿದರೂ ಅದು ಅವರ ಅಗತ್ಯಗಳಿಗೇ ಸಾಲದು. ಓದುವ ಹುಡುಗರು. ಏನೆಲ್ಲಾ ಖರ್ಚು ಉಂಟಲ್ಲ ?

ಯೋಚನೆಯ ಭಾರದಿಂದ ಕುಗ್ಗಿ ಮೆಲ್ಲಗೆ ಬರ್ತಿದ್ದ ಕಾವೇರಿಯನ್ನು ತಟ್ಟನೆ ಯಾರೋ ಭುಜ ಹಿಡಿದಾಗ ಕಾವೇರಿ ನಿಂತಳು.

"ಓ...... ತುಳಸಮ್ಮ. ಇದೇನು.......... ಈಗ ?" ಎಂದು ತಡವರಿಸಿದಳು.

"ನೋಡಿ ನೀವು ಪೇಟೆಗೆ ಹೋದ್ಮೇಲೆ ಒಂದು ಅಚಾತುರ್ಯ ನಡೆದು ಹೋಯ್ತು. ನನಗೆ ಹೇಳಲಿಕ್ಕೇ ಒಂದು ತರ ಆಗ್ತಿದೆ."

'ಏಕೆ ? ಏನಾಯ್ತು ?'

ಕಾವೇರಿಯ ಮುಖದಲ್ಲಿ ಆತಂಕ ಇಣುಕಿತು.

'ನಿಮ್ಮ ಮಗ ಸಹಾ ಆ ಗೋಡೇಮೇಲೆ ಕೂತಿರ್ತಾನೆ. ನಮ್ಮ ಮನೆ ಹಲಸಿನ ಮರ ಅಲ್ಲಿಗೆ ಚೆನ್ನಾಗಿ ಕಾಣುತ್ತೆ. ಪಾಪ ಆ ಹುಡುಗನ ವಿಷಯ ನನಗೆ ಗೊತ್ತು. ಅವನು ಎಂದೂ ನಮ್ಮ ಮನೆ ಕಡೆ ಬಂದೋನೆ ಅಲ್ಲ. ಇವತ್ತು ಏನಾಯ್ತೋ ? ನಮ್ಮನೆಗೆ ನುಗ್ಗಿ ಒಂದು ಹಲಸಿನ ಹಣ್ಣು ಕಿತ್ಕಂತೆ. ನಮ್ಮ ಹುಡುಗರಿಗೂ ಸರಿಯಾಗಿ ಗೊತ್ತಾಗ್ಲಿಲ್ಲ. ಯಾರೋ ಅಂದ್ಕೊಂಡು ಹೊಡೀತಿದ್ರು. ಅಷ್ಟರಲ್ಲಿ ನಾನು ಓಡಿಬಂದ, ಬಿಡಿಸ್ದೆ. ಅವಕ್ಕೂ ರಾಜನ ವಿಚಾರ ಸರಿಯಾಗಿ ಗೊತ್ತಿಲ್ಲ. ಓದೋದಕ್ಕೆ ಅಂತ ಹೊರಗೇ ಇದ್ದರು. ಮೊನ್ನೆಮೊನ್ನೆ ಬಂದೋರು. ತಪ್ಪು ತಿಳ್ಕೋಬೇಡಿ. ದಯವಿಟ್ಟು ಕ್ಷಮಿಸಿ.'

ಕಾವೇರಿಗೆ ನಿಂತ ನೆಲ ಕುಸಿದಂತಾಯ್ತು. ರಾಜ! ಅವರ ಮನೆಗೆ ನುಗ್ಗಿ ಹಲಸಿನಹಣ್ಣು ಕದ್ದು ಕಿತ್ತು, ಏಟು ತಿಂದನೆ ? ದೇವರೆ ಇದು ಯಾವ ಕರ್ಮ ? ನಾಲ್ಕು ಮಕ್ಕಳಂತೆ ಇವನೂ ಇರಬಾರದಿತ್ತೆ? ವಯಸ್ಸು ಬೆಳೆದಂತೆ ದೇಹ ಬೆಳೆದರೂ ತಲೆ ಮಾತ್ರ ಬೆಳೆದಿಲ್ಲ. ಮುಗ್ಧ ಮಗುವಿನಂತಿದ್ದಾನೆ. ತಾನು ಇನ್ನೂ ಏನೇನು ನೋಡಬೇಕೋ ? ಇದರಲಿ ಯಾರ ತಪ್ಪೂ ಇಲ್ಲ.

'ತಪ್ಪು ಅವಂದು. ನೀವೇ ಕ್ಷಮಿಸಬೇಕು. ಅಜ್ಞಾನಿ ಅವನು.'

ಗಂಟಲು ಬಿಗಿದು ಮಾತೇ ಹೊರಡಲಿಲ್ಲ. ಕೈ-ಚೀಲ ಬೇರೆ ತೂಗುತ್ತಿದೆ. ಕಾವೇರಿ ಹೇಗೋ ಮನೆ ತಲುಪಿದಳು.

ಗೋಡೆಯ ಮೇಲೆ ರಾಜ ಕಾಣಿಸಲಿಲ್ಲ. ಮನೆಯ ಒಳಗಿನಿಂದ ಹುಡುಗರ ಮಾತು, ನಗು ಕೇಳಿಸಿತು. ಜೊತೆಗೆ ಮೂಗಿಗೆ ಹಲಸಿನ ಹಣ್ಣಿನ ವಾಸನೆ ರಾಚಿತು.

ಒಳಗಿನ ನೋಟ ದಂಗುಬಡಿಯುವಂತಿತ್ತು.

ಮಧ್ಯೆ ಹಲಸಿನ ತೊಳೆ ಹರಡಿಕೊಂಡು ಹುಡುಗರೆಲ್ಲಾ ಬಿಡಿಸುತ್ತಿದ್ದಾರೆ. ಒಂದು ಕಡೆ ಸಿಪ್ಪೆಯ ರಾಶಿ. ಒಂದು ಕಡೆ ಬೀಜ. ಚಿಕ್ಕವ ಮರಿ ಒಂದು ತೊಳೆ ಕೈಲಿ ಹಿಡಿದುಕೊಂಡು ಅಗೀತಿದ್ದಾನೆ.

'ಇದರಲ್ಲಿ ಪಂಚಾಂಮೃತ ಮಾಡೋಣ. ಚೆನ್ನಾಗಿರುತ್ತೆ. ಕಾಯಿ, ಬೆಲ್ಲ ಇದೆಯೇ ನೋಡು.'

ವಿಠಲ ಉತ್ಸಾಹದಿಂದ ಹೇಳಿದ.

'ಪಂಚಾಂಮೃತ ಯಾಕೆ ? ಹಾಗೇ ತಿನ್ನೋಣ. ಎಷ್ಟು ತೊಳೆ ಇದೆ ನೋಡು. ಸರಿಯಾಗಿ ಹಂಚು. ನಾಲ್ಕು ಭಾಗ ಮಾಡೋ. ಕೈ ಎಲ್ಲಾ ಅಂಟಾಗಿದೆ. ನಾನು ತೊಳೆದುಕೊಂಡು ಬರ್ತೀನಿ' ಸತ್ಯ ಎದ್ದ.

'ಲೋ ಅಮ್ಮನಿಗೆ ಬೇಡ್ವೇನೋ ?'

'ಹಲಸಿನಹಣ್ಣು ವಾಯು ಅಂತ ಅಮ್ಮ ಹೆಚ್ಚಾಗಿ ತಿನ್ನಲ್ಲ. ಮರಿಗೂ ಅರಗಲ್ಲ ಅಂತಾಳೆ. ಅವರಿಬ್ಬರಿಂದ ಒಂದು ಭಾಗ ಸಾಕಾಗುತ್ತೆ.'

ಇದೇ ಧಾಟಿಯಲ್ಲಿ ಮಾತು ನಡೆದಿತ್ತು. ಒಳಗೆ ಬಂದ ತಾಯಿಯನ್ನು ಯಾರೂ ಗಮನಿಸಲಿಲ್ಲ. ಸ್ವಲ್ಪ ಕತ್ತಲಾಗಿದ್ದ ಮೂಲೆಯಲ್ಲಿ ಕಾವೇರಿ ನೆಲಕ್ಕೆ ಕೀಲಿಸಿದಂತೆ ನಿಂತಳು. ಹೃದಯದಲ್ಲಿ ಏನೋ ಅರ್ಥವಾಗದ ವೇದನೆ.

ತುಳಸಮ್ಮ ಕೊಟ್ಟ ವಿವರಣೆಯಿಂದ ಇನ್ನೂ ಚೇತರಿಸಿಕೊಳ್ಳುವ ಮೊದಲೆ ತನ್ನ ಮಕ್ಕಳ ಸ್ವಾರ್ಥ ಬುದ್ಧಿ ಮತಷು ನೋವು ತಂದಿದೆ.

ಅವಳ ಪತಿ ಬದುಕಿದ್ದಾಗ ಐದು ಮಕ್ಕಳೂ ಒಟ್ಟಿಗೆ ಆಡುತ್ತಿದ್ದರೆ,

'ದೇವರು ಕೊಟ್ಟ ಪಂಚಾಮೃತ ಇವು'

-ಎಂದು ನಗೆಯಾಡುತ್ತಿದ್ದ.

ಅಮೃತ ಎಲ್ಲಿ ನುಸುಳಿತೋ? ಈ ಅನುಭವಕ್ಕೆ ಯಾವ ಹೆಸರಿಡಬಹುದು ?

ರಾಜನ ಹೆಸರನ್ನು ಒಬ್ಬರೂ ಜ್ಞಾಪಿಸಿಕೊಂಡಿಲ್ಲ. ಎಲ್ಲೋ ಅಲೆದುಕೊಂಡಿರುವ ಅವನ ನೆನಪು ಒಬ್ಬರಿಗೂ ಬಂದಿಲ್ಲ. ಏಟು ತಿಂದವನು ಅವನು.

ತುಳಸಮ್ಮ ಉದಾರಿ. ಹಣ್ಣನ್ನು ಅವನಿಗೇ ಕೊಟ್ಟಿದಾಳೆ. ತನಗೆ ಹೇಳಲಿಲ್ಲ.

ಹಾಳು ಹುಡುಗ ಹಣ್ಣು ತಂದಿಟ್ಟು ಎಲ್ಲಿ ಹೋದನೋ ? ತಿನ್ನುವ ಆಸೆಯೂ ಇರಲಾರದು. ಹಣ್ಣು ಕಣ್ಣಿಗೆ ಬಿತ್ತು, ಆ ಕ್ಷಣದಲ್ಲಿ ಏನೆನಿಸಿತೋ ? ಕಿತ್ತುಬಿಟ್ಟಿದ್ದಾನೆ. ಯಾವುದರಲ್ಲೂ ನಿಶ್ಚಿತ ಆಸಕ್ತಿಯಿಲ್ಲ. ಮನಸ್ಸು ಒಂದು ಕಡೆ ನಿಲ್ಲಲಾರದು.

ಮುಂದೆ ಇವನ ಗತಿ ?

"ಏನ್ರೋ ಇದು ? ಏನ್ಮಾಡ್ತಿದೀರಿ ?

'ಹಲಸಿನ ಹಣ್ಣು ಬಿಡಿಸ್ತಾ ಇದೀವಮ್ಮ. ನೀನೂ ಬಾ.'

'ಎಲ್ಲಿತ್ತು ಅದು ? ಯಾರು ತಂದೋರು ?'

'ಗೊತ್ತಿಲ್ಲ. ಬಾಗಿಲ ಹಿಂದೆ ಇತ್ತು. ನೀನೇ ಇಟ್ಟಿರಬಹುದು ಎಂದು ತೋರಿತು. ಅಥವಾ ಎದುರು ಮನೆಯವರು ಕಳಿಸಿದರೋ ?' ಬಡಬಡಿಸಿದ ಸುಬ್ಬು.

ಹಿಂದಿನಿಂದ ಮುಂಡಿಯನ್ನು ಕಚ್ಚಿದಾಗ ಬೆಚ್ಚಿ ತಿರುಗಿ ನೋಡಿದಳು ಕಾವೇರಿ.

ಕೆದರಿದ ತಲೆ, ಹರಿದು ಜೋಲಾಡುತ್ತಿರುವ ಅಂಗಿ, ಕಂದಿ, ಬಾಡಿ, ಬಸವಳಿದ ಮುಖ. ಕೆನ್ನೆಯ ಮೇಲೆ ಕಣ್ಣೀರಿನ ಕರೆ, ಕಣ್ಣುಗಳಲ್ಲಿ ಮಿಂಚಿ ಹೊರಬರಲಾರದ ಮೂಕ ವೇದನೆ !

ರಾಜ ಮಂಡಿಯೂರಿ ಕುಳಿತು ತಾಯಿಯನ್ನು ತಬ್ಬಿದ್ದ. ಎದುರಿಗೆ ಗುಂಪಾಗಿ ಒಂದೆಡೆ ಇಟ್ಟಿದ್ದ ಹಲಸಿನ ತೊಳೆಯಾಗಲೀ ಅದರ ಕಟು ವಾಸನೆಯಾಗಲೀ, ಸೋಂಕಿತ್ತೋ ಇಲ್ಲವೋ ಹೇಳುವುದು ಅವನಿಗೆ ಕಠಿನ. ಅಷ್ಟ ಮಾರ್ಮಿಕವಾಗಿತ್ತು ಅ ನೋಟ, ಕಾವೇರಿ ಬಗ್ಗಿ ಮಗನನ್ನು ಎದೆಗೆ ಅವಚಿಗೊಂಡಾಗ.

ಸರ್ವಾಧಿಕಾರ ಮೂರ್ತಿವೆತ್ತ ಆಫೀಸರೆ
ಕೆಮ್ಮುತ್ತಲೇ ಆಫೀಸಿನ ಮೆಟ್ಟಲೇರುವರೆ
ಭಯವೆಲ್ಲಹುದು ಬಹುಪಳಗಿದ ಮರಿಗಳಿಗೆ
ಕೋಪಿಸದೆ ಮೆಟ್ಟಲಿಳಿಯಿರಿ ಕೆಳಗೆ

—ಕೆಹೆಚ್.

ಸುಳ್ಳು

ಮೋಟರ್ ಬೈಕಿನ ಕಟಕಟ ಶಬ್ದ ಕೇಳಿದೊಡನೆ ತನ್ನ ಕೋಣೆಯಿಂದ ಕೂಗಿ ಹೇಳಿದ ಮಧು;

ಅತ್ತಿಗೆ, ದತ್ತು ಬಂದ ಅಂತ ಕಾಣುತ್ತೆ. ಬೇಗ ಹೋಗಿ ನಾನು ಮನೇಲಿಲ್ಲ ಅಂತ ಹೇಳಿ ಬರ್ತೀರ ಪ್ಲೀಸ್.......... "

ಸೀರೆಯನ್ನು ಇಸ್ತ್ರಿ ಮಾಡಿಕೊಳ್ಳುತ್ತಿದ್ದ ಗೌರಿ ಅಲ್ಲೇ ಆಟವಾಡುತ್ತಿದ್ದ ದಿಲೀಪನಿಗೆ ಹೇಳಿದಳು,

"ಮಧು ಹೇಳಿದ್ದು ಕೇಳಿಸ್ತಲ್ಲ, ಬೇಗ ಹೋಗಿ ಅವನು ಮನೇಲಿಲ್ಲ ಅಂತ ಹೇಳಿಬಿಡಪ್ಪ"

ಮಧು ಮತ್ತೆ ಕೂಗಿದ "ಬೇಡ ಅತ್ತಿಗೆ ಅವನೇನಾದರು ಅಭಾಸಮಾಡಿಬಿಟ್ಟಾನು ನೀವೆ ಹೋಗಿ ಹೇಳಿ"

ಇಸ್ತ್ರಿಯ ಸ್ವಿಚ್ಚನ್ನು ಆರಿಸಿದಳು. ಏಕೆಂದರೆ ಮಧು ಮನೆಯಲಿಲ್ಲವೆಂದರೂ ಗೌರಿಯೊಡನೆಯೇ ಐದು-ಹತ್ತು ನಿಮಿಷ ಮಾತಾಡಿ ಹೋಗುವವನು ದತ್ತು. ಅಲ್ಲದೇ ಎಲ್ಲಿಗೆ ಹೋಗಿದ್ದಾನೆ ಎಷ್ಟೊತ್ತಿಗೆ ಬರುತ್ತಾನೆ. ಎಂದೆಲ್ಲ ತನಿಕೆ ಮಾಡುತ್ತಾನೆ. ಅದಕ್ಕೆಲ್ಲಾ ಮನಸ್ಸಿನಲ್ಲೇ ಉತ್ತರವನ್ನು ಸಿದ್ಧಪಡಿಸಿಕೊಳ್ಳುತ್ತಾ-ತನ್ನನ್ನು ಈ ಇಕ್ಕಟ್ಟಿಗೆ ಸಿಲುಕಿಸಿದ ಮಧುವನ್ನು ಬೈದುಕೊಳ್ಳುತ್ತಾ..... ಬಾಗಿಲಿಗೆ ಬರುವ ವೇಳೆಗೆ ದತ್ತು, "ಮಧು ಮನೇ-ಲಿಲ್ವಾ?" ಎಂದು ಜೋರಾಗಿ ಕೇಳಿದ. "ಎಲ್ಲಿಗೆ ಹೋಗಿದ್ದಾನೆ?" ಹಿಂದೆಯೇ ಬಂದ ಪ್ರಶ್ನೆ.

"ಮಾರ್ಕೆಟಿಗೆ ಹೋಗಿದ್ದಾನೆ. ಒಂದಿಷ್ಟು ಹಣ್ಣು, ತರಕಾರಿ ಬೇಕಾಗಿತ್ತು"

"ಆ ಕಡೇನೆ ಡೆಂಟಲ್ ಕಾಲೇಜಿಗೆ ಹೋಗ್ತಿದೀನಿ ಹಾಗೆ ನೋಡ್ತೀನಿ" ಎಂದಾಗ ಏನು ಹೇಳಬೇಕೆಂದು ತೋರಲಿಲ್ಲ ಗೌರಿಗೆ. ಮಾತನ್ನೆ ಬದಲಾಯಿಸುತ್ತಾ,

"ನಿಮ್ಮ ತಾಯಿ ನಂಜನಗೂಡಿಗೆ ಹೋಗಿ-ದ್ದರಲ್ಲಾ ಬಂದರಾ?" ಎಂದು ಕೇಳಿದಳು.

— ಸರೋಜ ನಾರಾಯಣರಾವ್,

'ಇನ್ನೂ ಇಲ್ಲ. ನಾಡಿದ್ದು ಬರಬಹುದು. ನಿನ್ನೇನೆ ಬರಬೇಕಾಗಿತ್ತು. ಬಸ್ ಹತ್ರಕ್ಕೂ ಹೋಗಿದ್ದೆ ನಾನು. ಇವತ್ತು ಕಾಗದ ಬಂದಿದೆ......' ಎಂದೆಲ್ಲ ಅವನು ಮಾತನಾಡುತ್ತಿದ್ದಾಗ ಅಲ್ಲೇ ಗೇಟಿನ ಮೇಲೆ 'ಸೀಸಾ' ಆಡುತ್ತಾ ನಿಂತಿದ್ದ ದಿಲೀಪ ಎಲ್ಲಿ ಬಾಯಿಬಿಟ್ಟು ಬಿಡುತ್ತಾನೋ ಎಂಬ ಆತಂಕ ಗೌರಿಗೆ. ಅವನು ಹಾಗೇನೂ ಮಾಡಲಿಲ್ಲ.

'ಬರ್ತೀನಿ' ಎಂದು ಹೇಳಿ ದತ್ತು ಹೊರಟು ಹೋದ.

ರೂಮಿನಲ್ಲಿ ಕುಳಿತಿದ್ದ ಮಧು ನಗುತ್ತಾ,

> ಸತ್ಯಂ ವದ! ನಿಜ– ಯಾರು ಹೇಳಬೇಕು? ದೊಡ್ಡವರೇ – ಚಿಕ್ಕವರೇ? ಎಲ್ಲರೂ ಎಲ್ಲ ಕಾಲಕ್ಕೂ ಸತ್ಯವನ್ನೆ ಹೇಳುವುದು ಸಾಧ್ಯವೇ? ಸುಳ್ಳಿನ ಅವಶ್ಯಕತೆಯೂ ಜೀವನದಲ್ಲಿ ಸಾಕಷ್ಟಿದೆ. ಆದ್ದರಿಂದಲೇ ಗೌರಿಯಿಂದ ಲೇಖನವರೆಗೆ ಎಲ್ಲರೂ ಸುಳ್ಳಾಡಿದರು!

> 'ನೋಡಿ ಆಸ್ವಾದಿಸು, ಸಂತೋಷಿಸು
> ಮುಟ್ಟಿನಲುಗಿಸಬೇಡ, ಹಾಳಾಗಿಸಬೇಡ
> ಎಂಬುದೊಂದು ಕವಿವಾಣಿ.
>
> ಆದರೆ!
>
> ನೋಡಿ ಆಸ್ವಾದಿಸಿದ ಮೇಲೆ
> ಮುಟ್ಟದಿರಲು ಮನ ಒಪ್ಪದೇ?
> ನೋಡಿದ ಪರಿಪಕ್ವ ಹಣ್ಣು ತಿನ್ನದೇ ಬಿಟ್ಟರೆ,
> ಅದರ ರುಚಿಸ್ವಾದ ಸಿಗುವುದೇ?
>
> — ಕೆಹೆಚ್

"ಬೇಷ್ ಅತ್ತಿಗೇ. ಸ್ಕೂಲು ಕಾಲೇಜಿನಲ್ಲಿದ್ದಾಗ ನಾಟಕಗಳಲ್ಲಿ ಪಾರ್ಟು ಮಾಡ್ತಾ ಇದ್ದದ್ದು ಸಾರ್ಥಕವಾಯತು. ಎಷ್ಟು ಚೆನ್ನಾಗಿ ನಿಜದ ತಲೇ ಮೇಲೆ ಹೊಡೆದ ಹಾಗೆ ಸುಳ್ಳು ಹೇಳ್ತೀರಿ! ಎಂದ.

'ನಿನ್ನಂತಹ ಮೈದನು ಇದ್ದಮೇಲೇ ಇನ್ನೇನು ಮಾಡುವುದು...........' ಎಂದು ಹೇಳಿ ಇಸ್ತ್ರಿ ಟೇಬಲಿನ ಕಡೆಗೆ ನಡೆದಳು ಗೌರಿ.

ದಿಲೀಪ, "ಹನ್ನೆರಡುಗಂಟೆಯಾಯಿತು ಊಟ ಮಾಡೋಣಾಮ್ಮ?" ಎಂದು ಕೇಳಿದ.

"ಅಮ್ಮ ನನಗೆ ಬ್ರೆಡ್ ಕೊಟ್ಬಿಟ್ಟು ನೀವೆಲ್ಲ ಊಟಮಾಡಿ" ಜ್ವರ ಬಂದು ಮಲಗಿದ್ದ ಹನ್ನೆರಡು ವರ್ಷದ ಹರಿಣಿ ಕರೆದಳು. ಹರಿಣಿಯ ಧ್ವನಿಕೇಳಿದ ಅವಳ ಅಜ್ಜಿ, ಕುಳಿತ ಕಡೆಯಿಂದಲೇ 'ಮಗೂಗೆ ಜ್ವರ ಹೇಗಿದೆ ಎಂದು ಕೇಳಿದಳು.

"ನೆನ್ನೆಗಿಂತ ವಾಸಿ, ತೊಂಭತ್ತೊಂಬತ್ತು ಡಿಗ್ರಿ ಇದೆ ನಾಳೆ ಪೂರ್ತಿ ಬಿಡಬಹುದು." ಎಂದು ಹೇಳಿ ಗೌರಿ ಹಾಲು ಬಿಸಿಗೆ ಇಟ್ಟಳು. ಮೂರು ಚೂರು ಬ್ರೆಡ್ಡನ್ನು ತಟ್ಟೆಗೆ ಇಟ್ಟುಕೊಂಡು ಹಾಲಿಗೆ ಸಕ್ಕರೆಯನ್ನು ಬೆರೆಸಿ ತೆಗೆದುಕೊಂಡು ಹೋದಾಗ ಹರಿಣಿ,

"ನಾಳೆ ಊಟ ಮಾಡಬಹುದೇನಮ್ಮ" ಎಂದು ಆಸೆಯಿಂದ ಕೇಳಿದಳು.

"ನೋಡೋಣ ಮೊದಲು ಜ್ವರ ಬಿಡಲಿ"

'ಗಂಜಿ ಬ್ರೆಡ್ ಬೇಜಾರಾಯ್ತಮ್ಮ' ಹರಿಣಿ ರಾಗ.

'ಏನ್ಮಾಡೋದು–ಮಧ್ಯಾಹ್ನ ಮೂಸಂಬಿ ರಸ ಕೊಡ್ತೀನಿ'

'ರಸ ಬೇಡ, ಹಣ್ಣೇ ಬಿಡಿಸಿಕೊಡು. ಅಮ್ಮ ಇವತ್ತು ಅಡಿಗೆ ಏನು?'

ಅಡಿಗೆ ಬಟಾಣಿ ಉಸಲಿ, ಶಾವಿಗೆ, ಪಾಯಸ, ಮಾವಿನಕಾಯಿ ಗೊಜ್ಜು. ಹಾಗೆಂದು ಹೇಳಿದರೆ ಹರಿಣಿ ಸುಮ್ಮನಿರುವಳೇ? ಎಲ್ಲಾ ಅವಳಿಗೆ ಪ್ರಿಯವಾದ ಅಡಿಗೆ. ಇದ್ದುದ್ದನ್ನು ಇದ್ದ ಹಾಗೆ ಹೇಳಿದರೆ, "ನನಗೆ ಇಷ್ಟವಾದ ಅಡಿಗೇನೆಲ್ಲಾ ನನಗೆ ಹುಷಾರಿಲ್ದೆ ಇರೋವಾಗ್ಲೆ ಮಾಡ್ತೀಯಾ" ಎಂದು ಗಲಾಟೆ ಮಾಡುತ್ತಾಳೆ. ಗೌರಿ ಆ ಕ್ಷಣಕ್ಕೆ ತೋರಿದ್ದನ್ನು ಹೇಳಿದಳು, "ಬದನೇಕಾಯಿ ಪಲ್ಯ, ಅನ್ನ ಸಾರು' 'ಹರಿಣಿಗೆ ತೃಪ್ತಿಯಾದಂತೆ ತೋರಿತು. ಬದನೇಕಾಯಿ ಅವಳಿಗೆ ಇಷ್ಟವಿಲ್ಲದ ತರಕಾರಿ. ಅವಳು ಬ್ರೆಡ್ ತಿಂದು ಮುಗಿಸುವವರೆಗೂ ಅಲ್ಲೇ ಕುಳಿತಿದ್ದು ತಟ್ಟೆ ಲೋಟಗಳನ್ನು ಕೈಗೆತ್ತಿಕೊಂಡು ಗೌರಿ, ಇನ್ನು ಸ್ವಸ್ಥವಾಗಿ ಮಲಗಿಕೋ" ಎಂದು ಹೇಳಿದಳು. ಅವಳು ತುಟಿ ಉಬ್ಬಿಸಿ,

"ನಾಲ್ಕು ದಿನದಿಂದ "ಸ್ವಸ್ಥವಾಗಿ" ಮಲಗಿ ರೋಡೆ ಆಗಿದೆಯಲ್ಲ" ಎಂದಳು.

"ಹೌದು ಜ್ವರ ಬಂದಿರೋವಾಗ ಇನ್ನೇನು ಮಾಡ್ತೀಯ?"

'ಊಟ ಆದ್ಮೇಲೆ ನೀನು ಇಲ್ಲೇ ಬಾ. ನಂಗೆ ಒಬ್ಬೆ ಬೇಜಾರು'

'ಆಗಲಿ' ಎನ್ನುತ್ತ ಕೋಣೆಯಿಂದ ಹೊರಬಿದ್ದಳು ಗೌರಿ. ಕೋಣೆಯ ಬಾಗಿಲನ್ನು ಹಾಕಿಕೊಳ್ಳಲು ಮರೆಯಲಿಲ್ಲ. ತಾವೆಲ್ಲ ಊಟಕ್ಕೆ ಕುಳಿತಾಗ ಅಡಿಗೆಯ ಪರಿಮಳ ಅವಳ ಮೂಗಿಗೆ ತಾಗಬಾರದಲ್ಲ! ಹಿರಿಯ ಮಗಳು ಭಾರತಿ ತಟ್ಟೆ ಹಾಕಿದ್ದಳು ಗೌರಿಗೆ ಆಶ್ಚರ್ಯವಾಯಿತು ನಾಲ್ಕು-ನಾಲ್ಕು ಸಲ

ಕರೆದು ಹೇಳಿದರೂ ಕತೆ ಪುಸ್ತಕ ಹಿಡಿದು ಕುಳಿತವಳು "ಹುಂ ಹುಂ" ಎಂದು ಕುಳಿತ ಕಡೆಯಿಂದಲೇ ರಾಗ ಎಳೆಯುತ್ತಿದ್ದವಳು ಇದೇನು ಇಷ್ಟರವಟ್ಟಿಗೆ ಹೇಳಿಸಿ-ಕೊಳ್ಳದೇ ಮಾಡಿದ್ದಾಳೆ ಎಂದುಕೊಳ್ಳುತ್ತ ಎಲ್ಲರಿಗೂ ಬಡಿಸತೊಡಗಿದಳು. ಊಟ ಮುಗಿದ ಮೇಲೂ ಭಾರತಿ ಕೆಲಸ ಮಾಡುತ್ತ ತನ್ನ ಹಿಂದೆ ಮುಂದೆ ಸುತ್ತಿದ್ದುದನ್ನು ಕಂಡು ಗೌರಿ 'ಏನೋ ಒಳಗುಟ್ಟು ಇರಬೇಕು ಅದಕ್ಕೇ ಅನುಸರಿಸುತ್ತ ಇದ್ದಾಳೆ' ಎಂದುಕೊಳ್ಳುತ್ತಿರುವಾಗಲೇ ಭಾರತಿ, "ಅಮ್ಮಾ ನನ್ನ ಫ್ರೆಂಡ್ಸ್ ಜೊತೆ ಮಧ್ಯಾಹ್ನ ಸಿನಿಮಾಕ್ಕೆ ಹೋಗಲೇನಮ್ಮ? ಎಂದು ಕೇಳಿದಳು.

"ಇದೇನೇ ಮೊನ್ನೆ ತಾನೇ....." ಎನ್ನುತ್ತಿರುವಾಗಲೇ ಭಾರತಿ "ಶ್ ಅಜ್ಜಿಗೆ ಕೇಳಿಸಿದರೆ ಪಂಚಾಯ್ತಿ' 'ಹುಂ' ಅನ್ನಮ್ಮ" ಎಂದಳು, ಗೌರಿಯ ಒಪ್ಪಿಗೆ ದೊರೆತೇ ದೊರೆಯುವುದೆಂದು ಅವಳಿಗೆ ಗೊತ್ತು, ಗೌರಿ 'ಹುಂ' ಎನ್ನುವುದೇ ತಡ ಶೃಂಗರಿಸಿಕೊಳ್ಳಲು ರೂಮಿಗೆ ಓಡಿದಳು.

ಸಂಜೆ ಐದು ಘಂಟೆಯ ಸಮಯ ನೆರೆಮನೆಯ ರಾಧಮ್ಮ ಕೈಯಲ್ಲಿ ಒಂದು ಸೀರೆಯನ್ನು ಹಿಡಿದುಕೊಂಡು ಬಂದರು. ಗೌರಿ ಅದೇ ತಾನೇ ಕಾಫಿ ತಿಂಡಿಯ ಕೆಲಸವನ್ನು ಮುಗಿಸಿ ಕುಳಿತಿದ್ದಳು.

"ಬನ್ನಿ ರಾಧಮ್ಮ ಏನಿದು ಹೊಸಸೀರೆ- ತಗೊಂಡೇ ಬಿಟ್ರಾ ನೀವು ಪರವಾಗಿಲ್ಲ ಹೇಗೋ ಮಾಡ್ತೀರಿ" ರಾಧಮ್ಮ ಸೀರೆಯನ್ನು ಗೌರಿಯ ಕೈಗೆ ಕೊಟ್ಟರು. ಗೌರಿ, ಸೀರೆಯ ಅಂಚನ್ನು ಸೆರಗನ್ನೂ ಮೆಚ್ಚಿಕೊಳ್ಳುತ್ತ "ತುಂಬಾ ಚೆನ್ನಾಗಿದೆ ರಾಧಮ್ಮ ಎಷ್ಟಾಯಿತು?" ಎಂದು ಕೇಳಿದಳು. ಮುನ್ನೂರು ರೂಪಾಯಿನ ಆ ಸೀರೆಯನ್ನು ಕೊಂಡ ಕಥೆಯನ್ನು ಬಣ್ಣಿಸಿದರು ರಾಧಮ್ಮ. ಯಜಮಾನರು ಮನೆ ಖರ್ಚಿಗೆ ಎಂದು ಕೊಡುತ್ತಿದ್ದ ಹಣದಲ್ಲಿ ಉಳಿಸುತ್ತಾ ಬಂದುದಾಗಿ ಹೇಳಿದರು. ಉಳಿಸುವುದು ಹೇಗೆ ಎಂದು ಗೌರಿ ಕೇಳಿದಾಗ "ಇಲ್ಲದ" ಖರ್ಚುಗಳನ್ನು ಲೆಕ್ಕದಲ್ಲಿ ತೋರಿಸಿದ ವೈಖರಿಯನ್ನು ಹೇಳಿದರು. ಹೇಗೂ ಪದಾರ್ಥಗಳ ಬೆಲೆ ವಿಪರೀತವಾಗಿ ಏರಿದೆ ಆದ್ದರಿಂದ ಪತಿಯೂ ಹೆಚ್ಚು ತನಿಖೆ ಮಾಡಲಿಲ್ಲ ಎಂದು ಹೇಳಿದರು. ಒಟ್ಟಿನಲ್ಲಿ ಅವರ 'ಉಳಿತಾಯ

ಉಳಿತಾಯವೇ ಅಲ್ಲ. ಸುಳ್ಳು ಲೆಕ್ಕ ತೋರಿಸಿ ಹೆಚ್ಚು ಹಣವನ್ನು ಪಡೆದಿದ್ದರು ಅಷ್ಟೆ. ಹೇಗೋ ತಮ್ಮ ತಮ್ಮ ಆಸೆಯನ್ನು ಪೂರೈಸಿಕೊಂಡಿದ್ದರು. ಅಕೆ ಹೊರಟು ಹೋದಮೇಲೆ ಗೌರಿಯ ಅತ್ತೆ ಸಹ "ಪರವಾಗಿಲ್ಲ ಜಾಣೆ" ಎಂದರು. ಸಂಜೆ ದೀಪ ಹೊತ್ತಿಸುವ ಸಮಯವಾಗಿತ್ತು. ಗೌರಿಯ ಅತ್ತೆ ಪುರಾಣಕ್ಕೆ ಹೋಗಿ ಬಂದವರು ಭಾರತಿ ಮನೆಯಲ್ಲಿ ಲ್ಲದುದನ್ನು ಗಮನಿಸಿ "ಇದೇನು ಭಾರತಿ ಇನ್ನೂ ಬರಲಿಲ್ವೆ? ಎಲ್ಲಿಗೆ ಹೋಗಿದ್ದಾಳೆ?" ಎಂದು ಕೇಳಿದರು.

"ಇಲ್ಲೇ ಅವಳ ಸ್ನೇಹಿತೆ ನರ್ಮದಾ ಮನೆಗೆ ಹೋಗಿದ್ದಾಳೆ. ಒಟ್ಟಿಗೆ ಓದ್ಕೋತೀವಿ ಅಂತ ಎಂದು ಹೇಳಿದಳು ಗೌರಿ. ಹೋಂವರ್ಕ್ ನೋಡಿಕೊಳ್ಳುತ್ತಿದ್ದ ದಿಲೀಪ ತಲೆ ಎತ್ತಿ ತಾಯಿಯನ್ನು ನೋಡಿದ. ಅವಳು ಕಣ್ಣು ಮಿಟುಕಿಸಿದಳು.

ಕ್ಲಬ್ಬಿಗೆ ಹೊರಟಿದ್ದ ಪತಿ 'ಗೌರಿ.....' ಎಂದು ಕರೆದಾಗ ಅವನ ದನಿಯಿಂದಲೇ, ಏನೋ ಅನಾಹುತ ನಡೆದಿರಬೇಕೆಂದು ಊಹಿಸಿ ಗೌರಿ ರೂಮಿಗೆ ಓಡಿದಳು

'ನೋಡು ಈ ಕನ್ನಡಿ ಯಾರು ಒಡೆದದ್ದು? ಎರಡು ಚೂರನ್ನು ಜೋಡಿಸಿ ಹಾಗೆ ಇಟ್ಟುಬಿಟ್ಟಿದ್ದಾರೆ ಕೈಗೆ ತಗೊಂಡಾಗ ಗೊತ್ತಾಯ್ತು' ಎಂದ ಶ್ರೀನಿವಾಸ. ಮಧ್ಯಾಹ್ನ ತಾನು ತಲೆ ಬಾಚಿಕೊಂಡಾಗ ಸರಿಯಾಗಿಯೇ ಇತ್ತು ಯಾರ ಕೆಲಸವೋ ಏನೋ ಮಧ್ಯಾಹ್ನ ಕಸ ಗುಡಿಸುವಾಗ ರಾಮಿ ಏನಾದರೂ...... ಇಲ್ಲ ಆಗ ತಾನು ಅಲ್ಲೇ ಇದ್ದಳು. ಇನ್ನು ಮದು ಅವನ ರೂಮಿನಲ್ಲೇ ದೊಡ್ಡ ಕನ್ನಡಿ ಇದೆ. ಇಲ್ಲಿಗೇಕೆ ಬರುತ್ತಾನೆ? ಭಾರತಿ ಈ ರೂಮಿಗೆ ಬರುವುದೇ ಇಲ್ಲ. ಹರಿಣಿಯಂತೂ ಜ್ವರ ಬಂದು ಮಲಗಿದ್ದಾಳೆ. ಇನ್ನೂ ದಿಲೀಪ.

ಗೌರಿ ಒಡೆದ ಕನ್ನಡಿಯನ್ನು ಕೈಗೆತ್ತಿಕೊಂಡು 'ಯಾರು ಮಾಡಿದ್ರೋ ಗೊತ್ತಿಲ್ಲ. ಮಕ್ಕಳೇ ಯಾರೋ ಇರಬೇಕು. ಗೊತ್ತಾದರೆ ಬೈತಾರೆ ಅಂತ ಹಾಗೇ ಇಟ್ಟಿದಾರೆ' ಎಂದಳು.

'ಇನ್ಯಾರು ದಿಲೀಪನೇ ಇರಬೇಕು. ಎಲ್ಲಿ ಕರಿ ಅವನ್ನ" ಗೌರಿಗೆ ದೀಲೀಪನನ್ನು ಕರೆಯಲು ಇಷ್ಟವಿಲ್ಲ. ಕೋಪದಲ್ಲಿ ಶ್ರೀನಿವಾಸ ಎರಡು ಏಟು ಕೊಟ್ಟರೂ ಕೊಡಬಹುದು — ಏನೋ ಆಕಸ್ಮಾತ್ತಾಗಿ ಕೈಜಾರಿರಬಹುದು ಪಾಪ "ದಿಲೀಪ....." ಎತ್ತರದ ದನಿಯಲ್ಲಿ ಶ್ರೀನಿವಾಸನೇ ಕರೆದ, ಓದಿಕೊಳ್ಳುತ್ತಿದ್ದ ದಿಲೀಪ ಪುಸ್ತಕವನ್ನು ಮುಚ್ಚಿಟ್ಟು ಬಂದ. ಎದೆ ಸೆಟೆಸಿ ನಿಂತು 'ಏನಣ್ಣ?' ಎಂದು ಕೇಳಿದ. ಏನಂತೆ ಏನು. "ಯಾರೋ ಈ ಕನ್ನಡಿ ಒಡೆದಿದ್ದು?" "ಯಾವ ಕನ್ನಡಿ?" ನಂಗೊತ್ತಿಲ್ಲ. ಇವತ್ತೆಲ್ಲಾ ಈ ರೂಮಿಗೆ ಬಂದೇ ಇಲ್ಲಾ.

"ಸುಳ್ಳು ಹೇಳ್ತಿಯಾ?"

"ಸುಳ್ಳು ಯಾಕೆ ಹೇಳ್ಲಿ? ಈ ಮನೇಲಿ ಯಾರು ಏನು ತಪ್ಪು ಮಾಡಿದ್ರು ಎಲ್ರೂ ನನ್ನೇ

ನುಡಿಯುತಿಹ ಶಿಲೆಯು

ನೊಮ್ಮದಲ ಶಾಸನದ ಮುದ್ದು ಕನ್ನಡ ಲಿಪಿಯೇ!
ಶಿಲೆಯ ಬೆಡಗಿನ ತವರ ಹಲ್ಮಿಡಿಯ ಚೆಲುಕನ್ನೆ!

ನೀನೆಮ್ಮ ಶೋಧನೆಯ ಪರುಸಮಣಿಯಾದೆ!
ಶಿಲೆಯಾಗಿ ನೆಲಕುರುಳಿ ಕೆಡೆದರೂ ನುಡಿದೆ!

ಪುಣ್ಯರಾಮನ ಸೋಂಕಿ ಪ್ರಾಣ ವಾಯುವ ಪಡೆದೆ!
ಗೌತಮನ ಮಡದಿಯಳ ಜಡನಿದ್ದೆಯನು ಕಳೆದೆ!

ನಾಡು ನುಡಿಗಳ ಚರಿತೆಗಸುವಿತ್ತು ನಿಂದೆ!
ಹಳೆಯ ದೀಪದ ತುದಿಗೆ ಕುಡಿಯಾಗಿ ಬಂದೆ!

ನಿನ್ನ ಮೊದಲಿನ ಲಿಪಿಯದಾವ ಸೆರೆಯೊಳಗಿಹುದೊ?
ನಿಶೆಯ ಕಗ್ಗವಿಯಲ್ಲಿ ಕೊಳೆತು ಕನುರುತಲಿಹುದೊ?

ಓ ಶಾಸನದ ಮೂರ್ತಿ! ನಿನ್ನ ಹಿರಿಯರದಾರು?
ನಿನ್ನ ಮುನ್ನಿನ ನುಡಿಯ ತಿರುಳು ತಿಳಿಸುವರಾರು?

ಮತ್ತೊಮ್ಮೆ ಕಗ್ಗಲ್ಲ ಸೆರೆಯಿಂದ ಹೊರಚೆಲ್ಲು!
ನಿನ್ನಂತರಂಗದಲಿ ಅಡಗಿ ಮೂಡಿದ ಸೊಲ್ಲು!

● ಸಂಗ್ರಹ: ಬಿ. ವೀರಭದ್ರಯ್ಯ

ಅಂತೀರ ನಾನು ಒಡೆದಿದ್ರೆ ನಂದು ತಪ್ಪು ಅಂತ ಒಪ್ಕೋತಿದ್ದೆ" ತಲೆ ತಗ್ಗಿಸದೆ ಮುಖಕ್ಕೆ ಮುಖ ಕೊಟ್ಟು ನೇರವಾಗಿ ಹೇಳಿದ ರೀತಿಗೆ ಮನಸೋತ ಶ್ರೀನಿವಾಸ, ಅವನ ಬೆನ್ನು ತಟ್ಟಿ, "ಸರಿ ಹೋಗು" ಎಂದುಬಿಟ್ಟ. ಹೆಚ್ಚು ತನಿಕೆ ಮಾಡದೇ ಆ ವಿಷಯವನ್ನು ಅಲ್ಲಿಗೇ ಬಿಟ್ಟು ಕ್ಲಬ್ಬಿಗೆ ಹೊರಟುಹೋದ.

ಗೌರಿಗೆ ಮಾತ್ರ ಆ ಕೆಲಸವನ್ನು ದಿಲೀಪನೇ ಮಾಡಿರಬೇಕು ಎಂಬ ಸಂದೇಹ ಬಲವಾಗಿತ್ತು. ಶ್ರೀನಿವಾಸ ಕೇಳಿದಾಗ 'ಇಲ್ಲ' ಎಂದು ಹೇಳಿದ್ದಾನೆ. ತಂದೆ ಹೊಡೆಯುವರೆಂಬ ಭಯವಿರಬೇಕು. ತಾನು ಉಪಾಯವಾಗಿ ಕೇಳಿದರೆ ನಿಜ ಹೇಳಬಹುದು.

ಭಾರತಿ ಸದ್ದಿಲ್ಲದೆ ಬಂದು ತನ್ನಕೋಣೆಯನ್ನು ಸೇರಿಕೊಂಡಿದ್ದಳು. ಅವಳನ್ನು ಒಮ್ಮೆ ಕೇಳಿ ನೋಡೋಣವೆಂದುಕೊಂಡು ಗೌರಿ,

"**ಭಾರತಿ**, ನಮ್ಮ ರೂಮಿನ ಕನ್ನಡಿ ತಗೊಂಡಿದ್ಯ ಎಂದು ಕೇಳಿದಳು.

ಇಲ್ಲಮ್ಮ ಯಾಕೆ ಅಲ್ಲಿ ಇಲ್ವೇನು?

"ಇದೆ. ಒಡೆದು ಹೋಗಿದೆ"

"ಅಯ್ಯೋ ರಾಮ ಯಾರು ಒಡೆದರು? ಎಷ್ಟು ಚೆನಾಗಿತ್ತು ಒಳ್ಳೆ ಬೆಲ್ಜಿಯಂ ಕನ್ನಡಿ"

'ಯಾರು ಒಡೆದರು ಅನ್ನೋದು ಒಗಟಾಗಿದೆ ಈಗ'

'ದಿಲೀಪ.........'

ನಾನಲ್ಲ ಅಂತ ಹೇಳಿದ.

ರಾತ್ರಿ ಊಟ ಮುಗಿದ ಮೇಲೆ ಐದು ನಿಮಿಷವೂ ಎದ್ದಿರಲಾರ ದಿಲೀಪ. ಗೌರಿಯೂ ಅವನ ಹಿಂದೆಯೇ ಹೋಗಬೇಕು. ಪ್ರತಿನಿತ್ಯ ಮಲಗುವ ಮುನ್ನ ಕತೆ ಹೇಳಬೇಕು. ಸಂಜೆ ಕನ್ನಡಿಯ ವಿಷಯಕ್ಕೆ ಅವನು ಸುಳ್ಳು ಹೇಳಿರುವನೆಂದು ಅರಿತಿದ್ದ ಗೌರಿ ಈ ದಿನ ಪುಣ್ಯಕೋಟಿಯ ಕತೆಯನ್ನು ಹೇಳಲು ನಿಶ್ಚಯಿಸಿದಳು.

"ಕರ್ನಾಟಕ ದೇಶದಲ್ಲಿ—ಅಂದರೆ ನಮ್ಮ

ದೇಶದಲ್ಲಿ ಅರುಣಾದ್ರಿ ಎಂಬ ಬೆಟ್ಟದ ತಪ್ಪಲಿನಲ್ಲಿ ಕಾಳಿಂಗ ಎಂಬ ಗೊಲ್ಲನಿದ್ದ." ಎಂದು ಪ್ರಾರಂಭಿಸಿ ಗೊಲ್ಲನು ಮಾವಿನ ತೋಪಿನಲ್ಲಿ ಕೊಳಲೂದುತ್ತಾ ಹಸುಗಳನ್ನು ಕಾಯುತ್ತಿದ್ದುದನ್ನು ಕಣ್ಣಿಗೆ ಕಟ್ಟಿವಂತೆ ಬಣ್ಣಿಸಿದಳು. ಅರ್ಭುತನು ಪುಣ್ಯಕೋಟಿಯನ್ನು ತಿನ್ನಲೆಂದು ಬಂದುದ್ದನ್ನೂ, ಅದು ತನ್ನ ಕರುವಿಗೆ ಹಾಲು ಕುಡಿಸಿ ಬರುವುದಾಗಿ ಹೇಳಿದುದನ್ನೂ ಹೇಳಿ ತನ್ನ ಪ್ರಾಣಕ್ಕೆ ಅಪಾಯ ಬಂದ ಸಮಯದಲ್ಲೂ ಹೀಗೆ,

"ಸತ್ಯವೇ ನಮ್ಮ ತಾಯಿ ತಂದೆ....' ಎನ್ನುತ್ತ ಸತ್ಯವನ್ನು ಬಿಡಲಿಲ್ಲ ಎನ್ನುವುದನ್ನು ಬಣ್ಣಿಸಿ,

"ಈ ಕತೆಯಿಂದ ನಾವು ಏನು ಕಲಿತುಕೋಬೇಕು ಗೊತ್ತಾ ?" ಎಂದು ಕೇಳಿದಳು.

"ಊಂ ?"

"ಮಕ್ಕಳು ಯಾವಾಗಲೂ ನಿಜವನ್ನೇ ಹೇಳಬೇಕು"

"ದೊಡ್ಡೋರು ?"

"ಅವರೂ ಅಷ್ಟೆ"

"ಮಧು, ಪಕ್ಕದ ಮನೆ ಆಂಟಿ, ನೀನು ಎಲ್ರೂ ?"

ಅವನು ಏಕೆ ಹಾಗೆ ಕೇಳಿದ ಎಂದು ಗೌರಿಗೆ ಕೂಡಲೆ ಹೊಳೆಯಲಿಲ್ಲ. ಹೊಳೆದಾಗ ಗೌರಿ ಮಾತಾಡಲಿಲ್ಲ. ಅವನಿಗೆ ಕತ್ತಿನವರೆಗೆ ಹೊದಿಕೆ ಹೊದ್ದಿಸಿ ದೀಪ ಆರಿಸಿ ಈಚೆಗೆ ಬಂದಳು.

ಗೆಳೆಯ

— ಜಿ. ಎಸ್. ಉಬರಡ್ಕ.

ಸ್ನೇಹಿತರಲ್ಲಿ ಪರಮ ಸ್ನೇಹಿತನಿವ,
ದಾಸರ ಕೀರ್ತನೆಯ ಹಾಗೆ ಅಂಜಿಕಿನ್ಯಾತಕಯ್ಯಾ ಎಂದು
ಆಪದ್ಬಾಂಧವನಂತೆ ಹೆಗಲಿಗೇ ಕೈಹಾಕಿ
ಬೆಣ್ಣೆಯಲ್ಲೆಳೆವ ಕೂದಲೆಳೆ ನಯ ನಾಜೂಕು

ಮಾತಿನ ಭಾಂಗಿ ಬಿಚ್ಚುತ್ತಾ, ನಿನ್ನ ರಕ್ಷಣೆಗೆ
ಇದೊಳ್ಳೆ ಜೀವಾತುಕಣಯ್ಯ ಎಂದು
ಪುಂಗಿಯೂದುತ್ತಾ, ಸಾವಿನಾಚೆ ದಡದಿಂದ
ನಾನಿಂತ ಬದುಕಿನೀಚೆಯ ದಡಕ್ಕೆ

ಆನೆ ಕಾಡುವ ತರ ಮೆತ್ತಗೆ
ಜೀವರಕ್ಷಕ ಕ್ರೇನು ಇಳಿಸತೊಡಗುತ್ತಾನೆ.

ಸಜ್ಜನರಲ್ಲಿ ವಿನಯ ಸಂಪನ್ನಃ
ಮಂಗ ತಕ್ಕಡಿಯಲ್ಲಿ ಬೆಣ್ಣೆತೂಗಿದ ಕತೆ
ಇವನಿಗೊಂದೂ ಹಳೆಯದಲ್ಲ; ಸಮಯ ಬಂದಾಗ

ಇಬ್ಬರ ಜಗಳದಲ್ಲೇ ಇವನಿಗಾದಾಯ.
ಕತೆಯಲ್ಲಿ
ಮೊಸರನ್ನ ತಿಂದು ಆಡಿನ ಮುಸುಡಿಗೆಂಜಲು ಉಜ್ಜಿ
ಯಜಮಾನ ಬಂದಾಗ ಹಲ್ಕಿರಿದು ನಿಂತ ಮಂಗನಂಥದೆ
ಬುದ್ಧಿಯವನಿವ ; ಆಪ್ತನೆಟ್ಟ ಆಲದಮರದಡಿಯಲ್ಲಿ
ದೀರ್ಘನಿದ್ರೆಗೆ ಸಂಪ ಸಂಭಾವಿತ.

ಉತ್ಪಾತ ಪಿಂಡವಾಗುವ ಈತ
ಸದಾ ಊಸರವಳ್ಳಿ ; ಜೀವಚ್ಛವ
ಮರೆತುಬಿಡಬೇಕು ಇವನ
ಎನ್ನುವ ಉದ್ವೇಗದಲ್ಲು
ಪೂರ್ಣ ಎದೆಗುದಿ ನನಗೆ.

ಯಾಕಂತ ಕೇಳುತ್ತೀರಾ—
ನಿಮಗೆಲ್ಲರಿಗೆ ಇರುವ ಹಾಗೆ
ಫ ನ ಗೀ ತ ಲಂ ಗೋ ಟಿ ಗೆ ಳೆ ಯ.

ಉತ್ಥಾನ ದ್ವಾದಶಿ

ನವೆಂಬರ್ 26 ರಂದು ಉತ್ಥಾನದ್ವಾದಶಿ.
ಆ ಪ್ರಯುಕ್ತ ಈ ವಿಶೇಷ ಲೇಖನ

ಬೆಳಗಾದರೆ ಉತ್ಥಾನ ದ್ವಾದಶಿ; ತುಳಸೀ ಕಲ್ಯಾಣ. ಮನೆಯಾಕೆ ಮಾರನೆಯ ದಿನದ ಪೂಜೆಗೆ ಹತ್ತಿ ಬತ್ತಿಗಳನ್ನೆಲ್ಲಾ ಅಣಿಮಾಡಿಟ್ಟುಕೊಂಡರು. ಇನ್ನು ಹೂವು, ಹಣ್ಣು, ತರಕಾರಿಗಳನ್ನು ತರಿಸಬೇಕಾಗಿತ್ತು. ಮಾರ್ಕೆಟ್ಟಿಗೆ ಹೋಗಿ ಎಲ್ಲವನ್ನೂ ತರಬೇಕೆಂದು ಮಗಳಿಗೆ ಆಜ್ಞಾಪಿಸಿದರು. ಸಾಮಾನುಗಳ ಒಂದು ಪಟ್ಟಿಯೇ ಇತ್ತು. ತಾಯಿ ಹೇಳತೊಡಗಿದರು. ಮಗಳು ಕಾಗದ ಪೆನ್ಸಿಲ್‌ನ್ನು ಮುಂದಿಟ್ಟುಕೊಂಡು ಬರೆದುಕೊಳ್ಳಲು ಆರಂಭಿಸಿದಳು. ಹಣ್ಣು, ಹೂವು, ವೀಳೆಯದೆಲೆ, ಬಾಳೆಯೆಲೆ, ಬಾಳೆ ಕಂದುಗಳು, ಮೂರು ನಾಲ್ಕು ಬಗೆಯ ತರಕಾರಿಗಳು— ಇವೆಲ್ಲ ಹಬ್ಬದ ಮಾಮೂಲು. ಅವುಗಳ ಸರದಿ ಮುಗಿದ ಮೇಲೆ ಪಟ್ಟಿ ಮುಂದುವರಿಯಿತು— ನೆಲ್ಲಿರೆಂಬೆ, ಅಗಸೆರೆಂಬೆ....

ಅರಿತು ಆಚರಿಸುವುದೊಳಿತು

ಮಗಳು ತಲೆ ಕೆರೆದುಕೊಳ್ಳುತ್ತ— 'ಏನು? ನೆಲ್ಲಿರೆಂಬೆ, ಅಗಸೆರೆಂಬೆ ! ಅವು ಮಾರ್ಕೆಟ್ಟಿನಲ್ಲಿ ಸಿಕ್ಕುತ್ತವೇನು? ಸಿಕ್ಕಿದರೂ ಹೊತ್ತುಕೊಂಡು ಬರಲು ನನ್ನಿಂದ ಸಾಧ್ಯವೆ ?' ಎಂದು ಪ್ರಶ್ನಿಸಿದಳು.

'ದೊಡ್ಡ ರೆಂಬೆ ಅಲ್ಲ ಸಣ್ಣ ಸಣ್ಣ ಟೊಂಗೆ ಅಥವಾ ಕುಡಿಗಳು ಎಂದಾದರೂ ಅನ್ನಬಹುದು. ಉತ್ಥಾನ ದ್ವಾದಶಿಯ ಹಿಂದಿನ ದಿನ ಮಾರ್ಕೆಟಿನಲ್ಲಿ ಮಾರೋದಿಕ್ಕೆ ಇಟ್ಟುಕೊಂಡಿರುತ್ತಾರೆ.'

"ಆ ರೆಂಬೆಗಳು ಯಾಕೆ ಬೇಕು, ನಾಳೆ ಹಬ್ಬಕ್ಕೆ ?

"ನಾಳೆ ಆ ರೆಂಬೆಗಳನ್ನೂ ಬೃಂದಾವನದಲ್ಲಿ ಇಟ್ಟು ಪೂಜೆಮಾಡಬೇಕು."

ಮಗಳೇನೋ ಹೆಚ್ಚು ಚರ್ಚೆಮಾಡುವ ಗೋಜಿಗೆ ಹೋಗದೆ ತಾಯಿ ಹೇಳಿದ ಪದಾರ್ಥಗಳನ್ನೆಲ್ಲ ಪಟ್ಟಿಯಲ್ಲಿ ಬರೆದಳು. ಆದರೆ ಅದುವರೆಗೂ ಪ್ರೇಕ್ಷಕಳಾಗಿ ಮೌನದಿಂದ ಕುಳಿತು ಆಲಿಸುತ್ತಿದ್ದ ಅವಳ ಗೆಳತಿಗೆ ಕುತೂಹಲ ಕೆರಳಿತು. ಕೂಡಲೇ ಕೇಳಿದಳುಃ

—ಎಸ್. ಎಸ್. ರತ್ನಮ್ಮ

'ಈಗ ನನ್ನದೊಂದು ಪ್ರಶ್ನೆ. ನಾವು ತುಳಸೀ ಗಿಡಕ್ಕೆ ನಿತ್ಯವೂ ಪೂಜೆ ಮಾಡುತ್ತೇವೆ. ಆ ಗಿಡಕ್ಕೆ ಯಾಕೆ ಪೂಜೆ ಮಾಡಬೇಕು ? ಅದರ ಹಾಗೆ ಇನ್ನೂ ಎಷ್ಟೋ ಗಿಡಗಳಿರುತ್ತವಲ್ಲ ! ಅವಕ್ಕೇಕೆ ಪೂಜೆ ಮಾಡ

ಪ್ರಾಚೀನ ಪದ್ಧತಿಗಳೆಲ್ಲಕ್ಕೂ ಮೂಢನಂಬಿಕೆಗಳೆಂಬ ಲೇಬಲ್ ಅಂಟಿಸಲಾಗುತ್ತಿದೆ. ಅವುಗಳ ಅರ್ಥವನ್ನರಿತು ಆಚರಿಸಲೆತ್ನಿಸುವವರು ಅತಿ ವಿರಳ. ಉತ್ಥಾನದ್ವಾದಶಿಯಂದು ಸುಮಂಗಲಿಯರು ಪೂಜಿಸುವ 'ತುಳಸಿ' ವಿಷ್ಣುವಿನ ಪ್ರೀತಿಯ ಮಡದಿ ಮಾತ್ರವಲ್ಲ; ಮನುಷ್ಯನಿಗೆ ಮಹೋಪಕಾರಿಯೂ ಹೌದು;

ಬಾರದು ? ಉತ್ಥಾನ ದ್ವಾದಶಿಯ ದಿನ ಮಾತ್ರ ನೆಲ್ಲಿ ಅಗಸೆ ರೆಂಬೆಗಳನ್ನಿಟ್ಟು ಪೂಜೆ ಮಾಡಬೇಕೆಂದು ನೀವು ಹೇಳಿದಿರಲ್ಲ. ಉಳಿದ ದಿನಗಳಲ್ಲಿ ಇವುಗಳನ್ನೇಕೆ ಇಡುವುದಿಲ್ಲ ?'

ಈ ಪ್ರಶ್ನೆ ಎಲ್ಲರಲ್ಲಿಯೂ ಮೂಡುವುದು ಸಹಜ. ಆದರೂ ಕೆಲವರು ಹೆಚ್ಚು ಪ್ರಶ್ನಿಸುವ ಗೋಜಿಗೆ ಹೋಗದೆ 'ನಮ್ಮ ಹಿರಿಯರು ತುಳಸಿ ಪೂಜೆ ಮಾಡುತ್ತಿದ್ದರು; ನಮಗೂ ಮಾಡಬೇಕೆಂದು ಹೇಳಿದರು. ಆದ್ದರಿಂದ ನಾವೂ ತುಳಸಿ ಪೂಜೆ ಮಾಡುತ್ತೇವೆ.' ಎಂದಷ್ಟೇ ತಿಳಿದುಕೊಂಡಿರುತ್ತಾರೆ. ಯಾವುದೇ ಕಾರ್ಯವಾಗಲಿ ಅವನ್ನು ಸರಿಯಾಗಿ ಆಚರಿಸುವುದಕ್ಕಿಂತ ಅದರ ಅಂತರಾರ್ಥವನ್ನರಿತು ಆಚರಿಸುವುದರಲ್ಲಿ ಹೆಚ್ಚಿನ ಮಹತ್ವವಿದೆ.

ಸತಿಯ ಪಾತಿವ್ರತ್ಯ– ಪತಿಯ ಶ್ರೀರಕ್ಷೆ

ತುಳಸಿಯ ವಿಚಾರದಲ್ಲಿ ಪುರಾಣದ ಕಥೆಯೊಂದಿದೆ ಜಲಂಧರನೆಂಬ ಮಹಾಕ್ರೂರಿಯಾದ ರಾಕ್ಷಸನಿದ್ದ. ಬೃಂದೆಯೆಂಬ ಕನ್ಯೆಯೊಡನೆ ಇವನ ವಿವಾಹವಾಯಿತು. ಬೃಂದೆ ಅತ್ಯಂತ ರೂಪವತಿ. ಅವಳ ಸೌಂದರ್ಯಕ್ಕೆ ಮಾರುಹೋದ ಜಲಂಧರ ಅವಳನ್ನು ಮದುವೆಯಾದ. ಆದರೆ ವಿವಾಹದ ಸಮಯದಲ್ಲಿ ಏನೋ ಅಪಶಕುನವಾಯಿತೆಂದು ಸಿಟ್ಟುಗೊಂಡು ಜಲಂದರ ಬೃಂದೆಯನ್ನು ತ್ಯಜಿಸಿದ. ಬೃಂದೆ ಪತಿವ್ರತೆಯರಲ್ಲಿ ಅಗ್ರಗಣ್ಯಳು. ಪತಿಯು ತನ್ನನ್ನು ದೂರವಿಟ್ಟದ್ದರೂ ಸಿಟ್ಟಿಗೇಳದೆ ಕಾಯಾ ವಾಚಾ ಮನಸಾ ಅವನನ್ನೇ ದೇವರೆಂದು ಧ್ಯಾನಿಸುತ್ತಾ ಸದಾ ಅವನ ಶುಭವನ್ನೇ ಕುರಿತು ಚಿಂತಿಸುತ್ತಿದ್ದಳು. ಅವಳ ಪಾತಿವ್ರತ್ಯ ಮಹಿಮೆಯೇ ಜಲಂಧರನಿಗೆ ರಕ್ಷೆಯಾಗಿತ್ತು. ಎಲ್ಲಿ ಹೋದರೂ ಅವನಿಗೆ ವಿಜಯೋತ್ಸಾಹ, ಸೋಲೆಂಬುದೆ ತಿಳಿಯದು.

ಅಹಂಕಾರದಿಂದ ಮೆರೆಯುತ್ತಿದ್ದ ಜಲಂಧರ ಸ್ವರ್ಗಾಧಿಪತಿಯಾದ ಇಂದ್ರನ ವಸ್ತುಗಳಾದ ಕಾಮಧೇನು ಕಲ್ಪವೃಕ್ಷ ಮತ್ತು ಐರಾವತಗಳನ್ನು ತನ್ನ ವಶಪಡಿಸಿಕೊಳ್ಳಲು ಇಂದ್ರ ರಾಜಧಾನಿಗೆ ಧಾಳಿಯಿಟ್ಟ. ಜಲಂಧರನ ಪರಾಕ್ರಮವನ್ನು ಕೇಳಿ ತಿಳಿದಿದ್ದ ಇಂದ್ರ ಅವನನ್ನೆದುರಿ-

ಪ್ರಜಾಪ್ರಭುತ್ವದ ಸೋಗಿನಲಿ ನಡೆವ ಸರ್ವಾಧಿಕಾರ ಸರ್ಕಾರ
ಇದರಲ್ಲಿರುವವರೆಲ್ಲ ತೋರುವರು ಬರೀ ಡಂಬ ಸಹಕಾರ
ಈ ಅಧಿಕಾರ ದಾಹಿಗಳು ಮಾಡುವರೆ ಜನಗಳಿಗುಪಕಾರ ?
ಇಲ್ಲ! ಇವರಿಗೆ ತಿಳಿದಿರುವುದೊಂದೆ ಹಾಕುವುದು ಹೆಜ್ಜೆ
ಹೆಜ್ಜೆಗೂ ಕರಭಾರ.

— ಕೆಹೆಚ್.

ಸುವ ಗೋಜಿಗೆ ಹೋಗದೆ, ಯುಕ್ತಿಯಿಂದ ಅವನನ್ನು ಗೆಲ್ಲಲು ಹವಣಿಸಿದ. ಬೃಂದೆಯು ಪಾತಿವ್ರತ್ಯಹರಣವಾಯಿತೆಂದರೆ ಜಲಂಧರನ ಸೋಲು ಖಚಿತವೆಂದು ಅವನಿಗೆ ಹೊಳೆಯಿತು. ಆ ಕೆಲಸಕ್ಕೆ ತಾನೇ ಹೊರಟು ಬೃಂದೆಯಿಂದ ಛೀಮಾರಿ ಹಾಕಿಸಿಕೊಂಡು ಹಿಂದಿರುಗಿದ. ಕಡೆಗೆ ತಾನೇ ಸೋತು ತನ್ನ ಅಮೂಲ್ಯ ವಸ್ತುಗಳನ್ನು ಜಲಂದರನಿಗೆ ಒಪ್ಪಿಸಿ ತೆಪ್ಪಗಾದ.

ಇಷ್ಟಕ್ಕೇ ತೃಪ್ತನಾಗದ ಜಲಂಧರ ಕೈಲಾಸಕ್ಕೆ ಹೊರಟ. ಪರಮೇಶ್ವರನ ಪತ್ನಿಯಾದ ಪಾರ್ವತಿಯನ್ನೇ ಮೋಹಿಸಿ, ಪತ್ನಿಯಾಗೆಂದು ಅವಳನ್ನು ಪೀಡಿಸತೊಡಗಿದ. ಈ ವಿಚಾರ ಈಶ್ವರನಿಗೆ ತಿಳಿಯಿತು. ಹರಿ-ಹರರಿಬ್ಬರೂ ಒಟ್ಟಾಗಿ ಮಂತ್ರಾಲೋಚನೆ ನಡೆಸಿದರು. ಬೃಂದೆಯ ಪಾತಿವ್ರತ್ಯಹರಣವಾದಲ್ಲದೆ ಜಲಂಧರನ ಹತ್ಯೆ ಸಾಧ್ಯವಿರಲಿಲ್ಲ. ಕೊನೆಗೆ ವಿಷ್ಣುವೇ ಜಲಂದರನ ವೇಷದಲ್ಲಿ ಹೋಗಿ ಬೃಂದೆಯ ಪಾತಿವ್ರತ್ಯಭಂಗ ಮಾಡಬೇಕೆಂದೂ, ಆಗ ಈಶ್ವರನಿಂದ ಜಲಂಧರನ ಹರಣವಾಗಬೇಕೆಂದೂ ತೀರ್ಮಾನವಾಯಿತು.

ವಿಷ್ಣು ಜಲಂಧರನ ರೂಪಿನಿಂದ ಬೃಂದೆಯ ಅರಮನೆಯನ್ನು ಪ್ರವೇಶಿಸಿದ. ಇಷ್ಟು ದಿನ ತನ್ನನ್ನು ತ್ಯಜಿಸಿದ್ದ ಪತಿ ಇಂದಾದರೂ ಬಳಿಗೆ ಬರುವಂತಾಯಿತಲ್ಲ ಎಲ್ಲವೂ ಗೌರಿ ದೇವಿಯ ದಯೆ' ಎಂದುಕೊಂಡ ಬೃಂದೆ ಮಾಯಾರೂಪದ ಜಲಂಧರನಿಗೆ ಸುಸ್ವಾಗತ ನೀಡಿದಳು. ಇಬ್ಬರೂ ಉದ್ಯಾನವನದಲ್ಲಿ ಆನಂದದಿಂದ ವಿಹರಿಸುತ್ತ ಕಾಲ ಕಳೆಯತೊಡಗಿದರು. ಇತ್ತ ಬೃಂದೆ ಮಾಯಾ ಜಲಂಧರನ ಬಳಿಗೆ ಬಿದ್ದುದ್ದೇ ತಡ; ಅತ್ತ ಜಲಂಧರನ ವಧೆಯಾಯಿತು. ಆ ರುಂಡ ಉದ್ಯಾನ ವನದಲ್ಲಿ ವಿಹರಿಸುತ್ತಿದ್ದ ಬೃಂದೆಯ ಕಾಲಡಿಯಲ್ಲಿಯೇ ಬಂದು ಬಿತ್ತು. ಆ ರುಂಡ ಭೂಸ್ಪರ್ಶ ವಾದೊಡನೆ ಜಲಂಧರ ರೂಪಿನ ವಿಷ್ಣು ಮಾಯವಾಗಿದ್ದ.

ಗೊತ್ತುಂಟೆ ನಿಮಗೆ ಕಳ್ಳ ಸಾಗಣೆದಾರರ ಗೆಲುವಿನ ತಂತ್ರ
ಅವರ ಗೆಲುವಿಗೆ ಸಹಕಾರಿ ನಮ್ಮ ರಾಜಕೀಯ ಯಂತ್ರ
ಅವರ ಬಂಧನವೂ ಅಷ್ಟೆರಾಜಕೀಯದ ಒಂದು ಆಟ
ಪುಢಾರಿಗಳಿಗಿದು ಹೊಸದಲ್ಲ ಇಂತಹ ಪಗಡೆಯಾಟ

—ಕೆಹೆಚ್

ಬೃಂದೆ ಗಾಬರಿಯಿಂದ ಪರಿತಪಿಸಿದಳು. ಪಕ್ಕದಲ್ಲೇ ಇದ್ದ ಪತಿಯ ರುಂಡ ಹೇಗೆ ಬಿತ್ತು ? ಉಳಿದ ದೇಹವೆಲ್ಲಿ ? ಇದು ತನ್ನ ಪತಿಯ ರುಂಡವೇ ನಿಜ ಪತಿಗೆ ಮರಣವೊದಗಿರಬೇಕಾದರೆ ತನ್ನ ಪಾತಿವ್ರತ್ಯ ಭಂಗವಾಯಿತೇ ? ಹಾಗಾದರೆ ಇದುವರೆಗೂ ತನ್ನ ಬಳಿ ಇದ್ದವನು ತನ್ನ ಪತಿಯಲ್ಲವೇ? ಈ ಆಲೋಚನೆಗಳು ಅವಳಿಗೆ ಬಂದವು. ಇದೇನೋ ಕೃತ್ರಿಮವಿರಬೇಕೆಂದು ನಿರ್ಧರಿಸಿದಳು. ಆ ಕ್ಷಣವೇ ಅವಳು ರೋಷದಿಂದ— „ಅಗೋಚರನಾಗಿರುವ ವಂಚಕನೇ, ನೀನು ನನ್ನನ್ನು ವಂಚಿಸಿ ನನ್ನ ಪತಿಯನ್ನು ಕೊಲ್ಲಿಸಿರುವ ಮಹಾಪಾತಕಿಯಾಗಿರುವೆ. ನಾನು ಪತಿವ್ರತೆಯಾಗಿ 'ಕಾಯಾ ವಾಚಾ ಮನಸಾ ನನ್ನ ಪತಿಯ ಹಿತವನ್ನೇ ಬಯಸುತ್ತಿದ್ದುದು ನಿಜವಾದರೆ ಈ ಕ್ಷಣವೇ ನೀನು ಕಲ್ಲಾಗು."ಎಂದು ಶಾಪವಿತ್ತಳು. ಕೂಡಲೇ ವಿಷ್ಣು ಬೃಂದೆಯೆದುರು ಕಲ್ಲಾಗಿ ನಿಂತ. ಬೃಂದೆ ತಡಮಾಡದೆ ತನ್ನ ಕಾಲಬಳಿ ಬಿದ್ದಿದ್ದ ರುಂಡಕ್ಕೆ ಅಗ್ನಿ ಸಂಸ್ಕಾರ ಮಾಡಿ,ಆ ಚಿತೆಯಲ್ಲಿ ತಾನೂ ಸಹಗಮನ ಮಾಡಿದಳು. ವೈಧವ್ಯದಿಂದ ಪಾರಾದಳು.

ವಿಷ್ಣು ಕಲ್ಲಾಗಿ ನಿಂತೊಡನೆ ದೇವತೆಗಳೆಲ್ಲ ಕಂಗೆಟ್ಟರು. ಕೈಲಾಸಕ್ಕೆ ಹೊರಟು ಶಂಕರನಲ್ಲಿ ನಡೆದ ಸಂಗತಿಯನ್ನು ಬಿನ್ನವಿಸಿಕೊಂಡರು. ಆಗ ಪರಮೇಶ್ವರ ಪತಿವ್ರತೆಯಿತ್ತ ಶಾಪವನ್ನು ವಿಮೋಚನೆ ಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ. ಬೃಂದೆಯನ್ನೇ ಬದುಕಿಸಿ ಆಕೆಯಿಂದಲೇ ಕೊಡಿಸಬೇಕು. ಅವಳು ಜೀವಿಸಬೇಕಾದರೆ ಅವಳಿಗೆ ಪತಿ ಭಾಗ್ಯದೊರೆಯಬೇಕು. ಅಂದರೆ ಜಲಂದರನೂ ಬದುಕಬೇಕು. ಆಗಲಿ ಮೊದಲು ಆ ದಂಪತಿಗಳು ಜೀವಂತವಾಗಿರಲಿ." ಎಂದು ನಿರ್ಧರಿಸಿ, ಬೃಂದೆ ಸಹಗಮನ ಮಾಡಿದ ಸ್ಥಳಕ್ಕೆ ಬಂದು ತನ್ನ ಮಹಿಮಾ ಶಕ್ತಿಯಿಂದ ಇಬ್ಬರನ್ನು ಬದುಕಿಸಿದ.

ಪುನರ್ಜನ್ಮ ಪಡೆದ ಜಲಂದರ ಸಂಪೂರ್ಣಲಾಗಿ ಶಿವಭಕ್ತನಾಗಿದ್ದ. ಬೃಂದೆಗೂ ಪುನರ್ಜನ್ಮ ಲಭಿಸಿತು. ಎದುರಿಗೆ ನಿಂತಿರುವುದು ವಿಷ್ಣುವೆಂಬುದು ಬೃಂದೆಗೆ ತಿಳಿದೊಡನೆ ಅವಳು ಗಾಬರಿಯಿಂದ ಪರಿತಪಿಸಿದಳು. ಅನಂತರ ಈಶ್ವರನ ಕೋರಿಕೆಯಂತೆ—"ತ್ರಿಮೂರ್ತಿ ಪತ್ನಿಯರಾದ ಲಕ್ಷ್ಮಿ' ಸರಸ್ವತಿ, ಪಾರ್ವತಿಯರು ನಾನು ಸಹಗಮನ ಮಾಡಿರುವ ಚಿತೆಯ ಭಸ್ಮರಾಶಿಯ ಮೇಲೆ ತುಳಸಿ,ಅತಸಿ (ಅಗಸೆ)ಮತ್ತು ಧಾತ್ರಿ(ನೆಲ್ಲಿ)ಬೀಜಗಳನ್ನು ಬಿತ್ತಲಿ. ಬಿತ್ತಿದೊಡನೆ ಅವು ಮೊಳೆತು ಗಿಡಗಳಾಗುತ್ತವೆ. ಶಿಲೆಯಲ್ಲಡಗಿರುವ ಮಹಾವಿಷ್ಣುವಿನ ದೃಷ್ಟಿಗೆ ಆ ಗಿಡಗಳು ಗೋಚರಿಸಿದೊಡನೆಯೇ ನಿಜಸ್ವರೂಪ ಬರುವುದು.'ಎಂದು ಶಾಪವನ್ನು ಇತ್ತಳು.

ತುಳಸಿಯು—ವಿಷ್ಣು ಪ್ರಿಯೆ

ಅವಳ ಹೇಳಿಕೆಯಂತೆಯೇ ಎಲ್ಲವೂ ನಡೆಯಿತು. ನಿಜರೂಪದಲ್ಲಿ ನಿಂತ ವಿಷ್ಣುವಿನ ಪಾದಗಳಿಗೆ ಬೃಂದೆ ಮಣಿದು "ಅರಿಯದೆ ಮಾಡಿದ ಅಪರಾಧವನ್ನು ಮನ್ನಿಸಬೇಕು 'ಎಂದು ಬೇಡಿಕೊಂಡಳು. ವಿಷ್ಣು ಪ್ರಸನ್ನನಾಗಿ – ಬೃಂದಾದೇವಿ, ಇದರಲ್ಲಿ ನಿನ್ನ ಅಪರಾಧವೇನೂ ಇಲ್ಲ. ಲೋಕಕಲ್ಯಾಣಕ್ಕಾಗಿ ನಿನ್ನ ಪತಿಯ ವಧೆಯಾಗುವುದು ಅನಿವಾರ್ಯವಾಗಿತ್ತು. ನಿನ್ನ ಪತಿವ್ರತಾ ಮಹಿಮೆಯನ್ನು ಈಗ ಲೋಕವೆಲ್ಲಾ ಅರಿಯುವಂತಾಯಿತು. ನಿನ್ನ ಪತಿಯ ಪುನರ್ಜನ್ಮ ಪಡೆದು ಶಿವಗಣಗಳಲ್ಲಿ ಶಾಶ್ವತಸ್ಥಾನವನ್ನು ಗಳಿಸಿಕೊಂಡಿರುವನು. ನೀನೂ ಸಹ ಚಿತೆಯಲ್ಲಿ ಬಿದ್ದು ಪುನೀತಳಾಗಿ ಭಸ್ಮರಾಣಿಯಲ್ಲಿ ತುಳಸೀರೂಪದಿಂದ ಪೂನರ್ಜನ್ಮ ಪಡೆದಿರುವೆ. ಇನ್ನು ಮುಂದೆ ನೀನು ನನ್ನ ಭಕ್ತಳಷ್ಟೇ ಅಲ್ಲ ಪ್ರಿಯೆಯೂ ಹೌದು .ನೀನು ತುಳಸೀ ಪತ್ರರೂಪದಲ್ಲಿ ಸದಾ ನನ್ನ ಹೃದಯದಲ್ಲಿ ನೆಲೆಸಿರು. ತುಳಸೀ ಪತ್ರದಿಂದ ನನ್ನನ್ನು ಅರ್ಚಿಸಿದವರಿಗೆ ಪುಣ್ಯವೂ ಶ್ರೇಯಸ್ಸೂ ಲಭಿಸಲಿ, ಎಂದು ಹೇಳಿದ.

ತುಳಸಿಯಾದ ಬೃಂದೆ ಮಹಾ ವಿಷ್ಣುವಿನ ಪತ್ನಿಯಾದಳು. ತುಳಸೀಪತ್ರ ತುಳಸೀಹಾರ ವಿಷ್ಣುಪ್ರಿಯವಾದುವು. ತುಳಸಿ ವಿಷ್ಣು ಪ್ರಿಯೆಯಾದ ಶುಭದಿನವೇ– ಉತ್ಥಾನದ್ವಾದಶಿಯಾಯಿತು. ಮಹಾಲಕ್ಷ್ಮಿಗೆ ಮುತ್ತೈದೆ ಭಾಗ್ಯದೊರಕಲು ಕಾರಣವಾದ ಅಗಸೆ, ನೆಲ್ಲಿ ಗಿಡಗಳೂ ಉತ್ಥಾನದ್ವಾದಶಿಯಂದು ಪೂಜನೀಯ ವಸ್ತುಗಳಾದವು

ಮುತ್ತೈದೆ ಭಾಗ್ಯವನ್ನು ಕರುಣಿಸೆಂದು ಬೇಡುತ್ತ ಸುಮಂಗಲಿಯರು ಪ್ರತಿದಿನ ತುಳಸೀಪೂಜೆ ಮಾಡುವರು. ಉತ್ಥಾನ ದ್ವಾದಶಿಯಂದು ಎಲ್ಲಾ ಮನೆಗಳಲ್ಲಿಯೂ ವೈಭವದಿಂದ ತುಳಸೀಕಲ್ಯಾಣವನ್ನು ಆಚರಿಸುವರು. "ಆಲಯಕೆ ಭೂಷಣ ತುಳಸಿ ಬೃಂದಾವನ" ಎಂದು ದಾಸವರೇಣ್ಯರೂ ಹಾಡಿ ಹೊಗಳಿದ್ದಾರೆ.

ಕೇವಲ ಒಂದು ಪುರಾಣದ ಕತೆಯನ್ನು ನಂಬಿ ತುಳಸಿಗೆ ಇಷ್ಟೊಂದು ಮಹತ್ವವೇ ಎಂಬ ಪ್ರಶ್ನೆ ಮಾಡಿದರೂ ಮಾಡಬಹುದು. ಪುರಾಣದ ಕತೆ ಭಕ್ತಿ,ಶ್ರದ್ಧೆಗಳಿಗೆ ಹಿನ್ನೆಲೆಯಾಯಿತು, ತುಳಸಿಯಲ್ಲಿ ಅನೇಕ ಉನ್ನತಗುಣಗಳಿದ್ದು, ಮಾನವನಿಗೆ ಉಪಕಾರಿಯೂ ಆಗಿರುವುದು ಗಮನಾರ್ಹವಾದ ವಿಚಾರ.

ಸರ್ವರೋಗ ನಿವಾರಣೆ

ನಿರ್ಮೂಲವೂ ಪವಿತ್ರವೂ ಆಗಿರುವ ತುಳಸೀ ಆಯುರ್ವೇದದ ದೃಷ್ಟಿಯಲ್ಲಿ ಸಂಜೀವಿನಿ. ಅನೇಕ ರೋಗಗಳಿಗೆ ದಿವ್ಯೌಷಧ. ಹಲ್ಲುನೋವು,ಬಾಯಿಹುಣ್ಣು,ಹೊಟ್ಟೆನೋವು'ಕಿವಿನೋವು,ವಮನ ಬಾಧೆ, ಶೀತ ಕಫದ ಬಾಧೆ ಹೀಗೆ ಇನ್ನೂ ಹಲವಾರು ಕಾಯಿಲೆಗಳಿಗೆ ತುಳಸಿಯನ್ನು ಔಷಧದ ರೂಪದಲ್ಲಿ ಬಳಸುವರು. ಆಯುರ್ವೇದವು ತುಳಸಿಯನ್ನು ಸರ್ವರೋಗಹರವೆಂದು ಕರೆದಿದೆ. ತುಳಸಿಯು ವಿಷನಾಶಕಕಾರಿ ಗುಣ ಪಡೆದಿದೆ. ಗಿಡಗಳ ಮೇಲೆ ತೂರಿಬರುವ ಗಾಳಿ ಸೇವನೆಯಿಂದ ಆರೋಗ್ಯವೃದ್ಧಿ. ಈ ಕಾರಣದಿಂದಲೇ ಕೆಲವರು ಮನೆಯ ಸುತ್ತ ಯಥೇಚ್ಛವಾಗಿ ತುಳಸಿಗಿಡಗಳನ್ನು ಬೆಳಸಿ ತುಳಸೀವನವನ್ನು ನಿರ್ಮಿಸಿಕೊಂಡಿರುತ್ತಾರೆ. ಆಯುರ್ವೇದದ ಮಹತ್ವವನ್ನರಿತು ಅದರ ವ್ಯಾಸಂಗಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕುತ್ತಿರುವ ಈ ಕಾಲದಲ್ಲಿ ತುಳಸಿಯ ಬಗ್ಗೆ ಹೆಚ್ಚು ಹೆಚ್ಚಿನ ಸಂಶೋಧನೆಗೆ ಪ್ರಯತ್ನಗಳು ನಡೆಯುತ್ತಿವೆ.

ತುಳಸಿಯಂತೆಯೇ ಅಗಸೆ, ನೆಲ್ಲಿಕಾಯಿ ಇವುಗಳಲ್ಲಿಯೂ ವಿಶೇಷ ಗುಣಗಳುಂಟು. ಹದಿನೈದು ದಿನಗಳಿಗೊಮ್ಮೆ ಏಕಾದಶಿ ಉಪವಾಸ ಮಾಡಬೇಕೆಂಬ ನಿಯಮ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ವಿಷಯ. ಕಟ್ಟುಪಾಡಿಗೆ ಆರೋಗ್ಯ ರಕ್ಷಣೆಯೂ ಒಂದು ಕಾರಣವೆಂದು ಹೇಳಬಹುದು. ಏಕಾದಶಿಯಂದು ಒಂದು ದಿನ ಪೂರ್ತಿ ಆಹಾರದ ಸೇವನೆಯಿಲ್ಲದಿರುವುದರಿಂದ — ಏಕಾದಶಿಯ ನೆಪದಲ್ಲಿ ರುಚಿರುಚಿಯಾದ, ತಿಂಡಿ ತಿನಿಸುಗಳನ್ನು ತಿನ್ನುತ್ತ ನಾಲಿಗೆಯ ಚಪಲ ಅಡಗಿಸಿ ಕೊಳ್ಳುವವರ ವಿಚಾರ ಬೇರೆ—ಜೀರ್ಣಾಂಗಗಳು ಸ್ತಬ್ದವಾಗಿ ಬಿಟ್ಟಿರುತ್ತವೆ. ಮಾರನೆಯ ದಿನ ಅಂದರೆ ದ್ವಾದಶಿಯಂದು ಊಟದಲ್ಲಿ ನೆಲ್ಲಿಕಾಯಿ, ಅಗಸೆಸೊಪ್ಪುಗಳನ್ನು ಬಳಸಬೇಕೆಂದು ನಮ್ಮ ಪೂರ್ವಿಕರು ಕಟ್ಟುಪಾಡು ಮಾಡಿದ್ದಾರೆ. ಅದಕ್ಕೆ ಕಾರಣವಿಷ್ಟೆ. ನೆಲ್ಲಿಕಾಯಿಯ ವ್ಯಂಜನ; ಮಧ್ಯದಲ್ಲಿ ಅಗಸೆ ಸೊಪ್ಪಿನ ಪಲ್ಯ ಸೇವಿಸಿದರೆ ಜೀರ್ಣಾಂಗಗಳು ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ತಮ್ಮ ಕೆಲಸವನ್ನು ಮಾಡುತ್ತವೆ.

ನೆಲ್ಲಿಕಾಯಿ ವರ್ಷದ ಎಲ್ಲಾ ಕಾಲದಲ್ಲಿಯೂ ಸಿಕ್ಕುವುದೇ ಎಂದು ಯಾರಾದರೂ ಪ್ರಶ್ನಿಸಬಹುದು. ಇದಕ್ಕೂ ನಮ್ಮ ಪೂರ್ವಿಕರಲ್ಲಿ ಉತ್ತರ ಸಿದ್ಧವಾಗಿದೆ. ನೆಲ್ಲಿಕಾಯಿಯ ಕಾಲವೆಂದರೆ ಉತ್ಥಾನ ದ್ವಾದಶಿಯ ಹಿಂದೆ ಮುಂದೆ ಅಥವಾ ಕಾರ್ತೀಕ ಮಾಸ. ಆಗ ಒಟ್ಟಾಗಿ ತೆಗೆದುಕೊಂಡು ಹದವನ್ನರಿತು ಅದನ್ನು ಒಣಗಿಸಿ, ವರ್ಷದ ಎಲ್ಲಾ ದ್ವಾದಶಿಯಲ್ಲಿಯೂ ಬಳಸಿಕೊಳ್ಳಬಹುದು.

ಒಂದು ವಸ್ತುವಿನಲ್ಲಿರುವ ಶ್ರೇಷ್ಠ ಗುಣಗಳನ್ನರಿತು ಅದಕ್ಕೆ ನಮ್ಮ ಪೂರ್ವಿಕರು ಪವಿತ್ರ ಸ್ಥಾನವನ್ನು ಕೊಡುತ್ತಿದ್ದರು. ಆ ವಸ್ತುವಿಗೆ ಧಾರ್ಮಿಕ ಹಿನ್ನೆಲೆಯನ್ನೂ ಕೊಡುತ್ತಿದ್ದರು. ಈ ಹಿನ್ನೆಲೆಯಿಂದಾಗಿ ಜನರಿಗೆ ಅವುಗಳ ವಿಚಾರದಲ್ಲಿ ಶ್ರದ್ಧಾಭಕ್ತಿಗಳು ಇಮ್ಮಡಿಯಾಗುತ್ತಿದ್ದವು. ಬಳಕೆ ಜಾಸ್ತಿಯಾಗುತ್ತಿತ್ತು.. ಉತ್ತಮ ಆರೋಗ್ಯಲಭಿಸುತ್ತಿತ್ತು.

ಇಂದಿನವರು ಪೂರ್ವಿಕರ ವಿಚಾರಗಳಿಗೆ ಮೌಢ್ಯವೆಂಬ ಒಂದು ಹೆಸರನ್ನು ಅಂಟಿಸಿ ಬಿಟ್ಟಿದ್ದಾರೆ. ಅದು ಸಲ್ಲದು. ವಿಚಾರಗಳನ್ನು ಮನನ ಮಾಡಿ ಕೊಂಡು ಅಂತರಾರ್ಥವನ್ನು ಅರಿಯಲು ಪ್ರಯತ್ನಪಡಬೇಕು. ನಾವು ಆಚರಿಸುವ ಯಾವುದೇ ಹಬ್ಬ ವಾರಗಳಾಗಲೀ, ಅದನ್ನು ಏಕೆ ಆಚರಿಸುತ್ತಿದ್ದೇವೆಂಬ ತಿಳಿವಳಿಕೆಯಿದ್ದು ಆಚರಿಸಿದರೆ ಆಗಲೇ ಅದಕ್ಕೇ ಹೆಚ್ಚಿನ ಗೌರವ ಹಾಗೂ ಮಹತ್ವ.

ನಮ್ಮ ಸಂಸ್ಥೆಗಳು - 2.



ಸಕಾಲಿಕ ಸ್ಥಾಪನೆ

ಸುಮಾರು ಹತ್ತು ವರ್ಷಗಳ ಹಿಂದಿನ ಮಾತು. ತುಮಕೂರಿನಲ್ಲಿ ನಡೆಯುತ್ತಿದ್ದುದು ಸರ್ಕಾರಿ ಕಾಲೇಜು ಒಂದು ಮಾತ್ರ. ಕಾಲೇಜು ವಿದ್ಯಾಭ್ಯಾಸ ಬಯಸಿ ಜಿಲ್ಲೆಯ ಮೂಲೆಗಳಿಂದೆಲ್ಲಾ ಬರುತ್ತಿದ್ದರು. ಈಗಂತೂ ನಾಲ್ಕೈದು ಕಾಲೇಜುಗಳಿವೆ. ಹತ್ತಾರು ಜೂನಿಯರ್ ಕಾಲೇಜುಗಳಿವೆ. ಬಡ ಮಕ್ಕಳಿಗಂತೂ, ಆ ಬವಣೆಯಲ್ಲಿ ಹೆಚ್ಚು ಅಂಕಗಳನ್ನು ಪಡೆಯಲಾಗುತ್ತಿರಲಿಲ್ಲ; ಪಡೆಯದೆ ಸ್ಥಳಾವಕಾಶವಿಲ್ಲ; ಅರ್ಹತೆಯ ಆಧಾರದ ಮೇಲೆ ಸ್ಥಳಗಳ ಹಂಚಿಕೆಯಾಗುತ್ತಿತ್ತು. ಇದನ್ನು ಗಮನಿಸಿದ ಶ್ರೀ ಸಿದ್ಧಗಂಗಾ ಶ್ರೀಗಳವರು ತಮ್ಮ ಶಿಕ್ಷಣ ಸಂಸ್ಥೆಯ ಅಂಗವಾಗಿ ಅಂದು ಪ್ರಾರಂಭಿಸಿದ ಕಾಲೇಜು, ನಗರದ ವಕ್ಷಸ್ಥಲದಲ್ಲಿ ಮಹಾವೃಕ್ಷವಾಗಿ ಬೆಳೆದು ಸಹಸ್ರಾರು ವಿದ್ಯಾರ್ಥಿಗಳಿಗೆ ತಣ್ಣೆರಳ ನೀಡುತ್ತಿದೆ.

ವಾಯ್ತು. ಕನ್ನಡ, ಸಂಸ್ಕೃತ, ಇಂಗ್ಲೀಷು, ಹಿಂದಿ ಮತ್ತು ಉರ್ದು ಭಾಷೆಗಳ 10,000 ಪುಸ್ತಕಗಳು ಇವೆ. ಇವುಗಳ ಒಟ್ಟು ಬೆಲೆ ಸುಮಾರು ಎರಡು ಲಕ್ಷ ರೂಗಳಾಗುತ್ತವೆ ಎಂಬುದಾಗಿ ತಿಳಿಸಿದರು. ವಿಜ್ಞಾನ ವಿಷಯಗಳಿಗೆ ಪ್ರತಿ ವಿಷಯಕ್ಕೂ ಪ್ರತ್ಯೇಕ ಪ್ರಯೋಗಾಲಯಗಳನ್ನೊದಗಿಸಿರುತ್ತಾರೆ. ಒಟ್ಟು ಉಪಕರಣಗಳ ಬೆಲೆ ಸುಮಾರು ನಾಲ್ಕು ಲಕ್ಷ ರೂಗಳೆಂಬುದಾಗಿ ಅಂದಾಜು ಮಾಡಲಾಯಿತು.

ಶ್ರೀ ಸಿದ್ಧಗಂಗಾ ವಿಜ್ಞಾನ, ಕಲೆ ಮತ್ತು ವಾಣಿಜ್ಯ ಕಾಲೇಜು, ತುಮಕೂರು.

ಅಲ್ಪಾವಧಿಯಲ್ಲಿ ಬೆಳವಣಿಗೆ

ಈ ಸಾಲಿನಲ್ಲಿ ಒಟ್ಟು 1600 ವಿದ್ಯಾರ್ಥಿಗಳು ವಿಜ್ಞಾನ, ಕಲೆ ಹಾಗೂ ವಾಣಿಜ್ಯ ವಿಷಯಗಳಲ್ಲಿ ವ್ಯಾಸಂಗ ಸಾಗಿಸುತ್ತಿದ್ದಾರೆ. ಸುಮಾರು ಅರವತ್ತು ಮಂದಿ ನುರಿತ ವಿದ್ವಾಂಸರುಗಳು ಬೋಧಿಸುತ್ತಿದ್ದಾರೆ. ನಲವತ್ತಕ್ಕೂ ಮಿಕ್ಕ ಸಿಬ್ಬಂಧಿ ವರ್ಗದವರು ಕೆಲಸ ಮಾಡುತ್ತಿದ್ದಾರೆ. ಇಷ್ಟು ಕಡಿಮೆ ಅವಧಿಯಲ್ಲಿಯೇ ನಿರ್ಮಿಸಿರುವ ಪುಸ್ತಕ ಭಂಡಾರವನ್ನು ಕಂಡು ಸೋಜಿಗ

ತಜ್ಞ ಪ್ರಿನ್ಸಿಪಾಲರು

ಪರಮ ಪೂಜನೀಯ ಗುರುಗಳ ಆಡಳಿತದಲ್ಲಿರುವುದು ಹೇಗೆ ಕಾಲೇಜಿನ ಪುಣ್ಯವೋ, ಅದೇ ರೀತಿಯಾಗಿ, ಇದರ ಜೊತೆಗೆ, ಸಮಾಜ ಶಾಸ್ತ್ರಜ್ಞರು ಅನುಭವಿಗಳೂ ಆದ ಪ್ರಿನ್ಸಿಪಾಲರ ಉತ್ತಮ ಮಾರ್ಗದರ್ಶನ

ವೂ ದೊರೆತಿದೆ. **ಡಾ|| ಸಿ. ಆರ್. ಹಾಲಸ್,** ಸೌಜನ್ಯತೆಯ ವ್ಯಕ್ತಿ. ದೇಶವಿದೇಶಗಳಲ್ಲಿನ ಶಿಕ್ಷಣ ಪದ್ಧತಿಗಳ ಪರಿಚಯವುಳ್ಳ ಇವರು ಅನೇಕ ವಿಷಯಗಳ ಬಗ್ಗೆ ಸ್ವಾರಸ್ಯಕರ ಉತ್ತರಗಳನ್ನಿತ್ತರು. ಇಲ್ಲಿನ ಇತರೆ ಕಾಲೇಜುಗಳಲ್ಲಿಲ್ಲದ ಅನೇಕ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಿರುವುದಾಗಿ ತಿಳಿಸಿದರು.

ಆಕ್ಸ್‌ಫರ್ಡ್ ಮಾದರಿ ಯೋಜನೆ

ವಿದ್ಯಾರ್ಥಿಗಳಿಗೆ ಯೋಗ್ಯ ಮಾರ್ಗದರ್ಶನವಿಲ್ಲ. ಈ ಮಾತು ಎಲ್ಲಾ ಕಡೆಗೂ ಇದೆ. ಈ ಕೊರತೆಯ ನಿವಾರಣೆಗಾಗಿ ಶಿಕ್ಷಕ–ವಿದ್ಯಾರ್ಥಿಗಳಲ್ಲಿ ಆತ್ಮೀಯತೆ ಬೆಳೆಯಬೇಕು ಎನ್ನುತ್ತಾರೆ ಪ್ರಿನ್ಸಿಪಾಲರು. ಆಕ್ಸ್‌ಫರ್ಡ್–ಕೇಂಬ್ರಿಡ್ಜ್ ಇತರೆಡೆಗಳಲ್ಲಿನ ಒಂದು ಯೋಜನೆ ಇಲ್ಲಿಯೂ ಜಾರಿಗೆ ತಂದಿರುವುದಾಗಿ ಹೇಳಿದರು. ಸುಮಾರು ಇಪ್ಪತ್ತು ವಿದ್ಯಾರ್ಥಿಗಳ ಒಂದು ಗುಂಪಿಗೆ ಒಬ್ಬ ಉಪನ್ಯಾಸಕರು ಮಾರ್ಗದರ್ಶಕರು. ಇವರು ಆಯಾ ವಿದ್ಯಾರ್ಥಿಗಳನ್ನು ತಮ್ಮ ಬಿಡುವಿನ ವೇಳೆಯಲ್ಲಿ ಭೇಟಿಮಾಡುವರು. ಪಠ್ಯೇತರ ವಿಷಯಗಳ ಬಗ್ಗೆ ಚರ್ಚೆ ವಾರೊಕ್ಕೊಬ್ಬರ ಮನೆಗೆ ಭೇಟಿ. ವಿದ್ಯಾರ್ಥಿಯ ಬಗ್ಗೆ ಆತನ ಹಿರಿಯರೊಂದಿಗೆ ಭೇಟಿ. ಹೀಗೆ ಆತ್ಮೀಯತೆ ಬೆಳೆಯುವುದು. ಇದು ಹೃದಯ ಪರಿವರ್ತನೆಗೆ ಕಾರಣವಾಗುತ್ತದೆ. ಇದಕ್ಕೆ ಒಂದು ನಿದರ್ಶನವನ್ನು ಕೊಡುತ್ತಾರೆ. ರಮೇಶ್‌ಬಾಬು ಚೂಟಿಯಾದ ಹುಡುಗ. ಈತನ ಮನೆಗೆ ಪ್ರಿನ್ಸಿಪಾಲರ ಹಠಾತ್ ಭೇಟಿ. ಆತನ ತಾಯಿಯೊಂದಿಗೆ ಪ್ರಸ್ತಾಪ. ತಾಯಿ–ಮಗ ಈರ್ವರೂ ಇತ್ತ ಭರವಸೆಯ ಪತ್ರ ಪಡೆದ ನಂತರವೇ ಅವರ ಆತಿಥ್ಯವನ್ನು ಪ್ರಿನ್ಸಿಪಾಲರು ಸ್ವೀಕರಿಸಿದ್ದು. ಅಂದಿನಿಂದ ತನ್ನ ಎಲ್ಲ ಚಟುವಟಿಕೆಗಳನ್ನು ಕ್ರಮಗೊಳಿಸಿಕೊಂಡ ಆತನ ಭಾವಚಿತ್ರವನ್ನು ಕಾಲೇಜಿನ ವಾರ್ಷಿಕ ಪತ್ರಿಕೆಯಲ್ಲಿ ಅಭಿಮಾನದಿಂದ ತೋರಿಸಿದರು ಪ್ರಿನ್ಸಿಪಾಲರು. ಇಷ್ಟಾದರೂ, ತಮ್ಮ ಮಕ್ಕಳ ಬಗ್ಗೆ ಕಿಂಚಿತ್ತು ಆಸ್ಥೆ ವಹಿಸದ ಪೋಷಕರಿರುವುದಾಗಿ ವಿಷಾದದಿಂದ ಹೇಳಿದರು.

ಶಿಕ್ಷಕರ ಸಹಕಾರ

ಕಾಲೇಜಿನ ಛಾವಣಿ ನಿಲ್ಲಲು ಶಿಕ್ಷಕರು ಆಧಾರ ಕಂಬಗಳು. ಇವರ ಸಹಕಾರ ಸಿಗುತ್ತಿದೆ ಎಂದು ತೃಪ್ತಿಯನ್ನು ವ್ಯಕ್ತಪಡಿಸಿದ ಪ್ರಿನ್ಸಿಪಾಲರು ಹೆಚ್ಚಿನ ಸಹಕಾರದ ಅಗತ್ಯ ಅಧಿಕವಾಗಿದೆ ಎಂದು ಒತ್ತಿ ಹೇಳಿದರು. ರಾಜ್ಯದ ಎಲ್ಲಾ ಕಡೆಗಳಲ್ಲಿನ ಶಿಕ್ಷಕರ ಬಗೆಗೂ ಪ್ರಸ್ತಾಪಿಸುತ್ತಾ, ಶಿಕ್ಷಕ ತಾನು ಬೋಧನೆಯ ವೃತ್ತಿಯಲ್ಲಿ ಮಾತ್ರ ತನ್ನ ಪೂರ್ಣ ಕಾಲವನ್ನು ವಿನಿಯೋಗಿಸಬೇಕೆಂಬ ಮನೋಭಾವ ಬೆಳೆಯಬೇಕಾಗಿದೆ ಎಂದರು. ಯಾವುದೇ ಸಂದರ್ಭದಲ್ಲಿ ಶಿಕ್ಷಕರು ಬೇರೆಡೆಗಳಲ್ಲಿ ಅರ್ಧಕಾಲಿಕ ವೃತ್ತಿಗಳನ್ನು ಹೊಂದಿರಬಾರದೆಂದು ಅವರ ಅಭಿಪ್ರಾಯವಾಗಿತ್ತು.

ಗೋಪ್ಯ ಪರೀಕ್ಷೆಗಳು ಬೇಡ

ಕಲಿಯುತ್ತಿರುವ ವಿದ್ಯಾರ್ಥಿಯ ಪ್ರತಿ ಹಂತದಲ್ಲೂ ಪರೀಕ್ಷಿಸಲ್ಪಡಬೇಕು, ಪರೀಕ್ಷೆಗಳು ಮೇಧಾವಿಯ ಒಂದು ಅಂಗ. ಆದರೆ ಪರೀಕ್ಷೆಗಳು ರಹಸ್ಯವಾಗಿಯೇ ಇರಬೇಕಾದ ಆಗತ್ಯವಿಲ್ಲ. ಬಹಿರಂಗವಾಗಿ ಜರುಗಬೇಕು. ಮೌಲ್ಯೀಕರಣದ ನಂತರ ಉತ್ತರಪತ್ರಿಕೆಗಳು ಆಯಾ ವಿದ್ಯಾರ್ಥಿಗಳಿಗೆ ದೊರಕುವಂತಾಗಬೇಕು. ಇದು ಪರೀಕ್ಷೆಗಳ ಬಗ್ಗೆ ಪ್ರಿನ್ಸಿಪಾಲರ ಧೋರಣೆ. ಹೀಗಿದ್ದಲ್ಲಿ Internal Assessment ಬಗ್ಗೆ ವಿದ್ಯಾರ್ಥಿಗಳು ತಕರಾರು ಮಾಡುತ್ತಿರಲಿಲ್ಲ ಎನ್ನುತ್ತಾರವರು. ಕಾಪಿ ಮಾಡುವುದು ದುಷ್ಟ ಹವ್ಯಾಸ. ಇದಕ್ಕೆ ಅವರ ಪರಿಹಾರ Knowledge cannot be Stolen ಎಂಬ ಅಂಶವನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಡುವುದು.

ಮಹಿಳೆಯರ ಕಾಲೇಜಾಗಿ

ಈ ಸಾಲಿನಿಂದ ಮಹಿಳೆಯರ ಕಾಲೇಜಾಗಿ ಪರಿವರ್ತಿಸಿಕೊಂಡು ಬರಲಾಗುತ್ತಿದೆಯೆಂದು ಪ್ರಿನ್ಸಿಪಾಲರು ತಿಳಿಸಿದರು. ಕಾಲೇಜು ವಿದ್ಯಾಭ್ಯಾಸಕ್ಕೆ ಪುರುಷ ವಿದ್ಯಾರ್ಥಿಗಳಿಂದ ವಿಶೇಷವಾದ ಬೇಡಿಕೆ ಇರುವುದಾಗಿಯೂ, ಹಾಲಿ ನೆರೆಹೊರೆಯ ಜಿಲ್ಲೆಗಳಿಂದಲೂ ಈ ಕಾಲೇಜಿಗೆ ಬರುತ್ತಿರುವುದಾಗಿಯೂ ತಿಳಿಸಿ ಈ ಪರಿವರ್ತನೆಯಿಂದ ಬಹಳ ಮಂದಿಗೆ ತೊಂದರೆಯಾಗಿರುವುದಾಗಿ ವಿವರಿಸಿದರು ಎಲ್ಲಾ ವಿಷಯಗಳಲ್ಲಿ ಪೂರ್ಣವಾಗಿ ಉತ್ತೇಜನ ನೀಡುತ್ತಿರುವ ಆಡಳಿತ ವರ್ಗವನ್ನು ಸ್ಮರಿಸಿ, ಪರಿವರ್ತನೆಯಿಂದಾಗತಕ್ಕ ತೊಡಕುಗಳನ್ನು ಅವರ ಗಮನಕ್ಕೆ ತರುವುದಾಗಿಯೂ, ತಮ್ಮ ನಿರ್ಧಾರವನ್ನು ಬದಲಿಸುವಂತೆ ಒತ್ತಾಯಿಸುವುದಾಗಿಯೂ ಅಭಿಪ್ರಾಯಪಟ್ಟರು.

ಅಭಿವೃದ್ಧಿ ಸಮಿತಿ ಬಗ್ಗೆ ಆಕ್ಷೇಪಣೆ

ಪ್ರಾರಂಭದಿಂದಲೂ ಕಾಲೇಜು ಜಿಲ್ಲಾಭಿವೃದ್ಧಿ ಸಮಿತಿಗೆ ಸೇರಿದ ಕಟ್ಟಡದಲ್ಲಿ ನಡೆಯುತ್ತಿದೆ. ಜಿಲ್ಲೆಯಲ್ಲಿನ ಮಕ್ಕಳಿಗೆ ಪ್ರೌಢ ಶಿಕ್ಷಣ ಒದಗಿಸುವ ಮಹೋನ್ನತ ಕಾರ್ಯಕ್ಕಾಗಿ ಮಾಹೆಯಾನ 50 ರೂ. ಗಳ ಬಾಡಿಗೆಯ ಮೇಲೆ ಕಟ್ಟಡಗಳನ್ನು ಈ ಮುಂದೆ ಕೊಡಲಾಗಿದ್ದು, ಇತ್ತೀಚೆಗೆ ಏಕಾಏಕಿ ಜಿಲ್ಲಾಭಿವೃದ್ಧಿ ಸಮಿತಿಯವರು ಮಾಹೆಯಾನ 1000/–ರೂ. ಗಳಿಗೆ ಏರಿಸಿರುವುದಾಗಿ ತಿಳಿಸಿರುವುದನ್ನು ಪ್ರಿನ್ಸಿಪಾಲರು ತೀವ್ರವಾಗಿ ಖಂಡಿಸಿದರು. ಕಾಲೇಜನ್ನು ನಡೆಸುತ್ತಿರುವುದು ಸಾರ್ವಜನಿಕರ ಉಪಯೋಗಕ್ಕಾಗಿ ವಿನಾ ಯಾವ ಲಾಭವು ಆಡಳಿತ ವರ್ಗಕ್ಕಿಲ್ಲ. ಜನಶೋಷಣೆ ಮಾಡುವಂತ ಸಂಸ್ಥೆ ಇದಲ್ಲ. ಧಾರ್ಮಿಕ ಮಹಾಕೇಂದ್ರದ ಆಶ್ರಯದಲ್ಲಿ ಜರುಗುತ್ತಿದೆ. ಬಾಡಿಗೆ ಏರಿಸುವುದು ಸಾಧುವಲ್ಲ ಆದರಲ್ಲೂ ಏಕಾಏಕಿ 50 ರಿಂದ 1000ಕ್ಕೆ ಏರಿಸುವುದು ಖಂಡನೀಯ. ಅಲ್ಲದೇ ಈ ಕಟ್ಟಡಗಳನ್ನು ಸಮಿತಿಯವರು ಸಧ್ಯದಲ್ಲಿ ಇದಕ್ಕೂ ಉತ್ತಮತರ ಉದ್ದೇಶಕ್ಕಾಗಿ ಬಳಸಲಾಗುತ್ತಿಲ್ಲ. ಇತ್ಯಾದಿ ಅಕ್ಷೇಪಿಸಿದ ಪ್ರಿನ್ಸಿಪಾಲರು ಸಮಿತಿಯು ಸಮಾವೇಶಗೊಂಡಾಗ ಖುದ್ದಾಗಿ ಹಾಜರಿದ್ದು ಈ ವಿಷಯವನ್ನು ಸಮರ್ಥಿಸಬೇಕೆಂಬ ತಮ್ಮ ಅಪೇಕ್ಷೆಯನ್ನೂ ವ್ಯಕ್ತಪಡಿಸಿದರು.

ನಿಲಯಗಳ ಸುಧಾರಣೆ

ಕಾಲೇಜಿನ ವಿದ್ಯಾರ್ಥಿಗಳ ಪೈಕಿ ನಿಲಯಗಳಲ್ಲಿ ವಾಸಿಸುವ ವಿದ್ಯಾರ್ಥಿಗಳೂ ಹೆಚ್ಚಾಗಿದ್ದಾರೆ. ಹಲವು ನಿಲಯಗಳನ್ನು ವೀಕ್ಷಿಸಿರುವ ಅಲ್ಲಿನ ವಿದ್ಯಮಾನಗಳನ್ನು ತಿಳಿದುಕೊಂಡಿರುವ ಶ್ರೀಯುತ ಪಾಲಸ್‌ರವರು ನಿಲಯಗಳಲ್ಲಿ ಆಗಬೇಕಾದ ಅವಶ್ಯಕ ಸುಧಾರಣೆಗಳ ಬಗ್ಗೆ ವರದಿಯೊಂದನ್ನು ತಯಾರ್ಮಾಡಿ ಜಿಲ್ಲಾಧಿಕಾಗಳಿಗೆ ಕಳುಹಿಸಿರುವುದಾಗಿ ಹೇಳಿದರು. ವರದಿಯಲ್ಲಿ ಆರೋಗ್ಯದ ಬಗ್ಗೆ ಹೆಚ್ಚಿನ ಸೌಲಭ್ಯಗಳನ್ನು ವಿದ್ಯಾರ್ಥಿ-ನಿಲಯಗಳು ಒದಗಿಸಬೇಕೆಂದು ಒತ್ತಾಯಿಸಿದ್ದಾರೆ.

ಎನ್. ಎಸ್. ಎಸ್.

National Service Scheme — ರಾಷ್ಟ್ರೀಯ ಸೇವಾ ಯೋಜನೆ. ವಿದ್ಯಾರ್ಥಿಗಳಲ್ಲಿ ಸಮಾಜ ಸೇವೆಯ ಪ್ರಜ್ಞೆಯನ್ನು ಮೂಡಿಸುವುದು ಇದರ ಮುಖ್ಯ ಗುರಿ. 1973ರಿಂದಲೂ ಈ ಕಾಲೇಜಿನಲ್ಲಿದೆ. ಇಂದು 75 ಸ್ವಯಂ ಸೇವಕ ವಿದ್ಯಾರ್ಥಿಗಳು ಇದ್ದಾರೆ. ಶ್ರೀ ಹೆಚ್. ಎಸ್. ಸಿದ್ಧಲಿಂಗಸ್ವಾಮಿ ಇದರ ಶಿಕ್ಷಕ ಮುಂದಾಳು. ಉತ್ಸಾಹೀ ಮಾರ್ಗದರ್ಶನ ರಕ್ತದಾನಿಗಳ ಗುಂಪು ಇದೆ. ತುಮಕೂರಿನ ಆಸ್ಪತ್ರೆಯಲ್ಲಿ ಸಾವಿನ ದವಡೆಯಲ್ಲಿದ್ದ ರೋಗಿಯೊಬ್ಬನನ್ನು ಇಬ್ಬರು ಸ್ವಯಂ ಸೇವಕರು ರಕ್ತದಾನ ಮಾಡಿ ಉಳಿಸಿದ ಘಟನೆ ಸ್ವತಃ ಸಂದರ್ಶನಕಾರರ ಇದುರಿನಲ್ಲಿ ನಡೆಯಿತು, ಅಲ್ಲದೆ ಕಾಲೇಜಿನ ಆವರಣ-ಕ್ರಿಡಾಂಗಣ ಇತ್ಯಾದಿಗಳನ್ನು ಸ್ವಚ್ಛಗೊಳಿಸುತ್ತಾರೆ. ಸಮೀಪದ ಗ್ರಾಮ ಹರಳೂರಿನಲ್ಲಿ ಎಂಟು ದಿನಗಳು ಸ್ವಯಂ ಸೇವಕರು ಬಿಡಾರ ಹೂಡಿ ರಸ್ತೆಗಳು, ಬಾವಿಗಳು, ಚರಂಡಿಗಳು ಇತ್ಯಾದಿ ದುರಸ್ತಿ ಕಾರ್ಯಗಳನ್ನು ನೆರವೇರಿಸಿದ್ದಾರೆ. ಅಲ್ಲಿನ ಜನತೆಗೆ ನೈರ್ಮಲ್ಯ ಹಾಗೂ ಆರೋಗ್ಯದ ಬಗ್ಗೆ ಸೂಕ್ತ ತಿಳುವಳಿಕೆ ನೀಡಿದ್ದಾರೆ.

ನಿಮಗೆ ಯಾವುದು ಸೂಕ್ತ ? ಆಯ್ದುಕೊಳ್ಳಿ ! ಆರಂಭಿಸಿರಿ !!

ಸುಪ್ರಸಿದ್ಧ ಸುಕ್ಷೇತ್ರ ಸಿದ್ಧಗಂಗಾ. ಇಲ್ಲಿ ಎಡೆಬಿಡದೆ ನಡೆಯುತ್ತಿರುವ ತ್ರಿವಿಧ ದಾಸೋಹಗಳು ಎಲ್ಲೆಲ್ಲೂ ಜನಜನಿತ. ಸುಮಾರು ದಶಕಗಳ ಸಾರ್ವಜನಿಕ ಸೇವೆ ಎಲ್ಲರನ್ನೂ ಆಕರ್ಷಿಸಿದೆ. ಅವರ ಮೆಚ್ಚುಗೆಯನ್ನು ಪಡೆದಿದೆ.

ಮೆಚ್ಚಿದ ಮಹನೀಯರು ನಿಂತು ಬೆಂಬಲಿಸುತ್ತಿದ್ದಾರೆ. ಕೊಡುಗೈ ದೊರೆಗಳಾಗಿ ನೀಡುತ್ತಿದ್ದಾರೆ. ಅನೇಕರು ಅನೇಕ ವಿಧಗಳಲ್ಲಿ ಈ ಬೃಹತ್ಪ್ರಮಾಣದ ಮಹತ್ಕಾರ್ಯಕ್ಕೆ ನೆರವಾಗುತ್ತಿದ್ದಾರೆ. **"ಸಾರ್ವಜನಿಕರ ನೆರವೇ ಸಂಸ್ಥೆಯ ಮಹಾನಿಧಿ"** ಎಂಬುದಾಗಿ ಶ್ರೀ ಶ್ರೀ ಗಳವರೇ ಸಾರಿಸಾರಿ ಹೇಳಿದ್ದಾರೆ. ದಾನಿಗಳ ದಾನ ಪವಿತ್ರ ಪಾತ್ರತ್ವವನ್ನು ಇಲ್ಲಿ ಹೊಂದುತ್ತದೆ. ಈ ಮಹಾಶಯರುಗಳಿಗೆ 'ಸಿದ್ಧಗಂಗಾ' ತುಂಬುಹೃದಯದ ಧನ್ಯವಾದಗಳನ್ನು ಅರ್ಪಿಸುತ್ತದೆ.

ಧಾನ್ಯ ಸಂಗ್ರಹಣೆ:

— ಪ್ರತಿ ವರ್ಷ ಸುಗ್ಗಿಯಲ್ಲಿ ಇಂತಿಷ್ಟು ಧಾನ್ಯ ಶ್ರೀ ಕ್ಷೇತ್ರಕ್ಕೆ ಮುಡುಪಾಗಿಡಿ.
— ನೀವು ಬಂದಾಗ ತಂದು ಅರ್ಪಿಸಿರಿ, ಅಥವಾ ಕ್ಷೇತ್ರದ ಪ್ರತಿನಿಧಿಗಳು ಬಂದಾಗ ಒಪ್ಪಿಸಿರಿ.
— ನೀವು ನೀಡಿದ ತೆನೆಗಳು ಕೂಡಿ ರಾಶಿಯಾಗಿ ದಾಸೋಹಕ್ಕೆ ವಿನಿಯೋಗವಾಗಲಿ.

ಧನ ಸಹಾಯ:

— ಪ್ರತಿ ತಿಂಗಳೂ ಯಥಾಶಕ್ತಿ ನಿಮ್ಮ ಕಾಣಿಕೆ ಕಳಿಸಿರಿ.
— ನಿಮ್ಮ ಖಾತೆ ಇರುವ ಬ್ಯಾಂಕಿನಲ್ಲಿ ಶ್ರೀ ಕ್ಷೇತ್ರದ ಖಾತೆ ಇರುತ್ತೆ.
— ಪ್ರತಿ ತಿಂಗಳು ನಿಮ್ಮ ಖಾತೆಯಿಂದ ಶ್ರೀಗಳವರ ಖಾತೆಗೆ ವರ್ಗಾಯಿಸಲು ಬ್ಯಾಂಕ್ ಮೇನೇಜರ್‌ರವರಿಗೆ ಒಂದು ಪತ್ರ ಬರೆಯಿರಿ.
— ನಿಮಗೆ ಶ್ರಮವಿಲ್ಲದೆ ನಿಮ್ಮ ಕಾಣಿಕೆ ಸಂದಾಯವಾಗುತ್ತದೆ.
— ವರ್ಷಕ್ಕೊಮ್ಮೆ ನಿಮ್ಮಿಂದ ಸಂದಾಯವಾದ ಒಟ್ಟು ಕಾಣಿಕೆಯ ಬಗ್ಗೆ ಪತ್ರ ಬರುತ್ತೆ.

ಕೂಡಿಟ್ಟು ಕಳುಹಿಸಿರಿ:

— ಒಂದೇ ಬಾರಿಗೆ ಇಂತಿಷ್ಟೆಂದು ದಾನ ನೀಡುವುದು ಹಲವರಿಗೆ ಅಸಾಧ್ಯ.
— ಹಾಗಿದ್ದಲ್ಲಿ ಶ್ರೀ ಕ್ಷೇತ್ರದ ಒಂದು ಹುಂಡಿಯನ್ನು ನಿಮ್ಮ ಮನೆಯಲ್ಲಿಡಿರಿ.
— ನಿತ್ಯ ಎಷ್ಟು ಸಾಧ್ಯವೋ ಅಷ್ಟನ್ನು ಹಾಕಿ ವರ್ಷಕ್ಕೊಮ್ಮೆ ಶ್ರೀ ಮಠಕ್ಕೆ ಕಳಿಸಿರಿ.

ಯಾವುದೇ ಹಣ ಕಳುಹಿಸುವವರು, ಎಂ. ಒ., ಬ್ಯಾಂಕ್ ಡ್ರಾಫ್ಟ್ ಅಥವಾ ಪೋಸ್ಟಲ್ ಆರ್ಡರುಗಳನ್ನು– **ಶ್ರೀ ಶ್ರೀ ಶಿವಕುಮಾರಸ್ವಾಮಿಗಳು,** ಶ್ರೀಸಿದ್ಧಗಂಗಾಮಠ, ತುಮಕೂರು ಜಿಲ್ಲಾ-572131 ಇವರಿಗೇ ನೇರವಾಗಿ ಕಳುಹಿಸಬೇಕು.

ಸಹಸ್ರಾರು ಬಡಮಕ್ಕಳ ಆಶ್ರಯ ಕೇಂದ್ರ "ಸಿದ್ಧಗಂಗಾ". ಇಲ್ಲಿಗೆ ನೀಡಿದ ಉದಾರ ಹೃದಯದ ನಿಮ್ಮದಾನ ನಿತ್ಯದಾಸೋಹಕ್ಕೆ ವಿನಿಯೋಗವಾಗುತ್ತದೆ. ನೀಡಿರಿ ನಿತ್ಯ ಸಂತೋಷವನ್ನು ಹೊಂದಿರಿ.

ಭಕ್ತ ಮಂಡಲಿ,
ಶ್ರೀ ಸಿದ್ಧಗಂಗಾ ಕ್ಷೇತ್ರ

ಒಂದು ಸ್ಪಷ್ಟನೆ

ನೀವೂ ಹೀಗೆ ಭಾವಿಸಿರುವಿರಾ ? ಹಾಗಿದ್ದಲ್ಲಿ ನಿಜಾಂಶ ತಿಳಿಯಿರಿ

ಎಲ್ಲಾ ಖಾಸಗಿ ಅನಾಥಾಲಯಗಳನ್ನು ಒಟ್ಟಾಗಿಯೇ ಉದ್ದೇಶಿಸಿ, ಮಾನ್ಯ ವಿದ್ಯಾಮಂತ್ರಿಗಳು ವಿಧಾನ ಸಭೆಯಲ್ಲಿ ಅತ್ಯಂತ ಲಘುವಾಗಿ ಮಾತನಾಡಿದ್ದನ್ನು ಗಮನಿಸಿದ ಪೂಜ್ಯ ಶ್ರೀಗಳವರು, ತಮ್ಮ ನಿಸ್ವಾರ್ಥ ಸುಮಾರು ದಶಕಗಳ ಸಾರ್ವಜನಿಕ ಸೇವೆಯನ್ನು ಗುರುತಿಸಲಾಗದ ಸಚಿವರ ಮನೋಭಾವನೆಯನ್ನು ಕಂಡು ಬೇಸರಗೊಂಡರು. ಕೂಡಲೇ, 1–6–74 ರಿಂದ ಸರ್ಕಾರ ನೀಡುತ್ತಿದ್ದ ಅನುದಾನವನ್ನು ನಿರಾಕರಿಸಿದರು. ಸುಮಾರು 800 ವಿದ್ಯಾರ್ಥಿಗಳನ್ನು ಕಡಿಮೆ ಮಾಡಲಾಯಿತು. ಕಳೆದ ವರ್ಷ 3800 ವಿದ್ಯಾರ್ಥಿಗಳಿದ್ದರು. ಹಾಲಿ 3000 ವಿದ್ಯಾರ್ಥಿಗಳಿರುತ್ತಾರೆ.

ಕಡಿಮೆಯಾದ 800 ವಿದ್ಯಾರ್ಥಿಗಳು ಲಿಂಗಾಯಿತೇತರರು ಮಾತ್ರವೆಂಬುದಾಗಿ ಹಲವು ಮಂದಿ ಸ್ವಾರ್ಥ ಸಾಧಕರು ಪ್ರಚಾರವೆಸಗಿದ್ದಾರೆ. ವಾಸ್ತವಾಂಶ ಅರಿಯಲವಕಾಶವಿಲ್ಲದ ಹಲವಾರು ಮಂದಿ ಇದನ್ನು ನಂಬಿದ್ದಾರೆ. ವಿಶ್ವಕಲ್ಯಾಣವನ್ನು ಬಯಸುವ ಶ್ರೀಗಳವರು ಎಂದಿಗೂ ಇಂತಹ ಪ್ರಸಂಗಗಳಿಗೆ ಎಡೆಕೊಡರು. ಇದನ್ನು ಸಹಿಸರು. ಕಡಿಮೆಯಾದ ಮಕ್ಕಳಲ್ಲಿ ಲಿಂಗಾಯಿತರು ಶೇಕಡ 45 ಭಾಗವಿದ್ದಾರೆ. ಇತರೇ ಎಲ್ಲಾ ಕೋಮಿನ ಮಕ್ಕಳೂ ಸೇರಿದ್ದಾರೆ. ತರಗತಿಗಳನ್ನಯ ಪರಿಗಣಿಸಲಾಗಿದೆಯೇ ವಿನಾ ಜಾತಿಯ ಆಧಾರದ ಮೇಲಲ್ಲ. ಈಗಲೂ ಶ್ರೀ ಕ್ಷೇತ್ರದಲ್ಲಿ ಒಟ್ಟು **ಐವತ್ತಮೂರು ಕೋಮಿನ ವಿದ್ಯಾರ್ಥಿಗಳು ಆಶ್ರಯ ಹೊಂದಿದ್ದಾರೆ.**

ಶ್ರೀ ಕ್ಷೇತ್ರದಲ್ಲಿ ನಡೆಯುತ್ತಿದ್ದ ಡಿ.ಸಿ. ಹಾಸ್ಟೆಲ್‌ನ್ನು ಈ ಸಾಲಿನಲ್ಲಿ ರದ್ದುಗೊಳಿಸಲಾಯಿತು. ಆ ನಿಲಯದಲ್ಲಿದ್ದ ಸುಮಾರು 200 ಡಿ. ಸಿ. ವಿದ್ಯಾರ್ಥಿಗಳನ್ನು ಶ್ರೀ ಕ್ಷೇತ್ರದ ವಿದ್ಯಾರ್ಥಿ ನಿಲಯಕ್ಕೇ ದಾಖಲ್ಮಾಡಿಕೊಳ್ಳಲಾಗಿದೆ. ಯಾರೊಬ್ಬರನ್ನೂ ಹೊರಗೆ ಕಳುಹಿಸಿಲ್ಲ.

ನಿರಾಧಾರವಾದ ಔದಾಸೀನ್ಯದ ಆಕ್ಷೇಪಣೆಗಳಿಗೆ ಎಡೆಯಿರಬಾರದೆಂಬ ಉದ್ದಿಶ್ಯ ಸಹಾಯಧನವನ್ನು ನಿರಾಕರಿಸಿ ಸ್ವಂತ ಜವಾಬ್ದಾರಿಯ ಮೇಲೆ ನಡೆಸುವ ನಿರ್ಧಾರ ಶ್ರೀಗಳವರದು. ಹೊರತಾಗಿ ಯಾವುದೇ ಇತರೆ ಬದಲಾವಣೆಗಳು ಇಲ್ಲ.

ಔಷಧಿ ಕಲಬೆರಕೆ ತಡೆಗಟ್ಟಲು ಹತ್ತು ಸೂತ್ರಗಳು

- ಔಷಧಿಗಳನ್ನು ಅಂಗಡಿಯ ಪ್ರಮುಖ ಸ್ಥಳದಲ್ಲಿ ತೂಗುಹಾಕಿರುವ ಅಧಿಕೃತ ಲೈಸನ್ಸ್ ಪಡೆದ ಮಾರಾಟಗಾರರಿಂದಲೇ ಪಡೆಯಬೇಕು.
- ಕೊಳ್ಳುವ ಔಷಧಿಗಳ ನಿಖರವಾದ ವಿವರಗಳೊಂದಿಗೆ ನಗದು ಪಟ್ಟಿ ಅಥವಾ ಹಣ ಪಾವತಿ ರಶೀತಿಯನ್ನು ಪಡೆಯಬೇಕು.
- ಶೀತ ಸಂಗ್ರಹಣ ಪೆಟ್ಟಿಗೆಯಲ್ಲೇ ಇಡಬೇಕೆಂಬ ನಿರ್ಬಂಧವಿರುವ ಔಷಧಿಗಳು ಸರಿಯಾದ ಶೀತ ಸಂಗ್ರಹಣ ಪೆಟ್ಟಿಗೆಯಲ್ಲಿ ಇರುವ ಬಗ್ಗೆ ಖಾತ್ರಿ ಮಾಡಿಕೊಳ್ಳಬೇಕು.
- ಔಷಧಿಗಳ ಪ್ಯಾಕೆಟ್ಟುಗಳ ಮೇಲೆ ಅಥವಾ ಸೀಸೆಗಳ ಮೇಲೆ ಅಂಟಿಸಿರುವ ಹೆಸರಿನ ಪಟ್ಟಿಯ ಮೇಲೆ ಇರುವ ಔಷಧಿ ಬಳಕೆಯ ಕೊನೆಯ ತಾರೀಖನ್ನು ನೋಡಿ ಔಷಧಿಯನ್ನು ಕೊಳ್ಳಬೇಕು.
- ವೈದ್ಯರಿಂದ ಸರಿಯಾದ ಸಲಹಾ ಚೀಟಿಯನ್ನು ತೆಗೆದುಕೊಂಡು ಸೂಕ್ತವಾದ ಔಷಧಿಯನ್ನು ಪಡೆಯಬೇಕು.
- ವೈದ್ಯರ ಸಲಹಾಚೀಟಿ (ರಿಜಿಸ್ಟರ್ಡ್ ವೈದ್ಯರ ಸಲಹಾ ಚೀಟಿ) ಇದ್ದರೆ ಮಾತ್ರ ಕೊಡಬೇಕೆಂಬ ನಿರ್ಬಂಧವಿರುವ ಔಷಧಿಗಳನ್ನು, ವೈದ್ಯರ ಸಲಹಾ ಚೀಟಿ ತೋರಿಸಿದ ನಂತರ ಕೊಂಡು ಮಾರಾಟಗಾರರೊಂದಿಗೆ ಸಹಕರಿಸಬೇಕು.
- **ವೈದ್ಯರ ಸಲಹೆಯಿಲ್ಲದೆ ಸ್ವತಃ ಔಷಧಿ ಬಳಸುವ ಪದ್ಧತಿ ಪ್ರಾಣಕ್ಕೆ ಹಾನಿಕರ.**
- ಖಾಲಿ ಔಷಧಿ ಪ್ಯಾಕೆಟ್ಟುಗಳನ್ನು ಅಥವಾ ಸೀಸೆಗಳನ್ನು ಮಾರುವ ಮುನ್ನ ಅವುಗಳ ಮೇಲಿರುವ ಹೆಸರಿನ ಚೀಟಿ ಅಥವಾ ಮತ್ತಾವುದೇ ಗುರುತಿನ ಚೀಟಿಗಳನ್ನು ಹರಿದು ಹಾಕಬೇಕು.
- ಔಷಧಿಗಳ ಬಗ್ಗೆ ಯಾವುದೇ ಅನುಮಾನ ಬಂದರೂ ಕೂಡಲೇ ಹತ್ತಿರದ ಔಷಧಿ ನಿಯಂತ್ರಣ ವಿಭಾಗಾಧಿಕಾರಿ ಅಥವಾ ರಾಜ್ಯದ ಔಷಧಿ ನಿಯಂತ್ರಣಾಧಿಕಾರಿ, ಪ್ಯಾಲೆಸ್ ರಸ್ತೆ, ಪೋಸ್ಟ್ ಬಾಕ್ಸ್ ನಂ. 5377, ಬೆಂಗಳೂರು-1, ಇವರಿಗೆ ತಿಳಿಸಬೇಕು.
- ಔಷಧಿ ನಿಯಂತ್ರಣ ಇಲಾಖೆಯು ನಿಮ್ಮ ಹಿತವನ್ನು ಮತ್ತು ಆರೋಗ್ಯವನ್ನು ರಕ್ಷಿಸಲು ಕೆಲಸ ಮಾಡುತ್ತಿದೆ. ಏಕೆಂದರೆ ನಿಮ್ಮ ಆರೋಗ್ಯ ನಿಮಗಷ್ಟೇ ಅಲ್ಲ ರಾಷ್ಟ್ರಕ್ಕೂ ಅಮೂಲ್ಯವಾಗಿದೆ.

(ಡೈರೆಕ್ಟರ್, ವಾರ್ತಾ ಮತ್ತು ಪ್ರಚಾರ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು, ಇವರಿಂದ ಪ್ರಕಟಿತ)

ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ, ಶ್ರೀ ಸಿದ್ಧಗಂಗಾ ಮಠ.